ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 8 ಸೋಮವಾರ 2023

ಸಂಪುಟ: 44 | ಸಂಚಿಕೆ: 22 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ವಿಧಾನಸಭಾ ಚುನಾವಣೆ 2023
ದಿನಗಣನೆ 2

ಕರ್ನಾಟಕ ನಂಬರ್ ಒನ್ ರಾಜ್ಯವಾಗಬೇಕೆ...

ಬಿಜೆಪಿ ಅಧಿಕಾರಕ್ಕೆ ತನ್ನಿ...

- ರಾಜ್ಯದ ಜನರಲ್ಲಿ ಪ್ರಧಾನಿ ಮೋದಿ ಮನವಿ
- ನಂಜನಗೂಡಲ್ಲಿ ಕೊನೆ ಚುನಾವಣಾ ಪ್ರಚಾರ



ಕಾಂಗ್ರೆಸ್ ದೇಶ ಒಡೆಯಲೆತ್ನಿಸುತ್ತಿದೆ ಹುಷಾರ್... ಹುಷಾರ್... ಹುಷಾರ್...

ಮೈಸೂರು: ಕಾಂಗ್ರೆಸ್ ನಾಯಕರು ದೇಶ ಒಡೆಯಲು ಯತ್ನಿಸಿದ್ದಾರೆ ಎಂದು ಪ್ರಧಾನಿ ಮೋದಿ ಗಂಭೀರ ಆರೋಪ ಮಾಡಿದರು. ಸ್ವಾತಂತ್ರ್ಯ ಪಡೆದಾಗಲೇ ಭಾರತ ಸಾರ್ವಭೌಮ ರಾಷ್ಟ್ರವಾಗಿದೆ. ಆದರೆ ಕಾಂಗ್ರೆಸ್ ನಾಯಕರು ಕರ್ನಾಟಕಕ್ಕೆ ಬಂದು ರಾಜ್ಯದ ಸಾರ್ವಭೌಮತ್ವದ ಬಗ್ಗೆ ಮಾತನ್ನಾಡಿದ್ದಾರೆ. ಕಾಂಗ್ರೆಸ್ ಸಾರ್ವಭೌಮತೆ ವಿಚಾರ ಪ್ರಸ್ತಾಪಿಸುವ ಮೂಲಕ ಕರ್ನಾಟಕವನ್ನು ಭಾರತದಿಂದ ವಿಭಜಿಸುವ ಪ್ರಯತ್ನ ನಡೆಸುತ್ತಿದೆ. ಕರ್ನಾಟಕ ಭಾರತದ ಭಾಗವಲ್ಲ ಎನ್ನುವ ರೀತಿಯಲ್ಲಿ ಬಿಂಬಿಸಲು ಹೊರಟಿದೆ. ▶ 6ನೇ ಪುಟಕ್ಕೆ

ಮೈಸೂರು, ಮೇ 7(ಎಸ್‌ಬಿಡಿ)– ಕರ್ನಾಟಕ ನಂಬರ್ ಒನ್ ರಾಜ್ಯವಾಗಲು ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತನ್ನಿ ಎಂದು ಪ್ರಧಾನಿ ನರೇಂದ್ರ ಮೋದಿ ರಾಜ್ಯದ ಜನರಲ್ಲಿ ಮನವಿ ಮಾಡಿದ್ದಾರೆ.

ವಿಧಾನಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯದ ವಿವಿಧೆಡೆ ಪ್ರಚಾರ ಯಾತ್ರೆ ನಡೆಸಿದ ಪ್ರಧಾನಿ ಮೋದಿ, ನಂಜನಗೂಡು–ಗುಂಡ್ಲುಪೇಟೆ ರಸ್ತೆಯ ಎಲಚಗೆರೆ ಗ್ರಾಮದಲ್ಲಿ ಭಾನುವಾರ ನಡೆದ ಬಿಜೆಪಿ ನವ ಕರ್ನಾಟಕ ಸಂಕಲ್ಪ ಬೃಹತ್ ಸಮಾವೇಶದಲ್ಲಿ ಈ ಬಾರಿಯ ಅಂತಿಮ ಪ್ರಚಾರ ಭಾಷಣ ಮಾಡಿದರು. 'ದಕ್ಷಿಣ ಕಾಶಿ ನಂಜನಗೂಡಿನ ಜನತೆಗೆ ನನ್ನ ನಮಸ್ಕಾರಗಳು' ಎಂದು ಕನ್ನಡದಲ್ಲೇ ಭಾಷಣ ಆರಂಭಿಸಿ, ಭಾಷಣದುದ್ದಕ್ಕೂ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರಲ್ಲದೆ, ಅಭಿವೃದ್ಧಿಗಾಗಿ ಬಿಜೆಪಿ ಬೆಂಬಲಿಸಲು ಕೋರಿದರು.

ಕರ್ನಾಟಕದಲ್ಲಿ ಈ ಬಾರಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಅಭಿವೃದ್ಧಿಯಲ್ಲಿ ನಂಬರ್ ಒನ್ ರಾಜ್ಯವಾಗಲಿದೆ. ಬಿಜೆಪಿಯಿಂದ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯಾಗಲಿದೆ. ಶಿಕ್ಷಣ, ಸ್ಟಾರ್ಟ್ ಅಪ್, ರಸ್ತೆ, ಮೆಟ್ರೋ, ರೈಲು, ಕೈಗಾರಿಕೆ, ಆರೋಗ್ಯ ಹೀಗೆ ಎಲ್ಲಾ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಯಾಗುತ್ತದೆ. ಎಸ್ಸಿ, ಎಸ್ಟಿ, ಓಬಿಸಿ ಸೇರಿದಂತೆ ಎಲ್ಲಾ ಸಮುದಾಯದವರಿಗೆ ಸಕಲ ಸೌಲಭ್ಯಗಳೂ ಸಿಗುತ್ತವೆ. ಮಹಿಳೆಯರು ಮಕ್ಕಳು ಸುರಕ್ಷತೆಯಿಂದ ಇರುತ್ತಾರೆ. ಭಾರತ ಆರ್ಥಿಕ ವ್ಯವಸ್ಥೆಯಲ್ಲಿ 3ನೇ ಸ್ಥಾನದಲ್ಲಿದ್ದು, ನಂಬರ್ ಒನ್ ಆಗುವ ದಿನ ದೂರವಿಲ್ಲ. ಹಾಗೆಯೇ ಕರ್ನಾಟಕವನ್ನೂ ನಂಬರ್ ಒನ್ ಮಾಡುವುದು ಬಿಜೆಪಿಯ ಸಂಕಲ್ಪವಾಗಿದೆ. ಇದು ಸಾಧ್ಯವಾಗಲು ನೀವೆಲ್ಲಾ ಬಿಜೆಪಿಗೆ ಮತ ನೀಡಬೇಕು ಎಂದು ಮೋದಿ ಮನವಿ ಮಾಡಿದರು. ▶ 6ನೇ ಪುಟಕ್ಕೆ

ಕಾಂಗ್ರೆಸ್ ಸೇರ್ಪಡೆ



ಮೈಸೂರಿನ ಅಶೋಕಪುರಂನ ಯುವ ನಾಯಕ ಹಾಗೂ ಡಿ॥ ರಾಕೇಶ್ ಸಿದ್ದರಾಮಯ್ಯನವರ ಒಡನಾಡಿ ಮದನ್ ಅವರು ತಮ್ಮ ಅಪಾರ ಸ್ನೇಹ ಬಳಗದೊಂದಿಗೆ ಮಾಜಿ ಮುಖ್ಯಮಂತ್ರಿ ಹಾಗೂ ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಅವರ ಮುಂದಿನ ರಾಜಕೀಯ ಹಾದಿ ಯಶಸ್ಸಿನತ್ತ ಸಾಗಲಿ ಎಂದು ಹಾರೈಸುವ
– ಶರತ್, ಪರಂಜ್ಯೋತಿ, ಮಹದೇವ್, ದಯಾನಂದ್, ಹಿತೇಶ್



ವರುಣ ಕ್ಷೇತ್ರದಲ್ಲಿ ಸಮಸ್ಯೆಗಳ ಸರಮಾಲೆಯೇ ಇದೆ: ಸೋಮಣ್ಣ



ಮೈಸೂರು, ಮೇ 7(ಎಸ್‌ಪಿಎನ್)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುತ್ತಿರುವ ವರುಣ ಕ್ಷೇತ್ರ ಇಡೀ ರಾಜ್ಯಕ್ಕೆ ಮಾದರಿ ಕ್ಷೇತ್ರ ಆಗಬೇಕಿತ್ತು. ಆದರೆ, ಇಲ್ಲಿ ಸಮಸ್ಯೆಗಳ ಸರಮಾಲೆಯೇ ಇದೆ ಎಂದು ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಎಂದು ಆರೋಪಿಸಿದರು.

ಮೈಸೂರು ತಾಲೂಕಿನ ನಾಡನ ಹಳ್ಳಿಯ ಲಕ್ಷ್ಮಿ ಕಲ್ಯಾಣ ಮಂಟಪದಲ್ಲಿ ವರುಣ ಕ್ಷೇತ್ರದ ಉಪ್ಪಾರ, ಗಾಣಿಗ ಹಾಗೂ ಮಡಿವಾಳ ಸಮಾಜದ ಮುಖಂಡರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಕಳೆದ ಹದಿನೈದು ವರ್ಷಗಳಿಂದ ಮಾಜಿ ಸಿಎಂ ಪ್ರತಿನಿಧಿಸುವ ಕ್ಷೇತ್ರದ ಸಮಸ್ಯೆಗಳ ಸರಮಾಲೆಯನ್ನೇ ಹೊತ್ತುಕೊಂಡಿದೆ. ಮೂಲಸೌಕರ್ಯ ಇರುವ ಸರ್ಕಾರಿ ಆಸ್ಪತ್ರೆ ಇಲ್ಲ. ಪದವಿ ಕಾಲೇಜು ಸ್ಥಾಪನೆಯಾಗಿಲ್ಲ. ಈ ಕ್ಷೇತ್ರ ಮೂರು ತಾಲೂಕಿಗೆ ಸೇರಿಕೊಂಡಿರುವುದರಿಂದ ಕ್ಷೇತ್ರದ ಜನರು ಎಲ್ಲಾ ಕಡೆ ಅಲೆಯುವಂತಾಗಿದೆ ಎಂದು ಕ್ಷೇತ್ರದ ಸಮಸ್ಯೆಯನ್ನು ಎಳೆಎಳೆಯಾಗಿ ಬಿಡಿಸಿದರು.

ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ಸಣ್ಣ ಸಣ್ಣ ಸಮುದಾಯಗಳ ಅಭಿವೃದ್ಧಿಗೆ ಯಾವುದೇ ಪ್ರಯೋಜನವಾಗಿಲ್ಲ. ಹಾಗಾಗಿ ನಿಮ್ಮ ಕ್ಷೇತ್ರದ ಅಭಿವೃದ್ಧಿಗೆ ನನಗೆ ಒಂದು ಭಾರೀ ಅವಕಾಶ ಮಾಡಿಕೊಡಿ. ಎರಡು ವರ್ಷದಲ್ಲಿ ಈ ಕ್ಷೇತ್ರವನ್ನು ಇಡೀ ರಾಜ್ಯದಲ್ಲಿ ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೇ ವರುಣ ಮಂಡಲ ಅಧ್ಯಕ್ಷ ವಿಜಯಕುಮಾರ್, ಗಿರೀಶ್ ಉಪ್ಪಾರ್, ಗಾಣಿಕ ಸಮುದಾಯದ ಮುಖಂಡ ಚಿಕ್ಕಸ್ವಾಮಿ, ಮಹದೇವಶೆಟ್ಟಿ, ಬಿಜೆಪಿ ವರುಣ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ವೆಂಕಟರಮಣ, ವಾಜಮಂಗಲ ವೆಂಕಟೇಶ್ ಸೇರಿದಂತೆ ಇತರರಿದ್ದರು. ಈ ಸಂದರ್ಭ ಹೊಸಕೆಂಪಯ್ಯನ ಹುಂಡಿ ಉಪ್ಪಾರ ಸಮಾಜದ ಅನೇಕ ಯುವಕರು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದರು.

ಚಾಮರಾಜ ಕ್ಷೇತ್ರದ ಎಎಪಿ ಅಭ್ಯರ್ಥಿ ಮಾಲವಿಕ ಗುಬ್ಬಿವಾಣಿ ಪ್ರಚಾರ



ಮೈಸೂರು, ಮೇ 7(ಎಸ್‌ಪಿಎನ್)–ಚಾಮರಾಜ ಕ್ಷೇತ್ರದ ಆಮ್ ಆದ್ಮಿ ಪಾರ್ಟಿ (ಎಎಪಿ) ಅಭ್ಯರ್ಥಿ ಮಾಲವಿಕ ಗುಬ್ಬಿವಾಣಿ ಶನಿವಾರ ರೋಡ್ ಶೋ ನಡೆಸಿದರು.

ಮೈಸೂರು ಹೆಬ್ಬಾಳ್ ವೃತ್ತದಿಂದ ಆರಂಭವಾದ ರೋಡ್ ಶೋ ಬಸವನಗುಡಿ, ಸೂರ್ಯಬೇಕರಿ, ಕೆಆರ್‌ಎಸ್ ರಸ್ತೆ ಸೇರಿದಂತೆ ರಸ್ತೆಗಳಲ್ಲಿ ರಸ್ತೆಗಳಲ್ಲಿ ಸಂಚರಿಸಿ, ಮತಯಾಚಿಸಿದರು. ಈ ವೇಳೆ ಎಎಪಿ ಜಿಲ್ಲಾಧ್ಯಕ್ಷ ರಂಗಯ್ಯ, ಎಎಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷೆ ಉಷಾ ಸಂಪತ್‌ಕುಮಾರ್, ಶಿವಕುಮಾರ್, ಎ.ಎಸ್.ಸತೀಶ್, ಆನಂದ್, ರಾಜ್, ವಿಶ್ವನಾಥ್ ಕುಲಕಣಿ, ಬದ್ರಿ ನಾರಾಯಣ್, ಮತ್ತಿತರರಿದ್ದರು. ಈ ವೇಳೆ ಆಟೋ ಚಾಲಕ ಕೃಷ್ಣ, ಸೆಕ್ಯೂರಿಟಿ ಗಾರ್ಡ್ ಬಸವರಾಜ್, ತರಕಾರಿ ವ್ಯಾಪಾರಿ ಜಯಮ್ಮ, ನಗಾರಿ ದಿನೇಶ್, ಎಎಪಿ ಮಾಧ್ಯಮ ವಿಭಾಗದ ವಿದ್ಯಾರಣ್ಯ ಉಪಸ್ಥಿತರಿದ್ದರು.

ಇಂದು ವಿಶ್ವ ರೆಡ್ ಕ್ರಾಸ್ ದಿನಾಚರಣೆ



ಮೈಸೂರು, ಮೇ 7– (ಮೇ 8)ರಂದು ವಿಶ್ವ ರೆಡ್ ಕ್ರಾಸ್ ದಿನವನ್ನು ಆಚರಿಸಲಾಗುತ್ತಿದ್ದು, ಸಾಂಕ್ರಾಮಿಕ ರೋಗಗಳು, ನೈಸರ್ಗಿಕ ವಿಪತ್ತುಗಳಿಂದ ಪಾರಾಗಲು ಜನರನ್ನು ಪ್ರೇರೇಪಿಸಲು ಅನುಕೂಲವಾಗುವಂತೆ ಮಾನವೀಯರಾಗಿರಿ ಎಂಬ ಧ್ಯೇಯ ವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ಇದು ಸ್ವಯಂ ಪ್ರತಿಕ್ರಿಯೆಯನ್ನು ಉತ್ತೇಜಿಸುತ್ತದೆ. ಬದುಕುಳಿಯಲು ಮತ್ತು ತಂತ್ರಗಳನ್ನು ಕಲಿಯಲು ಯುವಜನತೆಯನ್ನು ಹುರಿದುಂಬಿಸುತ್ತದೆ.

ವಿಶ್ವದಾದ್ಯಂತ ಶಾಂತಿಯುತ ವಾತಾವರಣವನ್ನು ಸೃಷ್ಟಿಸಲು ವಿಶ್ವ ರೆಡ್ ಕ್ರಾಸ್ ದಿನವನ್ನು ಆಚರಿಸಲಾಗುತ್ತದೆ. ರೆಡ್ ಕ್ರಾಸ್ ದಿನವು ಸಾಂಕ್ರಾಮಿಕ ಕಾಯಿಲೆಯಿಂದ ಬಳಲುತ್ತಿರುವ ಜನರ ಸಾವಿನ ಪ್ರಮಾಣವನ್ನು ಕಡಿಮೆ ಮಾಡುವುದರಲ್ಲಿ ಸಹಕರಿಸಿದೆ. ಕೆಲವು ತುರ್ತು ಸಂದರ್ಭದಲ್ಲಿ ವಿಶ್ವ ರೆಡ್‌ಕ್ರಾಸ್ ದಿನವನ್ನು ಪ್ರತಿ ಭದ್ರತೆಯನ್ನು ಒದಗಿಸಲು ದುರ್ಬಲ ಪ್ರದೇಶಗಳ ಜನರನ್ನು ನಿರ್ವಹಿಸಲು ಮತ್ತು ನಿಭಾಯಿಸಲು ಸಹಾಯ ಮಾಡುತ್ತಿದ್ದು, ದುರ್ಬಲ ಪರಿಸ್ಥಿತಿಗಳಲ್ಲಿ, ಅವರು ವಿಪತ್ತುಗಳಿಂದ ಬಳಲುತ್ತಿರುವ ಜನರಿಗೆ ಸಹಾಯ ಮಾಡಲು ಹಲವಾರು ಸಮುದಾಯಗಳನ್ನು ರಚಿಸುತ್ತದೆ. ಸೇನಾಪಡೆಯು ಯಾವುದೇ ಯುದ್ಧದಲ್ಲಿ ಗಾಯಗೊಂಡಾಗ ವೈದ್ಯರು ಅಥವಾ ದಾದಿಯರಿಂದ ಎಲ್ಲಾ ರೀತಿಯ ಸಹಾಯವನ್ನು ನೀಡಲಾಗುತ್ತಿದ್ದು, ಸಂಕಷ್ಟಕ್ಕೆ ಒಳಗಾದ ಜನರಿಗೆ ವಿಶ್ವ ರೆಡ್‌ಕ್ರಾಸ್‌ನಿಂದ ಆರ್ಥಿಕ ಸಹಾಯವನ್ನು ನೀಡಲಾಗುವುದು. ಸ್ವಯಂ ಸೇವಕರು ಅನೇಕ ಚಟುವಟಿಕೆಗಳ ಬಗ್ಗೆ ಜನರಿಗೆ ಅರಿವು ಮೂಡಿಸಲು ರಕ್ತದಾನ ಹಾಗೂ ರಕ್ತಹೀನತೆಯ ಶಿಬಿರಗಳನ್ನು ಆಯೋಜಿಸುತ್ತಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ವೈದ್ಯಕೀಯ ಕಾಲೇಜಿನ ಶಿಕ್ಷಕರ ಸಂಘದ ನೂತನ ಪದಾಧಿಕಾರಿಗಳು



ಮೈಸೂರು,ಮೇ 7–ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶಿಕ್ಷರ ಸಂಘದ ವತಿಯಿಂದ ಕೆ.ಆರ್. ಆಸ್ಪತ್ರೆ ಆವರಣದಲ್ಲಿ ನಡೆದ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ 2023–24ನೇ ಸಾಲಿನ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಡಾ.ಪಿ.ಎಲ್.ಬಸವಣ್ಣ, ಕಾರ್ಯದರ್ಶಿಯಾಗಿ ಡಾ.ಎ.ಮಂಜುಳಾ, ಖಜಾಂಚಿಯಾಗಿ ಡಾ.ಕೆ. ಎಚ್.ಹೇಮಂತ್‌ಕುಮಾರ್, ಉಪಾಧ್ಯಕ್ಷರಾಗಿ ಡಾ.ಎಂ.ಎಂ.ಸುಮಂತ್ ಮತ್ತು ಡಾ.ಎನ್.ಶ್ರೀನಿವಾಸ್ ಮತ್ತು ಜಂಟಿ ಕಾರ್ಯದರ್ಶಿಯಾಗಿ ಡಾ. ಹೆಚ್.ಆರ್. ದಯಾನಂದ್ ಆಯ್ಕೆಯಾಗಿದ್ದಾರೆ.

ಕಾರ್ಯಕಾರಿ ಸಮಿತಿ ಸದಸ್ಯರಾಗಿ ಡಾ.ಆರ್.ಸುಧಾ, ಡಾ.ರಾಜಾಪುರ್ ಪರಶುರಾಮ್, ಡಾ.ಮಹಮದ್ ಇಜುಲ್ ಹಕ್ ಚಂದ್, ಡಾ.ಜಿ.ಆರ್.ಅರುಣ್, ಡಾ. ಎಚ್.ಎ.ಕೃಷ್ಣಮೂರ್ತಿ, ಡಾ.ಶುಭ ಜಯರಾಮ್ ಆಯ್ಕೆಗೊಂಡಿದ್ದಾರೆ.

ಜಯಪುರ ಬಳಿ ಚಿರತೆ ಸೆರೆ



ಮೈಸೂರು, ಮೇ 7– ತಾಲೂಕಿನ ಜಯಪುರ ಬಳಿ ಚಿರತೆಯೊಂದು ಬೋನಿನಲ್ಲಿ ಸೆರೆಯಾಗಿದೆ. ಜಯಪುರ ಹೋಬಳಿ ತಳೂರು ಗ್ರಾಮದ ಸುತ್ತಮುತ್ತ ಚಿರತೆ ಓಡಾಟದ ಬಗ್ಗೆ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಬೋನ್ ಇಟ್ಟು ನಿಗಾ ವಹಿಸಿದ್ದರು. ತಳೂರು ಗ್ರಾಮದ ಜಮೀನಿನಲ್ಲಿ ಇಡಲಾಗಿದ್ದ ಬೋನಿನಲ್ಲಿ ಸುಮಾರು 6 ವರ್ಷದ ಹೆಣ್ಣು ಚಿರತೆ ಸೆರೆಯಾಗಿದ್ದು, ಅದನ್ನು ಅರಣ್ಯ ಪ್ರದೇಶಕ್ಕೆ ಬಿಡಲು ಆರ್‌ಎಫ್‌ಓ ಕೆ.ಸುರೇಂದ್ರ ಹಾಗೂ ಸಿಬ್ಬಂದಿ ಕ್ರಮ ವಹಿಸಿದ್ದಾರೆ.

13 ಬಾರಿ ಅಂಬಾರಿ ಹೊತ್ತಿದ್ದ ಬಲರಾಮ ಇನ್ನು ನೆನಪು ಮಾತ್ರ


- ಜಂಬೂ ಸವಾರಿಯಲ್ಲಿ ಎಲ್ಲರ ಗಮನ ಸೆಳೆದಿದ್ದ ಗಜರಾಜ ಇನ್ನಿಲ್ಲ
- ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸೇರಿ ಹಲವರು ಭಾಗಿ
- ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳಿಂದ ಗೌರವ ಸಮರ್ಪಣೆ



ಜಂಬೂಸವಾರಿಯಲ್ಲಿ ಸಾಗಲು ಅಲಂಕಾರಗೊಂಡ ಬಲರಾಮ



ನಾಡಿನ ಅಧಿದೇವತೆ ಚಾಮುಂಡೇಶ್ವರಿ ದೇವಿಯ ಚಿನ್ನದ ಅಂಬಾರಿ ಹೊತ್ತು ಗಜ ಗಾಂಭೀರ್ಯದೊಂದಿಗೆ ಜಂಬೂ ಸವಾರಿಯಲ್ಲಿ ಸಾಗುತ್ತಿರುವ ಬಲರಾಮ.



ಬಲರಾಮನೊಂದಿಗೆ ರಾಜವಂಶಸ್ಥೆ ವಿಶಾಲಾಕ್ಷಿ ದೇವಿಯವರು.

ಮೈಸೂರು, ಮೇ 7(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಸತತ 13 ಬಾರಿ ಚಿನ್ನದ ಅಂಬಾರಿ ಹೊತ್ತು ಯಶಸ್ವಿಯಾಗಿ ಸಾಗಿ ಲಕ್ಷಾಂತರ ಮಂದಿಯ ಪ್ರೀತಿ, ಗೌರವಕ್ಕೆ ಪಾತ್ರವಾಗಿದ್ದ ಬಲರಾಮ (67) ಭಾನುವಾರ ಕೊನೆಯುಸಿರುಳೆದಿದ್ದು, ಸೋಮವಾರ ಸಕಲ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಗುತ್ತದೆ.

ಹುಣಸೂರು ತಾಲೂಕಿನ ಭೀಮನಕಟ್ಟೆ ಆನೆ ಕ್ಯಾಂಪ್‌ನಲ್ಲಿ ಆಶ್ರಯ ಪಡೆದಿದ್ದ ಬಲರಾಮ ಕಳೆದ ಒಂದು ತಿಂಗಳಿಂದ ತೀವ್ರ ಅನಾರೋಗ್ಯಕ್ಕೆ ತುತ್ತಾಗಿತ್ತು. ಇಲಾಖೆ ಪಶುವೈದ್ಯರು ಸತತ ಪ್ರಯತ್ನ ನಡೆಸಿದ್ದರೂ ಚಿಕಿತ್ಸೆ ಫಲಕಾರಿಯಾಗದೇ ಭಾನುವಾರ ಬೆಳಗ್ಗೆ ಕುಸಿದು ಬಿದ್ದಿತ್ತು. ಸಂಜೆ ವೇಳೆ ಉಸಿರು ನಿಲ್ಲಿಸಿದ ಬಲರಾಮ ಬಾರದ ಲೋಕಕ್ಕೆ ಪ್ರಯಾಣ ಬೆಳೆಸಿದ್ದಾನೆ. ಬಲರಾಮನ ಸಾವಿನ ಸುದ್ದಿ ಅಪಾರ ಸಂಖ್ಯೆ ಪ್ರಾಣಿ ಪ್ರಿಯರಿಗೆ ಅತೀವ ದುಃಖವನ್ನುಂಟು ಮಾಡಿದೆ. ಬಲರಾಮ ಇನ್ನು ನೆನಪು ಮಾತ್ರ.

ಅತ್ಯಂತ ಸೌಮ್ಯ ಸ್ವಭಾವಿಯಾಗಿದ್ದ ಬಲರಾಮ ಅರಣ್ಯ ಇಲಾಖೆ ಅಧಿಕಾರಿಗಳು ಮಾತ್ರವಲ್ಲದೇ, ಸಾರ್ವಜನಿಕರ ಗಮನ ಸೆಳೆದಿತ್ತು. 1999ರಿಂದ 2011ರವರೆಗೆ ಸತತ 13 ಬಾರಿ ಚಿನ್ನದ ಅಂಬಾರಿಯನ್ನು ನಿರಾಯಾಸವಾಗಿ ಅರಮನೆ ಆವರಣದಿಂದ ಬನ್ನಿಮಂಟಪದವರೆಗೂ ಹೊತ್ತು, ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. 60 ವರ್ಷ ದಾಟಿದ ಹಿನ್ನೆಲೆಯಲ್ಲಿ 2012ರಿಂದ ಅಂಬಾರಿ ಹೊರುವ ಜವಾಬ್ದಾರಿಯಿಂದ ನಿವೃತ್ತಿಯಾಗಿ ಐದಾರು ವರ್ಷ ನಿಶಾನೆ ಆನೆಯಾಗಿ ದಸರಾ ಮೆರವಣಿಗೆಯಲ್ಲಿ ಸಾಗಿತ್ತು ವಯೋಸಹಜ ಸಮಸ್ಯೆಯಿಂದಾಗಿ 2020ರಿಂದ ಬಲರಾಮ ಆನೆಯನ್ನು ದಸರಾ ಮಹೋತ್ಸವದಿಂದ ದೂರ ಇಡಲಾಗಿತ್ತು. ಆದರೆ, ಇದೀಗ ಆನೆ ಕ್ಯಾಂಪ್‌ನಲ್ಲಿ ಇಹಲೋಕ ತ್ಯಜಿಸಿ ದಸರಾ ಆನೆ ಪಯಣವನ್ನು ಮುಗಿಸಿದೆ.

ಇಂದು ಬಲರಾಮನ ಅಂತ್ಯಕ್ರಿಯೆ



ನಾಡಹಬ್ಬ ದಸರಾ ಮಹೋತ್ಸವದಲ್ಲಿ 13 ಬಾರಿ ಚಿನ್ನದ ಅಂಬಾರಿ ಹೊತ್ತಿದ್ದ ಬಲರಾಮನ ಅಂತ್ಯಕ್ರಿಯೆ ಸೋಮವಾರ (ಏಪ್ರಿಲ್ 8)ರಂದು ಬೆಳಗ್ಗೆ 9.30ರಿಂದ 11 ಗಂಟೆಯೊಳಗೆ ನೆರವೇರಲಿದೆ. ಶವಪರೀಕ್ಷೆ ಬಳಿಕ ಸಕಲ ಸರ್ಕಾರಿ ಗೌರವದೊಂದಿಗೆ ನಡೆಸಲಾಗುತ್ತದೆ. ಈ ವೇಳೆ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು, ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಪಾಲ್ಗೊಂಡು ಗೌರವ ಸಲ್ಲಿಸಲಿದ್ದಾರೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಬಲರಾಮ ನಡೆದು ಬಂದು ಹಾದಿ: ದಸರಾ ಆನೆಗಳಲ್ಲಿಯೇ ಅತ್ಯಂತ ಸೌಮ್ಯ ಸ್ವಭಾವವುಳ್ಳವನಾಗಿರುವ ಬಲರಾಮ ಕಳೆದ 25 ವರ್ಷಗಳಿಗೂ ಮಿಗಿಲಾಗಿ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿರುವ ದಾಖಲೆ ಹೊಂದಿದೆ. ದ್ರೋಣ ಆನೆಯ ಅಕಾಲಿಕ ಸಾವಿನ ಬಳಿಕ ಚಿನ್ನದ ಅಂಬಾರಿ ಹೊರುವ ಜವಾಬ್ದಾರಿ ವಹಿಸಿಕೊಂಡಿತ್ತು. 13 ಬಾರಿ ಯಶಸ್ವಿಯಾಗಿ ತನಗೆ ನೀಡಿದ್ದ ಜವಾಬ್ದಾರಿ ನಿಭಾಯಿಸಿತ್ತು. ಕೊಡಗು ಜಿಲ್ಲೆ ಕಟ್ಟೇಪುರ ಅರಣ್ಯ ಪ್ರದೇಶದಲ್ಲಿ 1978ರಲ್ಲಿ ಸೆರೆ ಹಿಡಿಯಲಾದ ಬಲರಾಮನನ್ನು ಮತ್ತಿಗೋಡು ಆನೆ ಶಿಬಿರದಲ್ಲಿ ಪೋಷಿಸಲಾಗುತಿತ್ತು. ಕಳೆದ ಐದಾರು ವರ್ಷದಿಂದ ಮತ್ತಿಗೂಡು ಆನೆ ಕ್ಯಾಂಪ್ ಸಮೀಪವಿರುವ ಹುಣಸೂರು ತಾಲೂಕಿಗೆ ಒಳಪಡುವ ಭೀಮನಕಟ್ಟೆ ಆನೆ ಕ್ಯಾಂಪ್‌ನಲ್ಲಿ ಪಾಲನೆ ಮಾಡಲಾಗುತ್ತಿತ್ತು.

ಆರೋಗ್ಯ ಕೆಡಿಸಿದ ಮರದ ಕವಲಿನ ತುಂಡು: ಬಲರಾಮನ ಸಾವಿಗೆ ಅನಾರೋಗ್ಯದೊಂದಿಗೆ ಕರುಳು ಬೇನೆಯೂ ಕಾರಣ. ಕಳೆದ ತಿಂಗಳು ಏ.19ರಂದು ಕುಡಿದ ನೀರನ್ನೆಲ್ಲಾ ವಾಂತಿ ಮಾಡಿಕೊಳ್ಳುತ್ತಿದ್ದ ಬಲರಾಮನಿಗೆ ಪರೀಕ್ಷೆ ಮಾಡಿದಾಗ ಗಂಟಲಿನಲ್ಲಿ ಯಾವುದೋ ವಸ್ತು ಸಿಕ್ಕಿ ಹಾಕಿಕೊಂಡಿರುವ ಶಂಕೆ ವ್ಯಕ್ತವಾಗಿತ್ತು. ಈ ವೇಳೆ ಗಂಜಿ ಮಾದರಿಯ ಆಹಾರವನ್ನು ನೀಡಿ ಉಪಚರಿಸಲಾಗಿತ್ತು ಗಂಟಲಿನಲ್ಲಿ ಸಿಲುಕಿದ್ದ ಮರದ ತುಂಡು ಹೊಟ್ಟೆ ಸೇರಿತ್ತು. ಆ ನಂತರ ಹಿಂಭಾಗದಿಂದ (ಗುದದ್ವಾರ) ಹೊಟ್ಟೆಯಲ್ಲಿದ್ದ ಮರದ ತುಂಡನ್ನು ಹೊರಗೆ ತೆಗೆಯಲಾಗಿತ್ತು. ಸೊಪ್ಪು ತಿನ್ನುವ ವೇಳೆ ವೈ ಆಕಾರದ (ಕವಲು) ಮರದ ತುಂಡು ಗಂಟಲಿನಲ್ಲಿ ಸಿಕ್ಕಿಹಾಕೊಂಡಿತ್ತು ಅದು ಹೊಟ್ಟೆಗೆ ಜಾರುವಾಗ ಕರುಳಿಗೆ ಕೆಲ ಕಡೆ ತೂತಾಗಿತ್ತು. ಅದರಿಂದ ರಕ್ತಸ್ರಾವವಾಗಿ ನಿತ್ರಾಣಗೊಳಿಸಿತ್ತು. ಹಾಗಾಗಿ ವಯೋಸಹಜ ಸಮಸ್ಯೆಯೊಂದಿಗೆ ಅನಾರೋಗ್ಯ ಸಮಸ್ಯೆಯಿಂದ ಬಳಲಿ ಮೃತಪಟ್ಟಿದೆ ಎನ್ನಲಾಗಿದೆ.

ಒಂದೇ ಕಣ್ಣಿನಲ್ಲೂ ಯಶಸ್ವಿ ಜೀವನ: ಬಲರಾಮ ಆನೆಯನ್ನು ಸೆರೆ ಹಿಡಿಯುವ ಮುನ್ನವೇ ಕಾಡಾನೆಯೊಂದಿಗೆ ಕಾಳಗಕ್ಕಿಳಿದು ಎಡಭಾಗದ ಕಣ್ಣನ್ನು ಕಳೆದುಕೊಂಡಿತ್ತು. ಒಂದೇ ಕಣ್ಣಿನಲ್ಲೇ 13 ಬಾರಿ ಅಂಬಾರಿ ಹೊತ್ತು ಲಕ್ಷಾಂತರ ಜನರ ಹರ್ಷೋದ್ಗಾರದ ನಡುವೆ ಯಶಸ್ವಿಯಾಗಿ ಸಾಗಿತ್ತು. ಕಳೆದ ಐದಾರು ವರ್ಷದಿಂದ ಬಲಗಣ್ಣು ಮಂಜಾಗಿತ್ತು. ಆದರೂ ಕ್ಯಾಂಪ್‌ನಿಂದ ಕಾಡಿಗೆ ಹೋಗಿ ಮತ್ತೆ ಕ್ಯಾಂಪ್‌ಗೆ ಮರಳುತ್ತಿತ್ತು.

ಒಬ್ಬರಿಗೂ ನೋವುಂಟು ಮಾಡಲಿಲ್ಲ: ಸೆರೆಗೂ ಮುನ್ನ ಕೊಡಗು ಜಿಲ್ಲೆಯ ಕಟ್ಟೇಪುರ ಅರಣ್ಯ ವ್ಯಾಪ್ತಿಯ ಕೆಲ ಗ್ರಾಮಗಳಲ್ಲಿ ಕಾಣಿಸಿಕೊಳ್ಳುತ್ತಿತ್ತು. ಆ ವೇಳೆ ಯಾರ ಮೇಲೂ ದಾಳಿ ಮಾಡಿರಲಿಲ್ಲ. ಸೆರೆ ಸಿಕ್ಕ ಬಳಿಕ ಅತ್ಯಂತ ಮೃಧು ಸ್ವಭಾವಿಯಾಗಿ ಪರಿವರ್ತನೆಯಾದ ಬಲರಾಮ ಜೀವಿತಾವಧಿಯಲ್ಲಿ ಯಾರಿಗೂ ತೊಂದರೆ ಮಾಡಲಿಲ್ಲ. ದಸರಾ ಸಂದರ್ಭದಲ್ಲಿ ಲಕ್ಷಾಂತರ ಮಂದಿ ಜನರು ಬಲರಾಮನೊಂದಿಗೆ ಫೋಟೋ ತೆಗೆಸಿಕೊಂಡಿದ್ದಾರೆ. ಮಕ್ಕಳಾದಿಯಾಗಿ ಯಾರಿಗೂ ನೋವುಂಟು ಮಾಡದೇ ಗಜಗಾಂಭೀರ್ಯ ಮೆರೆದಿದ್ದ.

ಮೆಂಟರ್ ಬಲರಾಮ: ಬಲರಾಮ ತನ್ನ ಕ್ಯಾಂಪ್‌ನಲ್ಲಿದ್ದ ಚಿಕ್ಕ ಆನೆಗಳಿಗೂ ತರಬೇತಿದಾರನಾಗಿದ್ದ. ಅದರಲ್ಲೂ ಭೀಮ ಆನೆ ಸೇರಿದಂತೆ ಕೆಲ ಜ್ಯೂನಿಯರ್ ಆನೆಗಳಿಗೂ ಕೆಲವು ವಿಷಯಗಳ ಬಗ್ಗೆ ಹೇಳಿಕೊಡುವುದರಲ್ಲಿ ನಿಸ್ಸೀಮನಾಗಿದ್ದ. ಚಿಕ್ಕ ಆನೆಗಳನ್ನು ಪ್ರೀತಿಯಿಂದ ಕಾಣುತ್ತಿದ್ದ.



ಮಾವುತ ತಿಮ್ಮ ಅವರ ಅವಳಿ ಮಕ್ಕಳು ಬಲರಾಮನಿಗೆ ಕುಸುರೆ ನೀಡುತ್ತಿರುವುದು.

7 ತಿಂಗಳ ಹಿಂದೆ ಗುಂಡು ಹಾರಿಸಿದ್ದ ಭೂಪ

ವಯೋ ಸಹಜ ಸಮಸ್ಯೆಯಿಂದ ಬಳಲುತ್ತಿದ್ದ ಬಲರಾಮನನ್ನು ಭೀಮನಕಟ್ಟೆ ಕ್ಯಾಂಪ್‌ನಲ್ಲಿಡಲಾಗಿತ್ತು. 2022ರ ಡಿ.14ರಂದು ರಾತ್ರಿ ಕ್ಯಾಂಪ್ ಸಮೀಪ ಇರುವ ಹೊಲದ ಮಾಲೀಕ ಕಾಡಾನೆಯೆಂದು ಭಾವಿಸಿ ಕಾವಲು ಕಾಯಲು ನಿರ್ಮಿಸಿದ್ದ ಅಟ್ಟಣೆ ಮೇಲಿಂದ ಸಮೀಪದಿಂದಲೇ ಬಲರಾಮನ ಮೇಲೆ ಗುಂಡು ಹಾರಿಸಿದ್ದ. ಆದರೆ ಬಲರಾಮನ ಮೈಗೆ 45 ಕಡೆ ಚೆರ್ರಿ ತೂರಿ ಗಾಯವಾಗಿತ್ತು. ಸುಸ್ತಾಗಿ ಬಿದ್ದಿದ್ದ ಬಲರಾಮನನ್ನು ಕ್ಯಾಂಪ್‌ಗೆ ಕರೆತಂದು ಮೆಟಲ್ ಡಿಟೆಕ್ಟರ್ ಮೂಲಕ ದೇಹಹೊಕ್ಕಿದ್ದ ಗುಂಡಿನ ಚೆರ್ರಿಯನ್ನು ಹೊರತೆಗೆಯಲಾಗಿತ್ತು. ಬಳಿಕ ಸೆಪ್ಟಿಕ್ ಆಗದಂತೆ ಚಿಕಿತ್ಸೆ ನೀಡಿದ್ದ ವೈದ್ಯ ಡಾ.ರಮೇಶ್ ಬಲರಾಮನನ್ನು ಗುಣಪಡಿಸಿದ್ದರು.



ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಅವರು ಭಾನುವಾರ ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ತೀರ್ಥರ ಆಶೀರ್ವಾದ ಪಡೆದರು.



ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಪರ ಕುವೆಂಪುನಗರದಲ್ಲಿ ಪಾದಯಾತ್ರೆ ಮೂಲಕ ಮನೆ ಮನೆಗೆ ತೆರಳಿ ಮತ ಯಾಚಿಸಲಾಯಿತು. ಈ ವೇಳೆ ಮೇಯರ್ ಶಿವಕುಮಾರ್, ಮುಡಾ ಸದಸ್ಯೆ ಶ್ರೀಮತಿ ಲಕ್ಷ್ಮಿದೇವಿ, ಮುಖಂಡರಾದ ಸಂತೋಷ್, ನಾಗೇಶ್, ಸಂಪತ್ ಇನ್ನಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

8.5.2023 ಸೋಮವಾರ, ಮಳೆ ನಕ್ಷತ್ರ: ಭರಣಿ, 28.04.2023 ರಿಂದ 10.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

- **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನ, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಶೃಂಗೇರಿ :** 43ನೇ ವರ್ಷದ ಮೂರ್ತಿ ಪ್ರತಿಷ್ಠಾ ಮಹೋತ್ಸವ, ಸ್ಥಳ: ಶೃಂಗೇರಿ ಶ್ರೀ ಶಂಕರಮಠ, ಫೋರ್ಟ್ ಮೊಹಲ್ಲಾ, ಬೆಳಗ್ಗೆಯಿಂದ.
- **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಶ್ರೀ ಗುರು ವಾದಿರಾಜರ ಪಂಚರಾತ್ರೋತ್ಸವ ವೈಭವ: ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಸೋದೆ ಶ್ರೀ ವಾದಿರಾಜ ಮಠಾಧೀಶರಾದ ಶ್ರೀ ವಿಶ್ವವಲ್ಲಭತೀರ್ಥ, ಸಂಜೆ 5 ಗಂಟೆಗೆ, ಭಜನೆ ಕಾರ್ಯಕ್ರಮ, ಖ್ಯಾತ ಗಾಯಕ ವಿ॥ ವೆಂಕಟೇಶಕುಮಾರ್ ಅವರಿಂದ ಸಂಜೆ 6 ಗಂಟೆಗೆ ಹರಿದಾಸ ವಾಣಿ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ– ಡಾ. ಗಜಾನನ ಶರ್ಮ, 6.45 ಅರಿವಿನ ಶಿಖರ: ಗಾಯನ– ಜಿ. ಪುಷ್ಪಲತಾ, ವ್ಯಾಖ್ಯಾನ– ಡಾ.ಪ್ರದೀಪ್‌ಕುಮಾರ್ ಹೆಬ್ರಿ, 7.15 ಭಾವಗೀತೆಗಳು: ರಾಜು ಅನಂತಸ್ವಾಮಿ, ವೃಂದಗಾನ, 8.30 ರೂಪಕ "ರವಿ ಕಾಣದನ್ನ ಕವಿ ಕಂಡ" ರಚನೆ– ಡಾ. ವಿನೋದ, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ, 9.30 ಚುನಾವಣೆ 2023 'ಮತ ಕ್ಷೇತ್ರ ದರ್ಶನ' ಸಮಗ್ರ ಚಿತ್ರಣ, 10.00 ಲಯ ಸಂಭ್ರಮ, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 11.00 ಸ್ಪೆಷಲ್ ಚುರುಮುರಿ: ಪ್ರಸ್ತುತಿ– ಪಿ.ಸಿ. ಮಳಿಮಠ ಮತ್ತು ಕೆ.ಬಿ. ಮೀನಾ, 11.30 ಮಿಶ್ರ ಮಾಧುರ್ಯ, 11.40 ಬೆಳ್ಳಿ ಬೆರಗು "ವಿಷ್ಣುವರ್ಧನ್" ಕುರಿತ ಕಾರ್ಯಕ್ರಮ. ಲೇಖನ– ಗಣೇಶ್ ಅಮೀನ್, ನಿರ್ಮಾಣ– ಜಿ.ಎನ್. ಮಂಜುನಾಥ್.

ಮಧ್ಯಾಹ್ನ: 12.30 ದೇವರ ನಾಮ: ಕೆ.ಎಲ್. ಯತಿರಾಜ್, 12.45 ನಮ್ಮ ಆರೋಗ್ಯ 'ಲೂಪಸ್' ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ. ಸಂಗೀತಾ ಕೆ.ಎನ್. ಅವರೊಂದಿಗೆ ಮಾತುಕತೆ, 1.00 ರಂಗಗೀತೆ: ತಾಯೂರು ಚೆನ್ನನಾಯಕ, 1.20 ಭಾವಗೀತೆ– ಎನ್.ಸಿ.ಸುವರ್ಣ, 3.00 ಆಲತ್ತೂರು ಸಹೋದರರು– ಹಾಡುಗಾರಿಕೆ.

ಸಂಜೆ: 4.00 ಮಹಿಳಾರಂಗ 'ಡಾಕ್ಟರ್ ಸಮಯ' ಭಾಗವಹಿಸುವ ವೈದ್ಯರು– ಡಾ. ರಜನೀ ಲೋಕೇಶ್, ವಿಷಯ: ಅಂದದ ನಗುವಿಗೆ ಹಲ್ಲಿನ ಆರೋಗ್ಯ, ಪ್ರಸ್ತುತಿ– ಕೆ.ಬಿ.ಮೀನಾ, 4.30 ಝೇಂಕಾರ, 4.45 ಹಿಂದಿ ಪಾಠ, ಪ್ರಸ್ತುತಿ– ಎನ್.ಎಸ್. ಭಟ್ ಸೈಪಗಲ್ಲು, 6.55 ಕೃಷಿರಂಗ: ಕಿಸಾನ್ ವಾಣಿ– ಕೃಷಿ ಬಳಕೆಗಾಗಿ ಅಂತರ್ಜಲ ನಿರ್ವಹಣಾ ತಾಂತ್ರಿಕತೆಗಳನ್ನು ಕುರಿತು ಡಾ. ಶ್ರೀಧರ ಹೆಗ್ಡೆ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎಸ್. ಸುಬ್ರಹ್ಮಣ್ಯ.

ರಾತ್ರಿ: 9.30 ಹಳ್ಳಿ ಹಾಡು: ಭಾಗವಹಿಸುವವರು ಕರಿಕಲ್ಲು ಗ್ರಾಮದ ಬಸವರಾಜಯ್ಯ ಮತ್ತು ತಂಡ ಸಂಗಡಿಗರು, ಪ್ರಸ್ತುತಿ– ಅಬ್ದುಲ್ ರಶೀದ್, 10.00 ನಾಟಕ, 10.30 ಸವಿನೆನಪು.

ಭಾರತ ಮುನ್ನಡೆಸಲು ಗಟ್ಟಿ ನಾಯಕತ್ವ ಬೇಕು: ಜೈಶಂಕರ್

ಸೂಡಾನ್‌ನಲ್ಲಿ 'ಆಪರೇಷನ್ ಕಾವೇರಿ' ರಕ್ಷಣಾ ಕಾರ್ಯಾಚರಣೆ ಅತ್ಯಂತ ಸವಾಲಿನಿಂದ ಕೂಡಿತ್ತು: ಮೈಸೂರಲ್ಲಿ ಭಾರತದ ವಿದೇಶಾಂಗ ನೀತಿ ಸಂಬಂಧ ಸಂವಾದ ಗೋಷ್ಠಿಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವರ ಅಭಿಮತ



ಮೈಸೂರಿನ ಮುಕ್ತ ಗಂಗೋತ್ರಿಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಸಂವಾದಗೋಷ್ಠಿಯನ್ನು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. (ಎಡದಿಂದ) ಥಿಂಕರ್ಸ್ ಫೋರಂನ ಡಾ. ಉಷಾ ವೇಣುಗೋಪಾಲ್, ಮಾಧುರ್ಯ ರಾಮಸ್ವಾಮಿ, ಚೇತನ್ ಹಾಗೂ ಗೋಷ್ಠಿ ನಡೆಸಿಕೊಟ್ಟ 'ಮೈಸೂರು ಮಿತ್ರ' ಹಾಗೂ "ಸ್ಟಾರ್ ಆಫ್ ಮೈಸೂರ್" ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ. ವಿಕ್ರಂ ಮುತ್ತಣ್ಣ ಅವರನ್ನು ಚಿತ್ರದಲ್ಲಿ ಕಾಣಬಹುದು.



ಕರಾಮುವಿ ಘಟಿಕೋತ್ಸವ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಸಂವಾದಗೋಷ್ಠಿಯಲ್ಲಿ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಮಾತನಾಡುತ್ತಿರುವುದು.

ಮೈಸೂರು, ಮೇ 7(ಆರ್‌ಕೆ, ಬಿಎಸ್)–ಸಂಘರ್ಷ ಪೀಡಿತ ಸೂಡಾನ್‌ನಲ್ಲಿ ಸಿಲುಕಿದ್ದ ಕನ್ನಡಿಗರು ಸೇರಿದಂತೆ ಭಾರತೀಯರನ್ನು ಸುರಕ್ಷಿತವಾಗಿ ಕರೆತರಲು ನಡೆಸಲಾದ 'ಆಪರೇಷನ್ ಕಾವೇರಿ' ರಕ್ಷಣಾ ಕಾರ್ಯಾಚರಣೆ ಭಾರಿ ಸಾಹಸ, ಸವಾಲಿನಿಂದ ಕೂಡಿತ್ತು ಎಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮುಕ್ತ ಗಂಗೋತ್ರಿಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU)ದ ಘಟಿಕೋತ್ಸವ ಭವನದಲ್ಲಿ ಥಿಂಕರ್ಸ್ ಫೋರಂ (ಚಿಂತಕರ ವೇದಿಕೆ) ಮೈಸೂರು ವತಿಯಿಂದ ಏರ್ಪಡಿಸಲಾಗಿದ್ದ 'ಮೋದಿ ಸರ್ಕಾರದ ವಿದೇಶಾಂಗ ನೀತಿಗಳು' ವಿಷಯ ಕುರಿತ ಸಂವಾದ ಗೋಷ್ಠಿಯಲ್ಲಿ ಹಲವಾರು ವಿಷಯಗಳ ಬಗ್ಗೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ಬೆಳಕು ಚೆಲ್ಲಿದರು.

ಭುಗಿಲೆದ್ದ ಜನ ಸಂಘರ್ಷದಿಂದ ಸೂಡಾನ್‌ನಲ್ಲಿ ಪರಿಸ್ಥಿತಿ ಕೈಮೀರಿತ್ತು. ಅಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಭಾರತೀಯರನ್ನು ಸುರಕ್ಷಿತವಾಗಿ ಕರೆತರುವುದು ಅತಿ ದೊಡ್ಡ ಸವಾಲಾಗಿತ್ತು. ಅದಕ್ಕೆ ಬೇರೆ ಬೇರೆ ಕಾರಣಗಳಿದ್ದವು. ಅವುಗಳನ್ನು ಮೆಟ್ಟಿ ನಿಂತು 'ಆಪರೇಷನ್ ಕಾವೇರಿ" ಕಾರ್ಯಾಚರಣೆಯನ್ನು ಯಶಸ್ವಿಗೊಳಿಸಲಾಯಿತು. ಏಪ್ರಿಲ್ 15ರಂದು ಆರಂಭವಾದ ಆಪರೇಷನ್ ಕಾವೇರಿ ಕಾರ್ಯಾಚರಣೆ ಮೂಲಕ ಒಟ್ಟು 4,000ಕ್ಕೂ ಹೆಚ್ಚು ಭಾರತೀಯರನ್ನು ಸುರಕ್ಷಿತವಾಗಿ ಕರೆತರುವಲ್ಲಿ ನಾವು ಯಶಸ್ವಿಯಾಗಿದ್ದೇವೆ. ಇದರಲ್ಲಿ ಕರ್ನಾಟಕದವರೇ ಶೇಕಡ ಶೇ.11ರಿಂದ 12ರಷ್ಟು ಇದ್ದರು ಎಂದು ಅವರು ತಿಳಿಸಿದರು.

ಸೂಡಾನ್ ಸಂಘರ್ಷದಲ್ಲಿ ಸಿಲುಕಿದ್ದವರ ರಕ್ಷಣೆಗೆ ಭಾರತೀಯ ವಾಯುಪಡೆಯ 17 ವಿಮಾನಗಳನ್ನು ನಿಯೋಜಿಸಲಾಗಿತ್ತಲ್ಲದೆ, ಹಡಗುಗಳನ್ನು ಬಳಸಲಾಯಿತು. ಭಾರತದ ಜನರನ್ನು ಸುರಕ್ಷಿತವಾಗಿ ಕರೆತರಲು ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ಜೈಶಂಕರ್ ವಿವರಿಸಿದರು.

ತುಂಬಾ ತ್ರಾಸದಾಯಕ ಕಾರ್ಯಾಚರಣೆ: ಬೇರೆ ಬೇರೆ ಕಾರಣಗಳಿಂದಾಗಿ ಈ 'ಆಪರೇಷನ್ ಕಾವೇರಿ' ಹಿಂದಿನ ಹಲವು ಕಾರ್ಯಾಚರಣೆಗಳಿಗೆ ಹೋಲಿಸಿದಾಗ ವಿಭಿನ್ನವಾದುದು. ಸೂಡಾನ್‌ನಲ್ಲಿ ನಾಗರಿಕ ಯುದ್ಧ ಹೆಚ್ಚಾಗುತ್ತಿದ್ದಂತೆಯೇ ಬೇರೆ ಬೇರೆ ದೇಶಗಳ ರಾಯಭಾರಿ ಕಚೇರಿ ಸಿಬ್ಬಂದಿಯನ್ನು ಕರೆಸಿಕೊಳ್ಳಲಾಗಿತ್ತು. ಆದರೆ ಭಾರತವು ಈ ಸಂದರ್ಭದಲ್ಲಿ ಧೃತಿಗೆಡದೆ ಸಿಬ್ಬಂದಿಯನ್ನು ಇಲ್ಲಿಯೇ ಇರಿಸಿ, ನಾಗರಿಕರನ್ನು ಸುರಕ್ಷಿತವಾಗಿ ವಾಪಸ್ ಕರೆತರಲು ಮುಂದಾಯಿತು. ಭಾರತದ ರಾಯಭಾರಿ ಕಚೇರಿ ತಂಡದವರು ಪರಿಸ್ಥಿತಿಯನ್ನು ತುಂಬ ಜಾಣ್ಮೆಯಿಂದ ನಿರ್ವಹಿಸಿದರು. ಭಾರತೀಯ ವಾಯುಪಡೆಯ ವಿಮಾನಗಳನ್ನು ಅತ್ಯಂತ ದುರ್ಗಮ ಪ್ರದೇಶಲ್ಲಿಯೂ ಲ್ಯಾಂಡಿಂಗ್ ಮಾಡಲಾಯಿತು. ಈ ಪ್ರದೇಶದಲ್ಲಿ ಕೆಲವು ದಿನಗಳ ಹಿಂದೆ ವಿಮಾನಗಳ ಮೇಲೆ ಗುಂಡು ಹಾರಿಸಲಾಗಿತ್ತು. ಆದರೂ ಭಾರತೀಯ ಪ್ರಜೆಗಳ ರಕ್ಷಣೆಯಲ್ಲಿ ಅವಿರತ ಶ್ರಮಿಸಿ ಅಂತಿಮವಾಗಿ ಯಶಸ್ವಿಯಾದೆವು ಎಂದರು.

ಪೆಟ್ರೋಲ್, ಬಸ್ ಬಾಡಿಗೆಗೆ: ಕಾರ್ಯಾಚರಣೆಗೆ 60ರಿಂದ 70 ಬಸ್‌ಗಳನ್ನು ಬಾಡಿಗೆಗೆ ಪಡೆಯಬೇಕಾದ ಅನಿವಾರ್ಯತೆ ಬಂತು. ಬ್ಲಾಕ್ ಮಾರ್ಕೆಟ್‌ನಲ್ಲಿ ಪೆಟ್ರೋಲ್ ಅನ್ನು ಖರೀದಿ ಮಾಡಬೇಕಾಗಿತ್ತು. ಹೀಗೆ ನಾನಾ ಸವಾಲುಗಳೇ ಎದುರಾದವು. ಸೌದಿ ಅರೇಬಿಯಾ, ಇಂಗ್ಲೆಂಡ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಸಹಾಯ ಪಡೆಯಲಾಯಿತು. ಈ ರಾಷ್ಟ್ರಗಳೊಂದಿಗೆ ಭಾರತ ಹೊಂದಿದ್ದ ಉತ್ತಮ ಸಂಬಂಧದಿಂದ ಇದೆಲ್ಲಾ ಸಾಧ್ಯವಾಯಿತು ಎಂದು ಸಚಿವರು ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

ಸವಾಲು, ಸಮಸ್ಯೆಗಳನ್ನು ಎದುರಿಸಲು ಮೊದಲು ನಮ್ಮ ದೇಶ ಮಾಡಿಕೊಂಡ ಸಿದ್ಧತೆ ಬಗ್ಗೆ ವಿವರಿಸಿದ ಸಚಿವರು, ಕೋವಿಡ್–19 ಸಂಕಷ್ಟ ಪರಿಸ್ಥಿತಿಯಲ್ಲಿ ವಿಶ್ವದ ಹಲವೆಡೆ ಈ ಮಹಾಮಾರಿಯಿಂದ ನಲುಗುತ್ತಿದ್ದ 70 ಲಕ್ಷ ಭಾರತೀಯರನ್ನು ವಾಪಸ್ ಕರೆತರಲು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ದಿನದ 3 ಪಾಳಿಯಲ್ಲಿ ಅವಿರತ ಶ್ರಮಿಸಿತು. ಈ ಸಂದರ್ಭದಲ್ಲಿ ನೀವೆಲ್ಲರೂ ಬಹುಶಃ ಮನೆಯಿಂದಲೇ ಕೆಲಸ ಮಾಡುತ್ತಿದ್ದೀರಿ ಎಂದು ತಿಳಿಸಿದರು.

ಮೇಡ್ ಇನ್ ಇಂಡಿಯಾ ಲಸಿಕೆ: ಕೊರೊನಾ ವಿರುದ್ಧ ಭಾರತವೇ ತಯಾರಿಸಿದ ಲಸಿಕೆಯನ್ನು (Made in India Vaccine) ವಿಶ್ವದ ಹಲವು ರಾಷ್ಟ್ರಗಳಿಗೂ ಸರಬರಾಜು ಮಾಡಿದ್ದನ್ನು ಕೆರೇಬಿಯನ್ ಪ್ರಾಂತ್ಯದ ದೇಶಗಳು ಸೇರಿದಂತೆ ಹಲವು ದೇಶಗಳು ಮುಕ್ತಕಂಠದಿಂದ ಶ್ಲಾಘಿಸಿವೆ ಎಂದು ಜೈಶಂಕರ್ ಇದೇ ವೇಳೆ ನುಡಿದರು.

ಇಡೀ ವಿಶ್ವವೇ ಭಾರತವನ್ನು ಕೊಂಡಾಡುತ್ತಿದೆ. ಹಲವು ವಿಷಯಗಳಲ್ಲಿ ನಾವು ಸಮರ್ಥರಿದ್ದೇವೆ. ಆದರೆ ಇದಕ್ಕೆ ಕಾರಣವಾಗಿರುವುದು ಉತ್ತಮ ನಾಯಕತ್ವ ಮತ್ತು ಪ್ರೇರೇಪಣೆ. ಭಾರತವನ್ನು ಮುನ್ನಡೆಸಲು ನಮಗೆ ಗಟ್ಟಿ ನಾಯಕತ್ವ, ಪ್ರಬಲ ನಾಯಕ ಬೇಕಾಗಿದೆ. ದೇಶವನ್ನು ಪ್ರಗತಿಯತ್ತ ಕೊಂಡೊಯ್ಯುವ ಸಾಮರ್ಥ್ಯವಿರುವ ನಾಯಕರು ನಮಗೆ ಬೇಕಾಗಿದೆ. ಇತ್ತೀಚೆಗಿನ ಸಾಮರ್ಥ್ಯದ ಬಗ್ಗೆ ಹೇಳುವುದಾದರೆ, ಕೋವಿಡ್ ವಿರುದ್ಧ ಕೋವ್ಯಾಕ್ಸಿನ್ ಲಸಿಕೆ ಕಂಡು ಹಿಡಿದಿದ್ದು, 5–ಜಿ ನೆಟ್‌ವರ್ಕ್, ಡಿಜಿಟಲ್ ಕ್ರಾಂತಿ ಇವು ಮೇಕ್ ಇನ್ ಇಂಡಿಯಾ ಸಾಧನೆಗಳಾಗಿವೆ ಎಂದು ನುಡಿದರು.

ಭಾರತದಲ್ಲಿ ಕರ್ನಾಟಕವು ಜಾಗತಿಕ ಮಟ್ಟದಲ್ಲಿ ಮನ್ನಣೆ ಪಡೆದಿರುವ ಹಲವಾರು ದೇಶಗಳೊಂದಿಗೆ ವ್ಯವಹಾರಿಕ ಸಂಪರ್ಕವಿರುವ ರಾಜ್ಯಗಳಲ್ಲಿ ಒಂದಾಗಿದೆ ಎಂದು ಸಚಿವರು ಗೋಷ್ಠಿಯಲ್ಲಿ ಪ್ರಶಂಸಿಸಿದರು. 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರು, 'ಬ್ಲಾಕ್ ಅಂಡ್ ವೈಟ್' ಅಂಕಣ ಖ್ಯಾತಿಯ ಕೆ.ಜಿ. ವಿಕ್ರಂ ಮುತ್ತಣ್ಣ ಅವರು ಸಂವಾದಗೋಷ್ಠಿ ನಡೆಸಿಕೊಟ್ಟರು. ರಾಜ್ಯದಲ್ಲಿ ಹರಿಯುವ ಕಾವೇರಿ ನದಿ ಹೆಸರನ್ನು ಸೂಡಾನ್‌ನಲ್ಲಿ ಸಿಲುಕಿದ್ದ ಭಾರತೀಯ ಪ್ರಜೆಗಳ ರಕ್ಷಣಾ ಕಾರ್ಯಾಚರಣೆಗಾಗಿ 'ಆಪರೇಷನ್ ಕಾವೇರಿ' ಎಂದು ಹೆಸರಿಟ್ಟಿರುವ ಸಚಿವ ಜೈಶಂಕರ್ ಅವರನ್ನು ವಿಕ್ರಂ ಮುತ್ತಣ್ಣ ಅವರು ಅಭಿನಂದಿಸಿದರು.

ಥಿಂಕರ್ಸ್ ಫೋರಂ ಮೈಸೂರು ಸದಸ್ಯ ಹಾಗೂ ಕಲಾವಿದೆ ಮಾಧುರ್ಯ ರಾಮಸ್ವಾಮಿ ಅವರು ಗಣಪತಿ ಪೇಂಟಿಂಗ್ ಅನ್ನು ಎಸ್ ಜೈಶಂಕರ್ ಅವರಿಗೆ ನೀಡಿ ಅಭಿನಂದಿಸಿದರು. ಪದ್ಮಭೂಷಣ ಪ್ರಶಸ್ತಿ ವಿಜೇತ ಸಾಹಿತಿ ಡಾ.ಎಸ್.ಎಲ್.ಭೈರಪ್ಪ, 'ಮೈಸೂರು ಮಿತ್ರ' ಹಾಗೂ "ಸ್ಟಾರ್ ಆಫ್ ಮೈಸೂರ್" ಸಂಸ್ಥಾಪಕ ಸಂಪಾದಕ ಕೆ.ಬಿ. ಗಣಪತಿ, ಶಿಕ್ಷಣ ತಜ್ಞ ಆರ್.ವಾಸುದೇವ ಭಟ್, ತಿಂಕರ್ಸ್ ಫೋರಂ ಸಂಚಾಲಕ ದರ್ಶನ್ ರಾಜ, ಡಾ.ಲಕ್ಷ್ಮೀ ನಾರಾಯಣ ಸಂವಾದ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಉತ್ತಮ ಅತಿಥಿಗೆ ಅತ್ಯುತ್ತಮ ಆತಿಥ್ಯ!



ಮೈಸೂರು, ಮೇ 7 (ಆರ್‌ಕೆ, ಬಿಎಸ್)–ಸಂವಾದದ ವೇಳೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹಲವು ವಿಷಯಗಳನ್ನು ಪ್ರಸ್ತಾಪಿಸಿದರು. ಅದರಲ್ಲೂ ಮುಖ್ಯವಾಗಿ ಇತ್ತೀಚೆಗೆ ಗೋವಾದಲ್ಲಿ ನಡೆದ ಶಾಂಘೈ ಸಹಕಾರ ಒಕ್ಕೂಟ (SCO) ಸಮಾವೇಶದಲ್ಲಿ ಪಾಕಿಸ್ತಾನದ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ಅವರೊಂದಿಗೆ ಗಡಿಯಾಚೆಗಿನ ಭಯೋತ್ಪಾದನೆ ಬಗ್ಗೆ ಅತ್ಯಂತ ಗಂಭೀರ ಚರ್ಚೆ ನಡೆಸಿದ ಬಗ್ಗೆಯೂ ಸಚಿವರು ಪ್ರಸ್ತಾಪಿಸಿದರು.

ಮೈಸೂರಿನ ಮುಕ್ತ ಗಂಗೋತ್ರಿಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ. ವಿಕ್ರಂ ಮುತ್ತಣ್ಣ ಅವರು ನಡೆಸಿಕೊಟ್ಟ ಸಂವಾದ ಕಾರ್ಯಕ್ರಮದಲ್ಲಿ ತಮ್ಮ ಅಭಿಪ್ರಾಯಗಳನ್ನು ಸಚಿವರು ಹಂಚಿಕೊಂಡರು.

ಬಿಲಾವಲ್ ಭುಟ್ಟೋ ಅವರು ನಮ್ಮ ನೀತಿಗಳು, ಕಾಶ್ಮೀರ ವಿವಾದ, ಬಿಬಿಸಿ ಸಾಕ್ಷ್ಯಚಿತ್ರ, ಜಿ–20 ಮತ್ತು ಇನ್ನಿತರ ವಿಷಯಗಳ ಬಗ್ಗೆ ಮಾತನಾಡಿದರು. "ಒಳ್ಳೆಯ ಅತಿಥಿಗೆ ಒಳ್ಳೆಯ ಆತಿಥ್ಯವನ್ನೇ ನೀಡುವವರು ನಾವು" ಎಂದು ಬಿಲಾವಲ್ ಭುಟ್ಟೋಗೆ ತಮ್ಮ ಪ್ರತಿಕ್ರಿಯೆಯನ್ನು ಸಮರ್ಥಿಸಿಕೊಂಡಾಗ ಸಭಿಕರು ನಗೆಗಡಲಲ್ಲಿ ಮುಳುಗಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಮನಮೋಹನ್ ಸಿಂಗ್ ಸಂಪುಟದಲ್ಲಿ ಕೆಲಸ ಮಾಡಿದ ಅನುಭವ, ಭಿನ್ನತೆಗಳ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ನಾನು ಅಮೆರಿಕ ಮತ್ತು ಸಿಂಗಾಪುರದಲ್ಲಿ ಭಾರತದ ರಾಯಭಾರಿಯಾಗಿ ಸೇವೆ ಸಲ್ಲಿಸಿದ್ದೆ. ಆದರೆ, ಈ ಇಬ್ಬರು ನಾಯಕರ ನಡುವಿನ ಹೋಲಿಕೆ ಮಾಡುವುದು ಕಷ್ಟ, ಇವರಿಬ್ಬರದೂ ವಿಭಿನ್ನ ಕಾರ್ಯವೈಖರಿ ಎಂದರು.

ರಾಯಭಾರಿ ಆಗಿದ್ದಾಗ ದೇಶ ಭಕ್ತಿ, ಆಶಾಭಾವನೆಯಿಂದ ನಡೆದುಕೊಳ್ಳಬೇಕು. ಆದರೆ ಸಚಿವನಾದ ಮೇಲೆ ಕೆಲವು ಕಠಿಣ ಪರಿಸ್ಥಿತಿಯನ್ನು ಗಟ್ಟಿ ಮನಸ್ಸಿನಿಂದ ನಿಭಾಯಿಸಬೇಕಾದ ಅವಶ್ಯಕತೆ ಇದೆ, ಕೆಲವೊಮ್ಮೆ ಮಂದಗತಿಯ ದೃಷ್ಟಿಕೋನದಿಂದ ನಿಭಾಯಿಸಬೇಕು ಎಂದು ಸಚಿವರು ಇದೇ ಸಂದರ್ಭದಲ್ಲಿ ವಿವರಣೆ ನೀಡಿದರು.

ಬಿಜೆಪಿ 135 ಸ್ಥಾನ ಗೆಲ್ಲಲಿದೆ



ಆನವಟ್ಟಿ: ಡಬಲ್ ಎಂಜಿನ್ ಸರ್ಕಾರದಿಂದ ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿ ಆಗಿದೆ. ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರು ರಾಜ್ಯದಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಬಿರುಸಿನ ಪ್ರಚಾರ ಮಾಡುತ್ತಿರುವ ಪರಿಣಾಮ 135 ಸ್ಥಾನಗಳನ್ನು ಪಡೆಯುವ ಮೂಲಕ ರಾಜ್ಯದಲ್ಲಿ ಸುಭದ್ರ ಸರ್ಕಾರ ಬರಲಿದೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅಭಿಪ್ರಾಯಪಟ್ಟರು.

ಆನವಟ್ಟಿಯ ಕೋಟೆ ಮೈದಾನದಲ್ಲಿ ಶನಿವಾರ ಬಿಜೆಪಿ ಹಮ್ಮಿಕೊಂಡಿದ್ದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು. ನಮಗೆ ಜಾತಿ ಗೊತ್ತಿಲ್ಲ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಸೇರಿದಂತೆ ಎಲ್ಲ ಸಮುದಾಯವರು ಅಣ್ಣ, ತಮ್ಮರಂತೆ ಬದುಕಬೇಕು ಎಂಬುದು ಬಿಜೆಪಿ ಪಕ್ಷದ ಆಶಯ ಎಂದರು. **ಭಾವ ಪ್ರಚಾರ ಮಾಡಿದರೆ ಚಿತ್ರಣ ಬದಲಾಗದು:** ಡಾ.ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಅವರು ಚುನಾವಣೆಯಿಂದ ದೂರವೇ ಉಳಿದಿದ್ದರು. ಒಳ್ಳೆಯ ಸಂಸ್ಕೃತಿ ಬೆಳೆಸಿಕೊಂಡಿದ್ದರು. ಆದರೆ, ಕಾಂಗ್ರೆಸ್ ಅಭ್ಯರ್ಥಿಯ ಭಾವ ಎಂಬ ಕಾರಣಕ್ಕೆ ಶಿವರಾಜ್‌ಕುಮಾರ್ ಅವರು ಎಲ್ಲವನ್ನು ಗಾಳಿಗೆ ತೂರಿ ಕಾಂಗ್ರೆಸ್ ಪರ ಪ್ರಚಾರಕ್ಕೆ ಇಳಿದಿರುವುದು ಎಂತಹ ಸಂಸ್ಕೃತಿ. ಶಿವರಾಜ್‌ಕುಮಾರ್ ರೋಡ್ ಶೋ ಮಾಡಿದ ಕೂಡಲೇ ತಾಲೂಕಿನ ಚುನಾವಣೆ ಫಲಿತಾಂಶ ಬದಲಾಗುವುದಿಲ್ಲ ಎಂದು ಬಿಜೆಪಿ ಅಭ್ಯರ್ಥಿ ಕುಮಾರ್ ಬಂಗಾರಪ್ಪ ಹೇಳಿದರು.

ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಜು ಎಂ. ತಲ್ಲೂರು ಮಾತನಾಡಿದರು. ಸಭೆಯಲ್ಲಿ ಮಾಜಿ ಶಾಸಕ ಜಿ.ಡಿ.ನಾರಾಯಣಪ್ಪ, ಕುಂದನ್ ಪರಿಹಾರ್, ಮುಖಂಡರಾದ ಪಿ.ಎಸ್.ಪ್ರಶಾಂತ, ಪ್ರಕಾಶ ತಲಕಾಲಕೊಪ್ಪ, ಸುರೇಶ್, ಮಲ್ಲಿಕಾರ್ಜುನ ದ್ಯಾವಳ್ಳಿ, ಪ್ರಸನ್ನ ಕುಮಾರ್ ಎಂ.ಸಮನವಳ್ಳಿ, ಪ್ರಕಾಶ ಅಗಸನಹಳ್ಳಿ, ರಾಜು ಬಡಗಿ, ಬಿ.ಎಚ್.ಕೃಷ್ಣಮೂರ್ತಿ, ಮಂಜುನಾಥ ಜಾಡರ್ ಹುರುಳಿಕೊಪ್ಪ ಇದ್ದರು.

ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಪರ ಮತ ಯಾಚನೆ



ಮೈಸೂರು, ಮೇ 7(ಪಿಎಂ)–ರಾಜ್ಯದಲ್ಲಿ ಮತ್ತೆ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರಲು ಕೃಷ್ಣರಾಜ ಕ್ಷೇತ್ರದ ಜನತೆ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಅವರಿಗೆ ಮತ ನೀಡಬೇಕೆಂದು ಬಿಜೆಪಿ ಮಾಧ್ಯಮ ವಕ್ತಾರ ಕೇಬಲ್ ಮಹೇಶ್ ಮನವಿ ಮಾಡಿದರು.

ಮೈಸೂರಿನ ಗೌರಿಶಂಕರನಗರ ಹಾಗೂ ಗುಂಡೂರಾವ್‌ನಗರದಲ್ಲಿ ಬಿಜೆಪಿ ಕರಪತ್ರಗಳನ್ನು ವಿತರಿಸಿದ ಅವರು, ಟಿ.ಎಸ್.ಶ್ರೀವತ್ಸ ಪರವಾಗಿ ಮತಯಾಚನೆ ಮಾಡಿದರು.

ಇದೇ ವೇಳೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರು ಪೂರ್ಣ ಬಹುಮತದೊಂದಿಗೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರುವಂತೆ ಕರೆ ನೀಡಿದ್ದಾರೆ. ಅದರಂತೆ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮತದಾರರು ದೊಡ್ಡ ಮನಸ್ಸು ಮಾಡಿ, ಬಿಜೆಪಿ ಅಭ್ಯರ್ಥಿ ಶ್ರೀವತ್ಸರನ್ನು ಬೆಂಬಲಿಸಬೇಕೆಂದು ಕೋರಿದರು. ಇದೇ ಸಂದರ್ಭದಲ್ಲಿ ಸ್ಥಳೀಯ ಮುಖಂಡರು ಹಾಜರಿದ್ದರು.

3 ವರ್ಷಗಳಲ್ಲಿ ಬಿಜೆಪಿ ಲೂಟಿ ಮಾಡಿದ ಹಣವನ್ನು ನಾವು ಹಿಂದಿರುಗಿಸುತ್ತೇವೆ

ಮತದಾರರಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭರವಸೆ



ಬೆಳಗಾವಿ/ಹುಬ್ಬಳ್ಳಿ: ಕುದುರೆ ವ್ಯಾಪಾರದ ಮೂಲಕ ಬಿಜೆಪಿ ಸರ್ಕಾರ ರಚಿಸಿದ್ದು, ಕಳೆದ ಮೂರು ವರ್ಷಗಳಿಂದ ಅವರು 'ಲೂಟಿ ಮಾಡಿದ ಹಣವನ್ನು ಹಿಂದಿರುಗಿಸುತ್ತೇವೆಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತದಾರರಿಗೆ ಭರವಸೆ ನೀಡಿದ್ದಾರೆ.

ಯಮಕನಮರಡಿ ಕ್ಷೇತ್ರದ ಭೂತರಾಮನಹಟ್ಟಿ ಗ್ರಾಮದಲ್ಲಿ ನಡೆದ ಪಕ್ಷದ ಪ್ರಚಾರ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ರಾಹುಲ್ ಗಾಂಧಿಯವರು, ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು. ಬಿಜೆಪಿ ನಾಯಕರು ಜನರಿಂದ ಲೂಟಿ ಮಾಡಿದ ಹಣವನ್ನು ನಾವು ಹಿಂದಿರುಗಿಸಲು ಬಯಸುತ್ತೇವೆ. ಲೂಟಿ ಮಾಡಿದ ಸಾವಿರಾರು ಕೋಟಿಗಳನ್ನು ಅವರ ಖಾತೆಗೆ ಜಮಾ ಮಾಡಲಾಗುವುದು ಎಂದು ಹೇಳಿದರು.

ಪೌರಕಾರ್ಮಿಕ ಕಾಮಗಾರಿಗಳಿಗೆ ಶೇ.40ರಷ್ಟು ಕಮಿಷನ್ ನೀಡಬೇಕು ಎಂದು ಆರೋಪಿಸಿ ಗುತ್ತಿಗೆದಾರರ ಸಂಘ ಪತ್ರ ಬರೆದರೂ ಪ್ರಧಾನಿ ಮೋದಿ ಮೌನ ತಾಳಿದ್ದರು. ಬಿಜೆಪಿಗೆ 2,500 ಕೋಟಿ ರೂಪಾಯಿ ಕೊಟ್ಟು ಮುಖ್ಯಮಂತ್ರಿ ಸ್ಥಾನವನ್ನು ಖರೀದಿಸಬಹುದು ಎಂದು ಬಿಜೆಪಿ ಶಾಸಕರೊಬ್ಬರು ಹೇಳಿಕೊಂಡಿದ್ದಾರೆ. ಬಿಜೆಪಿ ಸರ್ಕಾರದಲ್ಲಿ ಪಿಎಸ್‌ಐ, ಸಹಾಯಕ ಪ್ರಾಧ್ಯಾಪಕರ ನೇಮಕಾತಿ, ಸಹಕಾರಿ ಬ್ಯಾಂಕ್ ಸೇರಿದಂತೆ ಎಲ್ಲೆಡೆ ಹಗರಣಗಳು ನಡೆಯುತ್ತಿವೆ. ಬಿಜೆಪಿ ಸರಕಾರ ಸೃಷ್ಟಿಸಿರುವ ದ್ವೇಷ, ಲೂಟಿ, ಸುಳ್ಳಿನ ವಾತಾವರಣದಲ್ಲಿ ಕರ್ನಾಟಕದಲ್ಲಾಗಲೀ, ದೇಶದಲ್ಲಾಗಲಿ ಯಾವುದೇ ಅಭಿವೃದ್ಧಿ ಸಾಧ್ಯವಿಲ್ಲ. ಹೀಗಾಗಿ ಬಿಜೆಪಿ ಸರಕಾರವನ್ನು ಕಿತ್ತೊಗೆಯಬೇಕಿದೆ ಎಂದರು.

ಸಂಸತ್ತಿನಲ್ಲಿ ನಾವು ಕೇಳಿದ ಯಾವುದೇ ಪ್ರಶ್ನೆಗಳಿಗೂ ಸರ್ಕಾರ ಉತ್ತರಿಸಿಲ್ಲ. ಸಂಸತ್ತಿನ ಪರಮಾಧಿಕಾರವನ್ನು ಹಾಳು ಮಾಡುವ ಸರ್ಕಾರವನ್ನು ದೇಶವು ಎಂದಿಗೂ ನೋಡಿಲ್ಲ. ಹೀಗಾದರೆ ಪ್ರಜಾಪ್ರಭುತ್ವ ಉಳಿಯುವುದು ಹೇಗೆ ಎಂದು ಪ್ರಶ್ನಿಸಿದರು.

ರಾಜಸ್ಥಾನ, ಛತ್ತೀಸ್‌ಗಢ ಮತ್ತು ಹಿಮಾಚಲ ಪ್ರದೇಶದ ಸರ್ಕಾರಗಳು ಈಗಾಗಲೇ ಭರವಸೆಗಳನ್ನು ಈಡೇರಿಸಿವೆ. ಕರ್ನಾಟಕದಲ್ಲೂ ನೀಡಲಾಗಿರುವ ಭರವಸೆಯನ್ನು ಈಡೇರಿಸಲಾಗುತ್ತದೆ. ಎಲ್ಪಿಜಿ ಸಿಲಿಂಡರ್ ಮತ್ತು ಇಂಧನಗಳ ಬೆಲೆ ಗಗನಕ್ಕೇರುವುದರೊಂದಿಗೆ ದೇಶದಲ್ಲಿ ಹಣದುಬ್ಬರವು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೇರಿದೆ, ಕರ್ನಾಟಕದಲ್ಲಿ ಪ್ರವಾಹ ಪರಿಸ್ಥಿತಿ ಎದುರಾದಾಗ ಮೋದಿ ಭೇಟಿ ನೀಡಲಿಲ್ಲ. ಅಂತಾರಾಜ್ಯ ಜಲ ವಿವಾದವನ್ನು ಪರಿಹರಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಕಿಡಿಕಾರಿದರು. ಪ್ರಧಾನಿ ಮೋದಿ ಅವರು ಮುಂದಿನ ಐದು ವರ್ಷಗಳ ಕಾಲ ರಾಜ್ಯಕ್ಕೆ ತಮ್ಮ ಯೋಜನೆಗಳೇನು ಎಂಬುದನ್ನು ಜನರಿಗೆ ಹೇಳಿಲ್ಲ. ಅವರು ಭಯೋತ್ಪಾದನೆಯ ಬಗ್ಗೆ ಮಾತನಾಡುತ್ತಾರೆ, ಈ ಬಗ್ಗೆ ಅವರಿಗಿಂತ ನನಗೆ ಹೆಚ್ಚು ತಿಳಿದಿದೆ. ಭಯೋತ್ಪಾದನೆಯಿಂದ ನಾನು ನನ್ನ ಅಜ್ಜಿ ಮತ್ತು ತಂದೆಯನ್ನು ಕಳೆದುಕೊಂಡಿದ್ದೇನೆಂದು ಹೇಳಿದರು. ಬಳಿಕ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಸತೀಶ ಜಾರಕಿಹೊಳಿ ಅವರೂ ಸಮಾವೇಶದಲ್ಲಿ ಮಾತನಾಡಿದರು.

ಲೋಕಸಭೆ ಚುನಾವಣೆಗೂ ಮುನ್ನ ಮುಸ್ಲಿಂ ಓಲೈಕೆಗೆ ಮುಂದಾದ ಬಿಜೆಪಿ 'ಮೋದಿ ಮಿತ್ರ' ಅಭಿಯಾನ ಆರಂಭ

ನವದೆಹಲಿ: 2024ರ ಲೋಕಸಭೆ ಚುನಾವಣೆಗೆ ಮುನ್ನ ಆಡಳಿತಾರೂಢ ಬಿಜೆಪಿ ಮುಸ್ಲಿಂ ಸಮುದಾಯದ ಓಲೈಕೆಗೆ ಮುಂದಾಗಿದ್ದು, ಈ ವರ್ಷ ಮೇ 10ರ ನಂತರ ದೇಶಾದ್ಯಂತ ಮುಸ್ಲಿಂ ಪ್ರಾಬಲ್ಯದ 65 ಕ್ಷೇತ್ರಗಳಲ್ಲಿ 'ಮೋದಿ ಮಿತ್ರ' ಅಭಿಯಾನ ಆರಂಭಿಸಲಿದೆ. ಮುಸ್ಲಿಮರ ಸಬಲೀಕರಣಕ್ಕಾಗಿ ರಾಷ್ಟ್ರವ್ಯಾಪಿ ಈ ಅಭಿಯಾನ ಆರಂಭಿಸುವುದಾಗಿ ಬಿಜೆಪಿ ಹೇಳಿದೆ. ಈ ಅಭಿಯಾನದ ಅಡಿಯಲ್ಲಿ, ಯಾವುದೇ ರಾಜಕೀಯ ಪಕ್ಷಕ್ಕೆ ಸೇರದ ಮತ್ತು ಪ್ರಧಾನಿ ಮೋದಿಯವರ ಯೋಜನೆಗಳಿಂದ ಪ್ರಭಾವಿತರಾದ ಸುಮಾರು ಮೂರು ಲಕ್ಷ ಮುಸ್ಲಿಮರನ್ನು ತಲುಪುವುದು ನಮ್ಮ ಗುರಿಯಾಗಿದೆ ಎಂದು ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಜಮಾಲ್ ಸಿದ್ದಿಕಿ ಹೇಳಿದ್ದಾರೆ.

ಮೊದಲಿಗೆ, ಮುಸ್ಲಿಂ 'ಮೋದಿ ಮಿತ್ರರು'(ಸಮುದಾಯದ ಸಬಲೀಕರಣಕ್ಕಾಗಿ ಬಿಜೆಪಿಯ ಸದಸ್ಯರಾಗದೆ ಸ್ವಯಂಪ್ರೇರಿತವಾಗಿ ಈ ಅಭಿಯಾನಕ್ಕೆ ಸೇರುತ್ತಿರುವವರು) 65 ಮುಸ್ಲಿಂ ಪ್ರಾಬಲ್ಯವಿರುವ ಲೋಕಸಭಾ ಕ್ಷೇತ್ರಗಳಿಗೆ ಭೇಟಿ ನೀಡಲಿದ್ದಾರೆ ಎಂದು ಜಮಾಲ್ ಸಿದ್ದಿಕಿ ತಿಳಿಸಿದ್ದಾರೆ. ಮುಸ್ಲಿಮರ ಸಬಲೀಕರಣಕ್ಕಾಗಿ ರಾಷ್ಟ್ರವ್ಯಾಪಿ ಅಭಿಯಾನವನ್ನು ಮೇ 10ರಿಂದ ಪ್ರಾರಂಭಿಸಲು ನಿರ್ಧರಿಸಲಾಗಿದೆ. ಈ ಅಭಿಯಾನದ ಅಡಿಯಲ್ಲಿ, 3.25 ಲಕ್ಷ 'ಮೋದಿ ಮಿತ್ರರು' 65 ಕ್ಷೇತ್ರಗಳಲ್ಲಿ ಮುಸ್ಲಿಂ ಪ್ರಾಬಲ್ಯ ಹೊಂದಿರುವ ಎಲ್ಲಾ ಕ್ಷೇತ್ರಗಳಲ್ಲಿ ಮೋದಿ ಸರ್ಕಾರದ ಕಲ್ಯಾಣ ಯೋಜನೆಗಳ ಬಗ್ಗೆ ಪ್ರಚಾರ ಮಾಡಲಿದ್ದಾರೆ ಎಂದು ಹೇಳಿದ್ದಾರೆ.

ಗೃಹಿಣಿ ನಾಪತ್ತೆ



ಮೈಸೂರು, ಮೇ 7– ಮೈಸೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಟಿ.ಪಿ. ಚೈತ್ರಾ (35) ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಸ್ಥ ಮಹಿಳಾ ವಸತಿನಿಲಯದ ರೂಂ ನಂ.3ರಲ್ಲಿ ವಾಸವಿದ್ದು, ಏ. 19 ರಂದು ಬೆಳಗ್ಗೆ 11.30 ಸಮಯದಲ್ಲಿ ವಸತಿ ನಿಲಯದಿಂದ ಹೊರ ಹೋಗಿದ್ದು ವಾಪಸ್ ವಸತಿ ನಿಲಯಕ್ಕೆ ಬಂದಿರುವುದಿಲ್ಲ ಎಂದು ನಿಲಯದ ಸಲಹೆಗಾರರಾದ ಡಾ. ಎಸ್.ಎನ್. ಸುಷ್ಮಾ ಜಯಲಕ್ಷ್ಮಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಈಕೆಯ ಬಗ್ಗೆ ಸುಳಿವು ಸಿಕ್ಕಲ್ಲಿ ಜಯಲಕ್ಷ್ಮಿಪುರಂ ಪೊಲೀಸ್ ಠಾಣೆ ದೂ. ದೂ. 0821–2418316, ನಗರ ಪೊಲೀಸ್ ಕಮಿಷನರ್ ಕಚೇರಿ ದೂರ. 0821–2418339, 2418340 ಸಂಪರ್ಕಿಸಲು ಕೋರಲಾಗಿದೆ.

ಪ್ರಚಾರದ ವೇಳೆ ಘರ್ಷಣೆ: ಕೆಆರ್ ನಗರದ ಬೀಚನಹಳ್ಳಿ ಕೊಪ್ಪಲಲ್ಲಿ ಉದ್ವಿಗ್ನ





ಕೆ.ಆರ್.ನಗರ, ಮೇ 7– ವಿಧಾನಸಭಾ ಚುನಾವಣೆಯ ಮತದಾನಕ್ಕೆ ಕೇವಲ 3 ದಿನವಷ್ಟೇ ಬಾಕಿ ಇದ್ದು, ಭಾನುವಾರ ರಾತ್ರಿ ಕೆ.ಆರ್.ನಗರ ತಾಲೂಕು ಮಿರ್ಲೆ ಹೋಬಳಿ ಗಂಧನಹಳ್ಳಿ ಮತ್ತು ಬೀಚನಹಳ್ಳಿ ಕೊಪ್ಪಲು ಗ್ರಾಮಗಳಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿದ್ದು, ಶಾಸಕ ಸಾ.ರಾ. ಮಹೇಶ್ ಪುತ್ರನ ಕಾರಿನ ಮೇಲೆ ಕಲ್ಲು ತೂರಾಟ ನಡೆದಿರುವ ಬಗ್ಗೆ ವರದಿಯಾಗಿದ್ದು, ಬೀಚನಹಳ್ಳಿ ಕೊಪ್ಪಲು ಗ್ರಾಮದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದೆ.

ಇಂದು ಸಾ.ರಾ.ಮಹೇಶ್ ಪುತ್ರ ಧನುಶ್, ತಂದೆಯ ಪರವಾಗಿ ಕ್ಷೇತ್ರದ ವಿವಿಧೆಡೆ ರೋಡ್ ಶೋ ನಡೆಸುವ ಮೂಲಕ ಮತಯಾಚನೆಯಲ್ಲಿ ತೊಡಗಿದ್ದರು. ರಾತ್ರಿ ಮಿರ್ಲೆ ಹೋಬಳಿಯ ಗಂಧನಹಳ್ಳಿಗೆ ರೋಡ್ ಶೋ ಪ್ರವೇಶಿಸಿದಾಗ ಕಾಂಗ್ರೆಸ್ ಕಾರ್ಯಕರ್ತರು ತಡೆದು ಜೆಡಿಎಸ್ ಕಾರ್ಯಕರ್ತರೊಂದಿಗೆ ಘರ್ಷಣೆಗಿಳಿದಿದ್ದಾರೆ. ಈ ವೇಳೆ ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರ ನಡುವೆ ನೂಕಾಟ–ತಳ್ಳಾಟ ನಡೆದಿದೆ. ಸಾ.ರಾ.ಮಹೇಶ್ ಪುತ್ರ ಧನುಷ್ ತಮ್ಮ ಪಕ್ಷದ ಕಾರ್ಯಕರ್ತರನ್ನು ಸಮಾಧಾನಪಡಿಸಿ, ಬೀಚನಹಳ್ಳಿ ಕೊಪ್ಪಲು ಗ್ರಾಮಕ್ಕೆ ತೆರಳಿದರು. ಇಲ್ಲಿಯೂ ಕೂಡ ಧನುಷ್ ರೋಡ್ ಶೋಗೆ ಕಾಂಗ್ರೆಸ್ ಕಾರ್ಯಕರ್ತರಿಂದ ಅಡ್ಡಿಯುಂಟಾಗಿದೆ. ಈ ಸಂದರ್ಭದಲ್ಲಿ ಪ್ರಚಾರ ವಾಹನದ ಮೇಲೆ ನಿಂತು ಮಾತನಾಡಿದ ಧನುಷ್, ಚುನಾವಣೆಯನ್ನು ಶಾಂತಿಯಿಂದ ನಡೆಸಬೇಕಾಗಿದೆ. ಮತ ಕೇಳಲು ಬಂದ ನಮ್ಮ ಮೇಲೆ ಕತ್ತಲೆಯಲ್ಲಿ ನಿಂತು ಕಲ್ಲು ಹೊಡೆಯುವುದು ಸರಿಯಲ್ಲ. ಇದಕ್ಕೆ ನಾವು ಅಂಜುವುದು ಇಲ್ಲ ಎಂದು ಹೇಳಿದರಲ್ಲದೇ, ನಮ್ಮ ಊರುಗಳಿಗೆ ನೀವು ಓಟು ಕೇಳಲು ಬಂದಾಗ ನಾವೇನಾದರೂ ಗಲಾಟೆ ಮಾಡಿದ್ದೇವೆಯೇ ಎಂದು ಪ್ರಶ್ನಿಸಿ, ಮಾಜಿ ಸಿಎಂ ಕುಮಾರಸ್ವಾಮಿಯವರಿಗೆ ಜೈಕಾರ ಕೂಗಿದರು. ಈ ವೇಳೆ ಕಲ್ಲು ತೂರಾಟ ನಡೆದಿದ್ದು, ಧನುಷ್ ಅವರ ಕಾರಿನ ಗಾಜು ಪುಡಿಪುಡಿಯಾಗಿದೆ.

ಈ ಹಿನ್ನೆಲೆಯಲ್ಲಿ ಬೀಚನಹಳ್ಳಿ ಗೇಟ್‌ನಲ್ಲಿ ಜಮಾಯಿಸಿದ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಲಾರಂಭಿಸಿದರು. ಸ್ಥಳಕ್ಕಾಗಮಿಸಿದ್ದ ಸಾಲಿಗ್ರಾಮ ಠಾಣೆಯ ಇನ್ಸ್‌ಪೆಕ್ಟರ್ ಕೃಷ್ಣರಾಜು ನೇತೃತ್ವದ ಪೊಲೀಸರ ತಂಡ ಪ್ರತಿಭಟನಾಕಾರರನ್ನು ಸಮಾಧಾನಪಡಿಸುವಲ್ಲಿ ಯಶಸ್ವಿಯಾಯಿತು. ಈ ಸಂಬಂಧ ಸಾಲಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕ್ಕರೆ ಅದೇ ಸ್ವರ್ಗ

ವಿಜಯ ದಶಮಿಯಂದು, ರಾಮಲೀಲಾ ಮೈದಾನದಲ್ಲಿ ರಾವಣನ ಪ್ರತಿಮೆಗೆ ಬೆಂಕಿ ಹಚ್ಚಿ, ಉರಿಯುತ್ತಿರುವುದನ್ನು ನೋಡುತ್ತಾ ನಿಂತ ಜನರನ್ನು ರಾವಣ ಕೇಳಿದನಂತೆ...

"ದುಷ್ಟರೆ, ನೀವೆಲ್ಲಾ ಸೇರಿ ನನಗೆ ಯಾಕೆ ಬೆಂಕಿ ಹಚ್ಚಿದ್ದೀರಾ? ನಾನೇನು ನಿಮ್ಮ ಹೆಂಡತೀನ ಎತ್ತುಕೊಂಡು ಹೋಗಿದ್ದೀನಾ?"

ಆಗ ಒಬ್ಬ ಆಕ್ರೋಶದಿಂದ ಜೋರಾಗಿ ಕಿರುಚಿ ಹೇಳಿದನಂತೆ...

"ನಮ್ಮ ಹೆಂಡತೀನ ಎತ್ತುಕೊಂಡು ಹೋಗಿಲ್ಲ ಅಂತಾನೇ ನಾವು ನಿಮಗೆ ಬೆಂಕಿ ಹಚ್ಚಿದ್ದು!!!"

ಮೈಸೂರು ಮಿತ್ರ
ಸೋಮವಾರ, 8 ಮೇ 2023
ಸತ್ಯೇನೋತ್ಪಥಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಅಧ್ವರ್ಯನೊ, ಸೇನಾನಿಯೊ, ಕಮ್ಮಾರನೊ, ಚಮ್ಮಾರನೊ ಕಾಯಕವೆಲ್ಲವೂ ಪೂಜ್ಯ! – ಕುವೆಂಪು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಜ್ಜಿ ಹೋದರೂ ಕಡಿತ ಹೋಗಲಿಲ್ಲ...

ನಿಮ್ಮ ಪತ್ರಗಳು

ಮತದಾನದಲ್ಲಿ ಎಲ್ಲರೂ ಭಾಗವಹಿಸಿ..!!

ಮಾನ್ಯರೆ,

ಕರ್ನಾಟಕ ವಿಧಾನಸಭಾ ಚುನಾವಣೆಗೆ ಮೇ 10ರಂದು ಮತದಾನ ನಡೆಯಲಿದ್ದು, ಯೋಗ್ಯ ಅಭ್ಯರ್ಥಿಗೆ ನಿಮ್ಮ ಮತ ಚಲಾಯಿಸಬೇಕಾಗಿದೆ. ರಾಜ್ಯದಲ್ಲಿ 5,31,33,054 ನೋಂದಾಯಿತ ಮತದಾರರಿದ್ದಾರೆ. ಅದರೆ ಮತದಾನ ಮಾಡುವವರು ರಾಜ್ಯದಲ್ಲಿ ಸರಿ ಸುಮಾರು ಶೇ.70ರಷ್ಟು ಮಾತ್ರ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಯೇ ಪ್ರಭುವಾಗಿರುತ್ತಾನೆ. ಪ್ರತಿಯೊಂದು ಮತವು ಅಮೂಲ್ಯವಾದದ್ದು, ಮತದಾನವು ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಕರ್ತವ್ಯವಾಗಿರುತ್ತದೆ. ಆದ್ದರಿಂದಲೇ ಮೇ 10 ರಂದು ಎಲ್ಲಾ ಸರ್ಕಾರಿ, ಖಾಸಗಿ ಕಂಪನಿಗಳು, ಸಂಘ ಸಂಸ್ಥೆಗಳ ನೌಕರರಿಗೆ ವೇತನ ಸಹಿತ ರಜೆಯನ್ನು ಘೋಷಿಸಿದ್ದು, ಮತದಾನ ಮಾಡಲಿಕ್ಕೆ ಎಂದು ತಮಗೆ ತಿಳಿಯಬೇಕು. ಅದನ್ನು ಬಿಟ್ಟು ಬಹುಸಂಖ್ಯಾತ ನೌಕರರು ರಜೆಯನ್ನು ಪ್ರವಾಸಕ್ಕೆ ಕುಟುಂಬದೊಂದಿಗೆ ತೆರಳಿ ಮೋಜು, ಮಸ್ತಿಯನ್ನು ಮಾಡುವುದಕ್ಕೆ ಪ್ಲಾನ್ ಮಾಡಿಕೊಂಡಿರುತ್ತಾರೆ. ಪ್ರವಾಸಕ್ಕೆ ಯಾವಾಗಲಾದರೂ ಹೋಗಬಹುದು ಆದರೆ ಐದು ವರ್ಷಗಳಿಗೊಮ್ಮೆ ಬರುವ ಚುನಾವಣೆಯಲ್ಲಿ ತಮ್ಮ ಮತ ಚಲಾಯಿಸಿ, ದೇಶದ ಏಳಿಗೆಗಾಗಿ ಮತದಾನವು ಅತ್ಯವಶ್ಯಕವಾಗಿರುತ್ತದೆ.

ಒಂದೊಂದು ಮತವು ಅತ್ಯಮೂಲ್ಯವಾಗಿರುತ್ತದೆ, ರಾಷ್ಟ್ರ, ರಾಜ್ಯದ ಅಭಿವೃದ್ಧಿಗೆ ನಿಮ್ಮ ಮತ ಸಹಕಾರಿಯಾಗಲಿದೆ. 18 ವರ್ಷ ತುಂಬಿದ ಎಲ್ಲರೂ ಮತದಾನ ಮಾಡುವ ಅವಕಾಶವಿರುತ್ತದೆ. ಕಳೆದ ಚುನಾವಣೆಗೆ ಸಂದರ್ಭದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ಶೇಕಡವಾರು ಮತದಾನವನ್ನು ಗಮನಿಸಿದಾಗ ಶೇ.40, ಶೇ.50, ಶೇ.60, ಈ ರೀತಿಯ ಶೇಕಡವಾರು ಇರುತ್ತದೆ. ಕೆಲವರಂತು ಮನೆ ಬಿಟ್ಟು ಮತದಾನಕ್ಕೆ ಬರುವುದೇ ಇಲ್ಲ, ಅನೇಕ ಕಡೆ ಮತದಾನದ ಮಹತ್ವದ ಅರಿವನ್ನು ಜಾಹೀರಾತುಗಳ ಮೂಲಕ ಚುನಾವಣಾ ಆಯೋಗವು ಮೂಡಿಸುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ. ಯಾವುದೇ ಪಕ್ಷದ ಅಭ್ಯರ್ಥಿಗೆ ನಿಮ್ಮ ಮತವನ್ನು ಚಲಾಯಿಸಬಹುದು, ನಿಮ್ಮ ಒಂದು ಮತ ಒಬ್ಬ ಅಭ್ಯರ್ಥಿಯ ಭವಿಷ್ಯವನ್ನು ನಿರ್ಧರಿಸುತ್ತದೆ.

ಒಂದೊಂದು ಮತದಿಂದ ಅಭ್ಯರ್ಥಿಯು ಸೋಲನ್ನು ಕಂಡಿರುವ ಅದೆಷ್ಟೋ ಉದಾಹರಣೆಗಳಿವೆ, ಇನ್ನು ವಿಪರ್ಯಾಸವೆಂದರೆ ಅಭ್ಯರ್ಥಿಗಳ ಕುಟುಂಬ ಸದಸ್ಯರೇ ಮತದಾನವನ್ನು ಮಾಡುವುದಿಲ್ಲ, ಆದ್ದರಿಂದ ದಯವಿಟ್ಟು "ನಿಮ್ಮ ಮತ ನಿಮ್ಮ ಹಕ್ಕು" ಎಂದು ತಿಳಿದು ನೀವು ಮತವನ್ನು ಚಲಾಯಿಸಿ, ಯಾವುದೇ ಮತದಾರರು ಮತದಾನದಿಂದ ಹೊರಗುಳಿಯದೆ, ಇತರರನ್ನು ಮತ ಚಲಾಯಿಸುವಂತೆ ಪ್ರೋತ್ಸಾಹಿಸಬೇಕೆಂಬುದು ಕಳಕಳಿಯ ಮನವಿ.

– ಪರಶಿವಮೂರ್ತಿ ಎನ್.ಪಿ, ಶಿಕ್ಷಕರು, ನಂಜೀಪುರ, ಸರಗೂರು ತಾಲೂಕು.

ವಿದ್ಯಾರ್ಥಿಗಳಿಂದ ಸರ್ಕಾರಿ ಸೌಲಭ್ಯ ದುರುಪಯೋಗ

ಮಾನ್ಯರೆ,

ಇತ್ತೀಚೆಗೆ ಮೈಸೂರು ನಗರದ ಸಿಟಿ ಬಸ್‌ಗಳಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರಯಾಣದ ವ್ಯಾಪ್ತಿ ಮೀರಿ ಸಂಚರಿಸುತ್ತಿದ್ದಾರೆ. ಸಹಜವಾಗಿ ಇದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ನಷ್ಟವಾಗುತ್ತಿದೆ. ಇತ್ತೀಚೆಗೆ ಇಲವಾಲದಿಂದ ಮೈಸೂರು ನಗರ ಬಸ್ ನಿಲ್ದಾಣಕ್ಕೆ ಬಸ್ಸು ಕಿಕ್ಕಿರಿದು ಜನಸಂದಣಿಯಿಂದ ಬರುತ್ತಿತ್ತು. ಹಿನಕಲ್‌ನಿಂದ ಆಕಾಶವಾಣಿಯವರೆಗೆ ಸಂಚರಿಸಲು ಅನುಮತಿ ಇದ್ದರೂ ಅನುಮತಿ ಮೀರಿ ಸಿಬಿಎಸ್‌ಗೆ 4 ವಿದ್ಯಾರ್ಥಿನಿಯರು ಸಂಚರಿಸುತ್ತಿದ್ದರು. ಅಧಿಕಾರಿಗಳ ತಪಾಸಣೆ ಸಮಯದಲ್ಲಿ ಇವರೆಲ್ಲ ಸಿಕ್ಕಿಬಿದ್ದರು. ದಂಡ ಪಾವತಿಸಲು ಇವರ ಬಳಿ ಹಣ ಇರಲಿಲ್ಲ. ಪಾಪ ಅಮಾಯಕ ನಿರ್ವಾಹಕ ತನ್ನದಲ್ಲದ ತಪ್ಪಿಗಾಗಿ ಮೊಕದ್ದಮೆ ದಾಖಲಾಗಿ ದಂಡ ಕಟ್ಟುವಂತಾಯಿತು. ಸುಶಿಕ್ಷಿತರು ಈ ರೀತಿ ತಪ್ಪು ಹಾದಿ ಹಿಡಿಯಬಾರದು.

– ನೊಂದ ಪ್ರಯಾಣಿಕರು, ಮೈಸೂರು.

ಜನಸಂಖ್ಯೆ ಹೆಚ್ಚಳ ನಿಯಂತ್ರಣ ಅಗತ್ಯ

ಮಾನ್ಯರೆ,

ದೇಶದ ಜನಸಂಖ್ಯೆ 140 ಕೋಟಿ ದಾಟಿದ್ದು, ಈ ವರ್ಷದ ಮಧ್ಯ ಭಾಗದಲ್ಲಿ 142.86 ಕೋಟಿ ತಲುಪಲಿದೆ. ಜಗತ್ತಿನಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಚೀನಾ ದೇಶದ 142.57 ಕೋಟಿಯನ್ನು ದಾಟಲಿದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಕ್ಕೆ ಜನಸಂಖ್ಯೆಯ ಹೆಚ್ಚಳ ವರವು ಹೌದು ಮತ್ತು ಶಾಪವು ಆಗಬಹುದು.

ವಿಶೇಷವೆಂದರೆ ಭಾರತದ ಜನಸಂಖ್ಯೆಯಲ್ಲಿ ಶೇ. 68ರಷ್ಟು ಯುವ ಜನತೆಯನ್ನು ಹೊಂದಿದೆ ಎಂದರೆ 15–65 ವರ್ಷದೊಳಗಿನವರಾಗಿದ್ದಾರೆ. ಇದರಿಂದಾಗಿ ದುಡಿಯುವ ವರ್ಗದ ಸಂಖ್ಯೆಯನ್ನು ಗಮನಿಸಿದರೆ ಚೀನಾಕ್ಕಿಂತಲು ಹೆಚ್ಚು ಜನರನ್ನು ಹೊಂದಿದೆ.

ಭಾರತದ ಜನಸಂಖ್ಯೆಯನ್ನು ಸರಿಯಾದ ರೀತಿಯಲ್ಲಿ ಅಭಿವೃದ್ಧಿಗೆ ಪೂರಕವಾಗಿ ಬಳಸಿಕೊಂಡರೆ ಭಾರತ ವಿಶ್ವದ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಬಹುದಾಗಿದೆ. ಚೀನಾ ದೇಶ ಹೇಗೆ ತನ್ನ ಜನಸಂಖ್ಯೆಯನ್ನು ಬಳಸಿಕೊಂಡು ವಿಶ್ವದ ಮಾರುಕಟ್ಟೆಯನ್ನು ಆಕ್ರಮಿಸಿಕೊಂಡು, ಜಗತ್ತಿನ ಅತಿ ದೊಡ್ಡ ಉತ್ಪಾದಕ ದೇಶವೆಂಬ ಹೆಗ್ಗಳಿಕೆ ಗಳಿಸಿಕೊಂಡಿದೆಯೊ ಅದು ಭಾರತಕ್ಕೆ ಪ್ರೇರಣೆಯಾಗಬೇಕು.

ಭಾರತದ ಜನಸಂಖ್ಯೆಯನ್ನು ಕೌಶಲ್ಯಭರಿತರನ್ನಾಗಿಸಿ ಯುವಜನಾಂಗವನ್ನು ದೇಶದ ಆಸ್ತಿಯನ್ನಾಗಿಸಿದರೆ ಅದು ದೇಶದ ಪ್ರಗತಿಗೆ ಪೂರಕವಾಗಿರುತ್ತದೆ. ಜನಸಂಖ್ಯೆ ಹೆಚ್ಚಳವನ್ನು ಸರಿಯಾದ ರೀತಿಯಲ್ಲಿ ಅಭಿವೃದ್ಧಿ ಪಡಿಸದೆ ಹೋದರೆ ಅದು ದೇಶಕ್ಕೆ ಮಾರಕವಾಗಿ ಪರಿಣಮಿಸಲಿದೆ.

ಪ್ರಸ್ತುತ ಭಾರತ ನಿರುದ್ಯೋಗ, ವಸತಿ, ಆಹಾರ, ಆರೋಗ್ಯ, ಶಿಕ್ಷಣ, ಮೂಲಭೂತ ಸೌಕರ್ಯ ಮುಂತಾದ ಕ್ಷೇತಗಳಲ್ಲಿ ಸಮಸ್ಯೆ ಎದುರಿಸುತ್ತಿದ್ದು, ಇನ್ನೂ ಜನಸಂಖ್ಯೆ ಹೆಚ್ಚಾದರೆ ಅವರ ಯೋಗಕ್ಷೇಮ ನೋಡಿಕೊಳ್ಳುವುದು ಅಸಾಧ್ಯವಾಗುತ್ತದೆ. ಭಾರತದಂತಹ ಅಭಿವೃದ್ಧಿಶೀಲ ದೇಶವು ಜನಸಂಖ್ಯೆಯನ್ನು ನಿಯಂತ್ರಣ ಮಾಡುವುದು ಅನಿವಾರ್ಯವಾಗಿದೆ.

ಭಾರತದ ದೇಶದ ಜನಸಂಖ್ಯೆಯಲ್ಲಿ ಶೇ.25ರಷ್ಟು ಮಂದಿ 14 ವರ್ಷದೊಳಗೆ, ಶೇ.18ರಷ್ಟು ಮಂದಿ 10ರಿಂದ 19 ವರ್ಷದೊಳಗೆ, ಶೇ.26ರಷ್ಟು ಮಂದಿ 10–24 ವರ್ಷದೊಳಗೆ, ಶೇ.68ರಷ್ಟು ಮಂದಿ 15–64 ವಯಸ್ಸಿನೊಳಗೆ ಮತ್ತು ಶೇ.7ರಷ್ಟು ಮಂದಿ 65 ವರ್ಷ ವಯಸ್ಸಿನವರಾಗಿದ್ದು, ಇದು ಜಗತ್ತಿನ ದುಡಿಯುವ ಕ್ಷಮತೆಯ ಜನಸಂಖ್ಯೆಯಲ್ಲಿ ಭಾರತ ಮುಂದಿದೆ.

ಈ ಜನಸಂಖ್ಯೆಯನ್ನು ಭಾರತ ಮಾನವ ಸಂಪನ್ಮೂಲವನ್ನಾಗಿಸಿದರೆ ಇದು ದೇಶಕ್ಕೆ ಸಂಪತ್ತಾಗಿ ಪರಿಣಮಿಸುತ್ತದೆ. ಆದರೆ ಭಾರತದಲ್ಲಿನ ಯುವಜನಾಂಗದಲ್ಲಿನ ಇಚ್ಛಾಶಕ್ತಿ ಕೊರತೆ ಈ ಮಾರ್ಗದಲ್ಲಿ ತೊಡಕಾಗಿದೆ, ಆದ್ದರಿಂದ ಭಾರತ ಜನಸಂಖ್ಯೆಯನ್ನು ನಿಯಂತ್ರಣ ಮಾಡಲೇಬೇಕಾಗಿದ್ದು, ಸರ್ಕಾರ ಈ ಮಾರ್ಗದಲ್ಲಿ ಶೀಘ್ರ ಕಾರ್ಯ ಪ್ರವೃತ್ತವಾಗಬೇಕು ಮತ್ತು ಜನಸಂಖ್ಯೆ ನಿಯಂತ್ರಣಕ್ಕೆ ಕಠಿಣ ಕಾನೂನು ಅಗತ್ಯವಾಗಿದ್ದು, ಶೀಘ್ರವಾಗಿ ಈ ಕುರಿತು ಕಾನೂನು ಜಾರಿಯಾಗಬೇಕು.

– ರಾಸುಮ ಭಟ್, ಚಿಕ್ಕಮಗಳೂರು.

ಮುಖ್ಯಮಂತ್ರಿಯಾಗಿ ವರುಣಕ್ಕೆ ಸಿದ್ದರಾಮಯ್ಯ ಕೊಡುಗೆ ಶೂನ್ಯ

ಪುತ್ರ ಸೇರಿ 3 ಅವಧಿಗೆ ಕ್ಷೇತ್ರ ಪ್ರತಿನಿಧಿಸಿದರೂ ಅಭಿವೃದ್ಧಿ ಕಡೆಗಣನೆ; ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ವಾಗ್ದಾಳಿ

ಮೈಸೂರು, ಮೇ 7(ಪಿಎಂ)– ನೀವು ಮತ್ತು ನಿಮ್ಮ ಪುತ್ರ ಸೇರಿ ವರುಣ ಕ್ಷೇತ್ರದಲ್ಲಿ ಮೂರು ಅವಧಿಗೆ ಆಯ್ಕೆಯಾದರೂ ಕ್ಷೇತ್ರದಲ್ಲಿ ಹೇಳಿಕೊಳ್ಳುವಂತಹ ಅಭಿವೃದ್ಧಿ ಕೆಲಸವಾಗಿಲ್ಲ. ನಿಮ್ಮಿಂದ ಈ ಕ್ಷೇತ್ರ ಸಂಪೂರ್ಣ ಕಡೆಗಣಿಸಲ್ಪಟ್ಟಿದೆ. ನಿಮ್ಮ ಕೊಡುಗೆ ವರುಣ ಕ್ಷೇತ್ರಕ್ಕೆ ಶೂನ್ಯ ಎಂದು ವಸತಿ ಸಚಿವರೂ ಆದ ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ, ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯೂ ಆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ವಿಧಾನಸಭಾ ಚುನಾವಣೆ ಪ್ರಯುಕ್ತ ಭಾನುವಾರ ಹಮ್ಮಿಕೊಂಡಿದ್ದ ಪತ್ರಿಕಾ ಸಂವಾದದಲ್ಲಿ ಮಾತನಾಡಿದ ಅವರು, ನಾನು ಈವರೆಗೆ ಶಾಸಕನಾಗಿ ಪ್ರತಿನಿಧಿಸಿದ ಗೋವಿಂದರಾಜನಗರ ಕ್ಷೇತ್ರದ ಮಾದರಿಯಲ್ಲಿ ವರುಣ ಕ್ಷೇತ್ರವನ್ನು ಸರ್ವಾಂಗೀಣ ಅಭಿವೃದ್ಧಿ ಮಾಡಲು ನಮ್ಮ ವರಿಷ್ಠರು ಸಂದೇಶ ಕೊಟ್ಟು ನನ್ನನ್ನು ಇಲ್ಲಿ ಕಣಕ್ಕಿಳಿಸಿದ್ದಾರೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಸಾಹೇಬರು ಬುದ್ಧಿವಂತರು. ಹಲವು ಬಾರಿ ಬಜೆಟ್ ಮಂಡಿಸಿದವರು. ಆದರೆ ವರುಣ ಕ್ಷೇತ್ರ ಕಡೆಗಣಿಸಿದ್ದಾರೆ. ವರುಣ ಕ್ಷೇತ್ರವಾಗಿ 15 ವರ್ಷ ಪೂರ್ಣಗೊಂಡಿದೆ. 8 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳು ಇಲ್ಲಿವೆ. ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ನಿಮಗೆ ತೃಪ್ತಿಯಾಗಿದೆಯೇ? ಬನ್ನಿ ಜೊತೆಯಲ್ಲಿ ಹೋಗಿ ನೋಡೋಣ. ಇದು ಸವಾಲು ಅಲ್ಲ. ಮನವಿ ಎಂದು ಭಾವಿಸಿ ಎಂದು ಸಿದ್ದರಾಮಯ್ಯರಿಗೆ ಆಹ್ವಾನ ನೀಡಿದರು.

ಅದೃಷ್ಟದಲ್ಲೇ ಕಾಲ ಕಳೆದ ಸಿದ್ದರಾಮಯ್ಯ: ಕ್ಷೇತ್ರದಲ್ಲಿ ಒಂದು ಹಜ್ಜೆ ಗುರುತು ಉಳಿಯುವಂತದ್ದು ಇವರಿಂದ ಆಗಿಲ್ಲ. ವರುಣ ಗ್ರಾಮ ನೋಡಿದರೆ ಒಂದು ಪಂಚಾಯಿತಿ ಇದ್ದಂತೆಯೂ ಇಲ್ಲ. ತಗಡೂರನ್ನು ಪಪಂ ಮಾಡುವಂತೆ ಕೇಳಿದರೂ ಮಾಡಿಲ್ಲ. ತಾಂಡವಪುರದಲ್ಲಿ ಮೂಲಸೌಲಭ್ಯದ ಕೊರತೆ ತಾಂಡವವಾಡುತ್ತಿದೆ. ಕ್ಷೇತ್ರ ಮತ್ತು ಇಲ್ಲಿನ ಮತದಾರರಿಗಾಗಿ ಯಾವುದಾದರೂ ಹೆಜ್ಜೆ ಗುರುತು ಉಳಿಯುವಂತಹ ಕೆಲಸ ಮಾಡಿದ್ದರೆ ನಾನು ಆನಂದಪಡುತ್ತಿದ್ದೆ. ನನ್ನ ಗೋವಿಂದರಾಜನಗರ ಕ್ಷೇತ್ರಕ್ಕೆ ಬಂದು ನೋಡಿ. ತಾವು ಮುಖ್ಯಮಂತ್ರಿ ಆಗಿದ್ದವರು. ಆದರೂ ವರುಣದ ಕೆಲ ಹಳ್ಳಿಗಳಿಗೆ ಬಸ್ ಸೌಲಭ್ಯವೇ ಇಲ್ಲ. ಹಲವೆಡೆ ಸ್ವಚ್ಛತೆ ಮರೀಚಿಕೆಯಾಗಿದೆ. ಅದೃಷ್ಟದಲ್ಲೇ ಈವರೆಗೆ ಕಾಲ ಕಳೆದಿದ್ದೀರಿ. ಆ ಅದೃಷ್ಟಕ್ಕೂ ಒಂದು ಮಿತಿ ಇದ್ದೇ ಇರುತ್ತದೆ ಎಂದು ಲೇವಡಿ ಮಾಡಿದರು.

ವರುಣದ ಹತ್ತಾರು ಹಳ್ಳಿಗಳಲ್ಲಿ ಭಯಭೀತಿ ವಾತಾವರಣ ನೋಡಿದ್ದೇನೆ. ಹಾರೋಹಳ್ಳಿ ಮತ್ತು ಮೆಲ್ಲಹಳ್ಳಿಯಲ್ಲಿ ಪರಿಸ್ಥಿತಿ ನೋಡಲಾಗದು. ಈಶ್ವರಗೌಡನಹಳ್ಳಿ ಎಂಬ ದೊಡ್ಡ ಗ್ರಾಮದಲ್ಲಿ ರಸ್ತೆಗಳೇ ಸಮರ್ಪಕವಾಗಿಲ್ಲ. ರಾಜ್ಯದ ಪ್ರಭಾವಿ ನಾಯಕರು, ಮುಖ್ಯಮಂತ್ರಿ ಆಗಿದ್ದ ನಿಮಗೆ ನಿಮ್ಮ ಕಾರ್ಯವೈಖರಿ ಸರಿ ಕಾಣುತ್ತದೆಯೇ ಎಂದು ಪ್ರಶ್ನಿಸಿದರು.

ನಮ್ಮ ವರಿಷ್ಠರು ನನಗೆ ಎರಡು ಕ್ಷೇತ್ರ ಕೊಟ್ಟಿದ್ದಾರೆ. 72 ವರ್ಷದ ನಾನು ಭಗವಂತನ ದಯೆಯಿಂದ ಆರೋಗ್ಯವಾಗಿದ್ದೇನೆ. ಕ್ಷೇತ್ರದ ಬೀದಿ ಬೀದಿ ಸುತ್ತಿದ್ದೇನೆ. ಕ್ಷೇತ್ರವನ್ನು ಪೂರ್ಣ ಕಡೆಗಣಿಸಿ ಈಗ ಮತ್ತೆ ಜನ ಆಶೀರ್ವಾದ ಮಾಡುತ್ತಾರೆ ಎನ್ನುತ್ತಾರೆ. ಮೂರು ಬಾರಿ ಆಶೀರ್ವಾದ ಮಾಡಿ ಮುಖ್ಯಮಂತ್ರಿ ಮಾಡಿದರೂ ಕ್ಷೇತ್ರಕ್ಕೆ ಆಗಿದ್ದೇನು ತಮ್ಮಿಂದ. ಕ್ಷೇತ್ರದಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣವಿದ್ದು, ತಮ್ಮ ಕಾಲದಲ್ಲಿ ಇದರ ಅಭಿವೃದ್ಧಿ ಏಕೆ ಮಾಡಲಿಲ್ಲ ಎಂದು ಕಿಡಿಕಾರಿದರು.

1996ರಿಂದ ದ್ವೇಷ: ಮೈಸೂರು ನಗರಕ್ಕೆ ಹೊಂದಿಕೊಂಡಿರುವ ಮೂರು ಗ್ರಾಮಗಳಿಗೆ ಸಮರ್ಪಕ ರಸ್ತೆ ಮಾಡಿಲ್ಲ. ಸೋಮಣ್ಣ ಜಾತಿ ರಾಜಕಾರಣ ಮಾಡುತ್ತಿದ್ದೇನೆ ಎಂದು ಸುಳ್ಳು ಆರೋಪ ಬೇರೆ ಮಾಡುತ್ತಾರೆ. 'ನಾನು.. ನಾನು...' ಎನ್ನುವುದು ಯಾರಿಗೂ ಒಳ್ಳೆಯದಲ್ಲ. 1996ರಲ್ಲಿ ದೇವೇಗೌಡರು ಪ್ರಧಾನಿಯಾದಾಗ, ಅವರ ದೂರದೃಷ್ಟಿಯೋ ಏನೋ ಜೆ.ಹೆಚ್. ಪಟೇಲ್ ಅವರನ್ನು ಮುಖ್ಯಮಂತ್ರಿ ಮಾಡಿದರು. ಆಗಿನಿಂದ ನಿಮಗೆ ಯಾರ ಮೇಲೆ ದ್ವೇಷ ಇದೆ. ಅದು ಯಾವ ಹಂತದಲ್ಲಿ ಎಂಬುದನ್ನು ತಾವೇ ಯೋಚನೆ ಮಾಡಿ ಎಂದು ಕುಟುಕಿದರು.


ನಮ್ಮ ವರಿಷ್ಠರ ಸೂಚನೆ ಮೇರೆಗೆ ಅಭಿವೃದ್ಧಿ ಮಾಡಬೇಕೆಂದು ಇಲ್ಲಿ ಬಂದಿದ್ದೇನೆ. 2013ರಲ್ಲಿ ಮುಖ್ಯಮಂತ್ರಿ ಆಗುತ್ತಾರೆ ಎಂದು ಕ್ಷೇತ್ರದ ಜನತೆ ಓಟು ಹಾಕಿದರು. ಅದಾದ ಮೇಲೆ ನೀವು ಮಾಡಿದ್ದೇನು. ಧರ್ಮವನ್ನೇ ಒಡೆಯಲು ಹೋದ್ರಿ. ಯಾವ ಅದೃಷ್ಟ ನಿಮ್ಮನ್ನು ಇಲ್ಲಿಯವರೆಗೆ ಕರೆತಂದಿದೆಯೋ ಗೊತ್ತಿಲ್ಲ. ಕ್ಷೇತ್ರದಲ್ಲಿ ಕೆಲಸ ಮಾಡಿ ಹೆಜ್ಜೆ ಗುರುತು ಬಿಟ್ಟವರಲ್ಲ. ನೀವು ಅದೃಷ್ಟದ ರಾಜಕಾರಣಿ. ಅದೃಷ್ಟ ಇದೆ ಎಂದು ಈಗ ತಲೆಯನ್ನು ಬಂಡೆಗೆ ಹೊಡೆದುಕೊಳ್ಳುತ್ತಿದ್ದೀರಿ ಎಂದು ಲೇವಡಿ ಮಾಡಿದರು.

ಸಿದ್ದರಾಮಯ್ಯ ಮರೆತಿದ್ದಾರೆ: ಇವರು ಒಂದು ಮನೆ ಕೊಟ್ಟಿಲ್ಲ ಎಂದು ಸಿದ್ದರಾಮಯ್ಯನವರು ಆರೋಪ ಮಾಡಿದ್ದಾರೆ. ಈ ಮೂರು ವರ್ಷಗಳಲ್ಲಿ ವರುಣ ಕ್ಷೇತ್ರ ಒಂದಕ್ಕೆ 4,445 ಮನೆಗಳನ್ನು ಕೊಟ್ಟಿದ್ದೇನೆ. ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದಾಗ, ವರುಣಗೆ 10,064 ಮನೆ ಕೊಟ್ಟಿದ್ದೇನೆ. 'ಸೋಮಣ್ಣ 8 ಸಾವಿರಕ್ಕೂ ಅಧಿಕ ಮನೆ ಕೊಟ್ಟಿದ್ದೀಯಾ ಕಣಯ್ಯ' ಎಂದು ಸಿದ್ದರಾಮಯ್ಯನವರೇ ಹೇಳಿದ್ದರು. ಈಗ ಅದನ್ನು ಮರೆತಿದ್ದಾರಾ ಎಂದು ಪ್ರಶ್ನಿಸಿದರು.

ತಮ್ಮ ಸರ್ಕಾರದಲ್ಲಿ 15 ಲಕ್ಷ ಮನೆಗಳನ್ನು ಮಂಜೂರು ಮಾಡಿರುವುದಾಗಿ ಸಿದ್ದರಾಮಯ್ಯ ಹೇಳಿಕೊಂಡಿದ್ದಾರೆ. ಅದರಲ್ಲಿ 6 ಲಕ್ಷಕ್ಕೂ ಅಧಿಕ ಮನೆ ನಾನು ಕೊಟ್ಟಿರುವುದೇ ಆಗಿವೆ. 2018–19ರಲ್ಲಿ ಇವರು ಅಧಿಕಾರ ಬಿಟ್ಟು ಹೋಗುವಾಗ, ಒಂದೇ ಬಾರಿಗೆ 8ರಿಂದ 10 ಲಕ್ಷ ಮನೆಗಳನ್ನು ಮಂಜೂರು ಮಾಡಿದರು. ಅವುಗಳ ಮುಂದಿನ ಹಂತದ ಕೆಲಸ ನಮ್ಮ ಜವಾಬ್ದಾರಿಗೆ ಬಂದಿತು. ಪ್ರಸ್ತುತ 5 ಲಕ್ಷ ಮಂಜೂರು ಮಾಡಿ, ಪೂರ್ಣಗೊಳಿಸಿದ್ದೇವೆ ಎಂದು ಪ್ರತ್ಯುತ್ತರ ನೀಡಿದರು.

ವರ್ಣರಂಜಿತ ವರುಣ: ಒಬ್ಬ ನಾಯಕ ನೀವು. ಇನ್ನೊಬ್ಬರ ಕೆಲಸ ಗೌರವಿಸಿ. ಅದು ನಿಜವಾದ ನಾಯಕತ್ವ. ನೀವು ವರುಣ ಕ್ಷೇತ್ರವನ್ನು ವರ್ಣರಂಜಿತ ಮಾಡಿಟ್ಟಿದ್ದೀರಿ. ಇಲ್ಲಿ ಯಾರಿಗಾದರೂ ಅನುಕೂಲ ಆಗಿದ್ದರೆ ಅದು ಒಂದೇ ವರ್ಗಕ್ಕೆ ಮಾತ್ರ. ಇದು ಆಗಬಾರದು ಎಂದು ಹೇಳಿದರು.

ಮತದಾರರು ನಮಗೆ ದೇವರು. ಅವರಿಗೆ ಜಾತಿ, ವರ್ಗ ಬೇಕಿಲ್ಲ. ಅವರಿಗೆ ಬೇಕಿರುವುದು ಮೂಲಭೂತ ಸೌಕರ್ಯ, ನೆಮ್ಮದಿಯ ಜೀವನ. ಅದನ್ನು ಮಾಡುವುದು ಬಿಟ್ಟು ಕ್ಷೇತ್ರವನ್ನು ನಾಲ್ಕು ಜನಕ್ಕೆ ಬಿಟ್ಟು ಬಿಟ್ಟಿದ್ದೀರಾ. ಅವರು ಏನು ಬೇಕೋ ಮಾಡಿಕೊಂಡಿದ್ದಾರೆ ಎಂದು ಸಿದ್ದರಾಮಯ್ಯ ವಿರುದ್ಧ ಆರೋಪಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ ಮತ್ತಿತರರು ಹಾಜರಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ವಿಧಾನಸಭಾ ಚುನಾವಣೆ ಪ್ರಯುಕ್ತ ಭಾನುವಾರ ಹಮ್ಮಿಕೊಂಡಿದ್ದ ಪತ್ರಿಕಾ ಸಂವಾದದಲ್ಲಿ ಸಚಿವರೂ ಆದ ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಮಾತನಾಡಿದರು.

ನನ್ನದೇನೂ ಉದ್ದೇಶ ಇಲ್ಲ, ಎಲ್ಲವೂ ವಿಧಿನಿಯಮ

ಮೈಸೂರು,ಮೇ 7(ಪಿಎಂ)– ಗೋವಿಂದರಾಜನಗರ ಬಿಟ್ಟು ವರುಣ ಮತ್ತು ಚಾಮರಾಜನಗರದಲ್ಲಿ ತಮ್ಮನ್ನು ಕಣಕ್ಕಿಳಿಸಲು ಬಿಜೆಪಿ ವರಿಷ್ಠರು ತಮ್ಮೊಂದಿಗೆ ನಡೆಸಿದ ಮಾತುಕತೆಗಳನ್ನು ವಿ.ಸೋಮಣ್ಣ ವಿವರಿಸಿದರಲ್ಲದೆ, ಎರಡು ಕಡೆ ಹೋಗಬೇಕೆಂದು ಸೂಚನೆ ಕೊಟ್ಟರು. ಅಂತೆಯೇ ಬಂದಿದ್ದೇನೆ. ಇಲ್ಲಿ ನನ್ನದೇನೂ ಉದ್ದೇಶ ಇಲ್ಲ. ಎಲ್ಲವೂ ವಿಧಿನಿಯಮ ಎಂದು ತಿಳಿಸಿದರು.

ಪಕ್ಷದ ವರಿಷ್ಠರಾದ ಅಮಿತ್ ಶಾ ಅವರು ಇದ್ದಕ್ಕಿದ್ದಂತೆ ನಮ್ಮ ಮನೆಗೆ ಬರುತ್ತೇನೆ ಎಂದಿದ್ದರು. ಅವರನ್ನು ನಾನೇ ಬಂದು ಭೇಟಿ ಮಾಡುತ್ತೇನೆಂದು ನಮ್ಮ ಬಿ.ಎಲ್.ಸಂತೋಷ್ ಅವರಿಗೆ ಹೇಳಿದ್ದೆ. ಅದಕ್ಕೆ ಅವರು, ಅಮಿತ್ ಶಾ ಅವರು ಆದಿಚುಂಚನಗಿರಿ ಮಠಕ್ಕೆ ಬರುತ್ತಿದ್ದು, ಇದೇ ವೇಳೆ ನಿಮ್ಮ ಮನೆಗೆ ಬಂದು ಟೀ ಕುಡಿದು ಹೋಗುತ್ತಾರೆ ಎಂದರು. ಅಂತೆಯೇ ಅಮಿತ್ ಶಾ ಬಂದರು.

ಒಂದು ಚೀಟಿ ತೆಗೆದು ಒಂದೆರಡು ಪ್ರಶ್ನೆ ಕೇಳಿದರು. ಬಳಿಕ ದೆಹಲಿಗೆ ಆಹ್ವಾನ ನೀಡಿದರು. ಅಲ್ಲಿ ಹೋದಾಗ, ನಿಮಗೊಂದು ಟಾಸ್ಕ್ ಕೊಡುತ್ತಿದ್ದೇವೆ ಎಂದು ವರುಣ ಮತ್ತು ಚಾಮರಾಜನಗರದಲ್ಲಿ ಸ್ಪರ್ಧಿಸುವಂತೆ ಹೇಳಿದರು. ಅದನ್ನು ಕೇಳಿ ನಾನು, ನಯವಾಗಿಯೇ ಆಗುವುದಿಲ್ಲ. ನನ್ನ ಮಗನಿಗೊಂದು ಸೀಟು ಕೊಟ್ಟರೆ ಸಾಕು ಎಂದು ಹೇಳಿದೆ. ಅದಕ್ಕವರು, ಬೆಂಗಳೂರಲ್ಲಿ ನೀವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೀರಿ. ಆ ಎರಡೂ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ನಿಮ್ಮಿಂದ ಆಗಬೇಕೆಂಬ ವರಿಷ್ಠರ ಸೂಚನೆ ಮೇರೆಗೆ ನಾನು ಇಲ್ಲಿ ಬಂದೆ ಎಂದು ವಿವರಿಸಿದರು.

ನಾನು ಹೇಡಿ ಅಲ್ಲ, ಕಿಲಾಡಿ!

ಮೈಸೂರು, ಮೇ 7(ಪಿಎಂ)– ನಿಮ್ಮ ಬಗ್ಗೆ ಯಾವಾಗಲೂ ಗೌರವದಿಂದಲೇ ಮಾತನಾಡುತ್ತೇನೆ. ಅಂದಮಾತ್ರಕ್ಕೆ ನಾನು ಹೇಡಿ ಅಲ್ಲ. ನಾನೊಬ್ಬ ಕಿಲಾಡಿ. ನಾನು ಜನರ ಮಧ್ಯದಲ್ಲಿದ್ದೇನೆ ಎಂದು ಸಿದ್ದರಾಮಯ್ಯರನ್ನು ವಿ.ಸೋಮಣ್ಣ ಕುಟುಕಿದರು.

ವರುಣದಲ್ಲಿ ಹತ್ತಾರು ಜನ ನಿಮ್ಮವರೇ ಕಂಟ್ರ್ಯಾಕ್ಟರು. ನಿಮ್ಮದೇ ಪಾಳೇಗಾರಿಕೆ. ಇದೆಲ್ಲಾ ಏಕೆ ಬೇಕು. ನಮ್ಮ ಸರ್ಕಾರದ ಮೀಸಲಾತಿ ಹಂಚಿಕೆಯನ್ನು ಅಧಿಕಾರಕ್ಕೆ ಬಂದರೆ ವಾಪಸ್ಸು ಪಡೆಯುತ್ತೇವೆ ಎನ್ನುತ್ತೀರಿ. ಹಾಗೆ ಮಾಡಿದರೆ ವೀರಶೈವರು, ಒಕ್ಕಲಿಗರು, ಪರಿಶಿಷ್ಟ ಜಾತಿ–ವರ್ಗದವರ ಆಕ್ರೋಶಕ್ಕೆ ತುತ್ತಾಗುತ್ತೀರಿ ಎಂದು ಛೇಡಿಸಿದರು.

ನಾನು ನಾಯಕ ಎಂಬುದು ನನ್ನ ತಲೆಯಲ್ಲಿ ಇಲ್ಲ. ನಾನು ಕಾರ್ಯಕರ್ತ ಅಷ್ಟೇ. ನಮ್ಮ ಕುಟುಂಬಕ್ಕೂ ಮತ್ತು ರಾಜ್‌ಕುಮಾರ್ ಕುಟುಂಬಕ್ಕೂ ಅವಿನಾಭಾವ ಸಂಬಂಧವಿದೆ. ಶಿವರಾಜ್ ಕುಮಾರ್ ನಿಮ್ಮ ಪರ ಪ್ರಚಾರ ಮಾಡಿದ್ದಕ್ಕೆ ಬೇಸರ ವ್ಯಕ್ತಪಡಿಸಿದ್ದು ಬಿಟ್ಟರೆ ಆ ಬಗ್ಗೆ ಹೆಚ್ಚು ಮಾತನಾಡಿಲ್ಲ. ಆದರೆ ನೀವು ಲೂಸ್ ಮಾದ, ದುನಿಯಾ ವಿಜಿ, ರಮ್ಯ ಅವರನ್ನು ಕರೆತಂದು ಪ್ರಚಾರ ಮಾಡಿಸುತ್ತಿದ್ದೀರಿ. ಈ ಹಿಂದೆ ನಾನೇ ದೊಡ್ಡ ನಾಯಕ, ಕ್ಷೇತ್ರಕ್ಕೆ ನಾನು ಹೋಗುವುದೇ ಇಲ್ಲ ಎನ್ನುತ್ತಿದ್ದ ನೀವು ಈಗ ಹತಾಶರಾಗಿದ್ದೀರಿ. ಸೋಲಿನ ಭೀತಿಗೆ ಒಳಗಾಗಿದ್ದು, ಅದಕ್ಕಿಂತಲೂ ಕ್ಷೇತ್ರದ ಜನಕ್ಕೆ ನೀವು ಏನೂ ಮಾಡಿಲ್ಲ ಎಲ್ಲಾ ವರ್ಗದವರಿಗೆ ವಂಚನೆ ಮಾಡಿದ್ದೀರಿ. 40ರಿಂದ 50 ಬಾಲ ಬುಡುಕರನ್ನು ಇಟ್ಟುಕೊಂಡಿದ್ದೀರಿ ಎಂದು ಸಿದ್ದರಾಮಯ್ಯ ವಿರುದ್ಧ ದೂರಿದರು.

ಒಂದು ಕಡೆ ವೀರಶೈವರ ಕ್ಷಮೆ ಕೇಳುತ್ತೇನೆ ಎನ್ನುತ್ತೀರಿ. ಇನ್ನೊಂದು ಕಡೆ ವೀರಶೈವ ಮುಖ್ಯಮಂತ್ರಿಗಳು ಭ್ರಷ್ಟರು ಎನ್ನುತ್ತೀರಿ. ಏಕೆ ಇದು. ಇಲ್ಲಿ ಕೆಲಸ ಮಾಡಲು ಕಳುಹಿಸಿದ್ದಾರೆ. ನನಗೊಂದು ಅವಕಾಶ ಮಾಡಿಕೊಡಿ ಸಿದ್ದರಾಮಯ್ಯ ಸಾಹೇಬರೇ. ಕೆಲಸ ಮಾಡುತ್ತೇನೆ. ಆ ಕೆಲಸಗಳಿಗೆ ನಿಮ್ಮ ಹೆಸರನ್ನು ಹಾಕುತ್ತೇನೆ ಎಂದು ಕುಟುಕಿದ ಅವರು, ನಾನು, ಬಳಿಕ ಮಗ, ನಂತರ ಮೊಮ್ಮಗ ಎಂಬುದು ನಿಮಗೆ ಏಕೆ ಬಂತು. ನೀವೇ ಒಂದು ಕಾಲದಲ್ಲಿ ಬೈಯುತ್ತಿದ್ರಿ (ಕುಟುಂಬ ರಾಜಕಾರಣದ ಬಗ್ಗೆ). ಇತ್ತೀಚೆಗೆ ಹಳಿ ತಪ್ಪಿದ್ದಾರೋ ಏನೋ ಗೊತ್ತಿಲ್ಲ ಎಂದರಲ್ಲದೆ, ಕ್ಷೇತ್ರದ ಮತದಾರರಲ್ಲಿ ಅಭಿವೃದ್ಧಿ, ಮೂಲಸೌಲಭ್ಯ ಮತ್ತು ಶಾಂತಿ–ನೆಮ್ಮದಿಗಾಗಿ ಈ ಬಾರಿ ನನಗೆ ಮತ ನೀಡಬೇಕೆಂದು ವಿನಂತಿಸಿದರು.

ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ ಎಂಬುದು ಕನಸು

ಮೈಸೂರು, ಮೇ 7(ಪಿಎಂ)– ಸಿದ್ದರಾಮಯ್ಯ ಅವರು ಈಗಾಗಲೇ ಮುಖ್ಯಮಂತ್ರಿಯಾಗಿದ್ದೂ ಆಗಿದೆ. ಅವರು ಮತ್ತೆ ಮುಖ್ಯಮಂತ್ರಿ ಆಗುತ್ತಾರೆ ಎಂಬುದು ಕನಸು ಎಂದು ವಿ.ಸೋಮಣ್ಣ ಹೇಳಿದರು.

ಸಿದ್ದರಾಮಯ್ಯನವರು ನಾನು ಮುಖ್ಯಮಂತ್ರಿ ಆಗುತ್ತೇನೆ ಓಟು ಕೊಡಿ ಎಂದು ಕೇಳುತ್ತಿದ್ದಾರೆ. ಹಾಗಾದರೆ ಮುಖ್ಯಮಂತ್ರಿ ಆಗುವ ಅಭ್ಯರ್ಥಿಗೆ ಓಟು ಹಾಕಬೇಕೋ ಅಥವಾ ನಿಮಗೆ ಓಟು ಹಾಕಬೇಕೋ ಎಂಬ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು. ಹೋದ ಬಾರಿ ಅವಕಾಶ ಕೊಟ್ಟರೂ ಕ್ಷೇತ್ರದ ಜನರಿಗೆ ನೀವು (ಸಿದ್ದರಾಮಯ್ಯ) ವಂಚನೆ ಮಾಡಿದ್ದೀರಿ. ಈ ಬಾರಿ ಆ ಪರಿಸ್ಥಿತಿ ಬರುವುದಿಲ್ಲ ಎಂದು ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದರು.

ಸೋಮಣ್ಣರನ್ನು ಅವರ ಪಕ್ಷದವರೇ ವರುಣದಲ್ಲಿ ಹರಕೆ ಕುರಿ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ವಲಯದಲ್ಲಿ ಹೇಳಲಾಗುತ್ತಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಅವರಿಗೆ ಇನ್ನೇನು ಹೇಳಲು ಸಾಧ್ಯ. ನನ್ನ ಮೇಲೆ ಹೇಳುವಂತದ್ದೂ ಏನೂ ಇಲ್ಲ. ನಾನೊಬ್ಬ ಕೆಲಸಗಾರ. ನನ್ನ ಕೆಲಸಗಳು ನನ್ನ ಕೈಹಿಡಿಯಲಿವೆ. ನಾನು ಕೊಟ್ಟಿರುವ ಸಂದೇಶ ಕ್ಷೇತ್ರದ ಜನತೆ ತಲುಪಿದೆ. ಇದೇ ರೀತಿ ಹೇಳಿ ಹೇಳಿ ಸಿದ್ದರಾಮಯ್ಯರನ್ನು ದಾರಿ ತಪ್ಪಿಸಿ, ಬಾದಾಮಿಗೆ ಕಳುಹಿಸಿದ್ದರು. ಈಗ ಕೋಲಾರಕ್ಕೆ ಕಳುಹಿಸಿ, ವಾಪಸ್ಸು ವರುಣಗೆ ಕರೆತಂದಿದ್ದಾರೆ ಎಂದು ವ್ಯಂಗ್ಯವಾಡಿದರು.

ಸೋಮಣ್ಣನವರ ಬಗ್ಗೆ ವರಿಷ್ಠರಲ್ಲಿ ನಿಜವಾದ ಕಾಳಜಿ ಇದ್ದಿದ್ದರೆ ಗೋವಿಂದರಾಜನಗರದಲ್ಲಿಯೂ ಟಿಕೆಟ್ ನೀಡಿ ವರುಣದಲ್ಲೂ ಸ್ಪರ್ಧೆಗೆ ಅವಕಾಶ ನೀಡಬಹುದಿತ್ತು ಎನ್ನುವ ಮಾತಿದೆ ಎಂಬ ಬಗ್ಗೆ ಪ್ರತಿಕ್ರಿಯಿಸಿ, ನನ್ನ ಪಕ್ಷದ ನಾಯಕರ ತೀರ್ಮಾನದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳನ್ನು ಬೆಂಗಳೂರು ಮಾದರಿ ಅಭಿವೃದ್ಧಿಗೊಳಿಸುವ ಆಲೋಚನೆ ಇದೆ ಎಂದರು.

ಗೋವಿಂದರಾಜನಗರ ಕ್ಷೇತ್ರದ ಅಭಿವೃದ್ಧಿ ಮಾಡದ ಹಿನ್ನೆಲೆಯಲ್ಲಿಯೇ ಸೋಮಣ್ಣರನ್ನು ಇಲ್ಲಿಗೆ ಕಳುಹಿಸಿದ್ದಾರೆ ಎಂದೂ ಹೇಳಲಾಗಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಇದೆಲ್ಲಾ ಹೇಳುವುದು ಇದ್ದದ್ದೆ. ಒಬ್ಬ ಒಳ್ಳೆಯ ಕೆಲಸಗಾರನಿಗೆ ಜನ ಬೆಂಬಲಿಸಲಿದ್ದಾರೆ ಎಂದು ತಿಳಿಸಿದರು.

ವರುಣದಲ್ಲಿ ಬಿಜೆಪಿ ಕಾರ್ಯಕರ್ತರ ಮೇಲಿನ ಹಲ್ಲೆ ಬಗ್ಗೆ ಪ್ರತಿಕ್ರಿಯಿಸಿ, ಈ ಸೃಷ್ಟಿ ಮಾಡಲಿಕ್ಕೆ ಪುಣ್ಯಾತ್ಮರು ಮೂರು ಬಾರಿ ಗೆದ್ದಿರುವುದು. ಈ ಕಿಲಾಡಿ ಸೋಮಣ್ಣ 2013, 2018ರಲ್ಲಿ ಇಲ್ಲಿ ಸ್ಪರ್ಧೆ ಮಾಡಿದ್ದರೆ ಈ ರೀತಿ ಆಗುತ್ತಿರಲಿಲ್ಲ ಎಂದರಲ್ಲದೆ, ಪ್ರಚಾರಕ್ಕೆ ಸ್ಟಾರ್‌ಗಳನ್ನು ಕರೆತರುತ್ತಿದ್ದೀರಿ ಏಕೆ. ಡಾ.ಜಿ.ಪರಮೇಶ್ವರ್, ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್ ಅವರು ಎಲ್ಲಿ ಹೋದರು ಎಂದ ಅವರು, ಹಲ್ಲೆಗೆ ಪೂರ್ಣ ಕಾರಣ, ಒಂದು ವರ್ಗದ ಜನ ಎಂದು ದೂರಿದರು.

ಸಂಸದ ಪ್ರತಾಪ್ ಸಿಂಹ ಅವರ ಕೆಲ ಹೇಳಿಕೆಗಳು ನಿಮಗೆ ಡ್ಯಾಮೇಜ್ ಉಂಟು ಮಾಡಲಿದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಪ್ರತಾಪ್ ಸಿಂಹ ಒಬ್ಬ ಭವಿಷ್ಯದ ನಾಯಕ. ಮೈಸೂರು–ಕೊಡಗು ಜಿಲ್ಲೆಗಳಿಗೆ ಅವರ ಕೊಡುಗೆ ಅಪಾರ. ಅವರ ಹೇಳಿಕೆಗಳಿಂದ ಯಾವುದೇ ಡ್ಯಾಮೇಜ್ ಆಗುವುದಿಲ್ಲ ಎಂದರು. ವರುಣದಲ್ಲಿ ಸೋಮಣ್ಣರಿಗೆ ಕಾಣದ ಕೈಗಳ ಬೆಂಬಲ ಸಿಗುತ್ತದೆಯೇ? ಎಂಬುದಕ್ಕೆ ತಾಯಿ ಚಾಮುಂಡಿಯನ್ನೇ ಕೇಳಬೇಕು ಎಂದು ಪ್ರತಿಕ್ರಿಯಿಸಿದರು.

ಸಿಎಂ ಸ್ಥಾನಕ್ಕೇರುವ ಅರ್ಹತೆ ನನಗೂ ಇದೆ ಎಂದು ಹೇಳಿಕೊಂಡಿದ್ರಿ ಎಂಬ ಬಗ್ಗೆ ಪ್ರತಿಕ್ರಿಯಿಸಿ, ಬಸವರಾಜ ಬೊಮ್ಮಾಯಿ ಅವರು ಈಗ ಮುಖ್ಯಮಂತ್ರಿ ಆಗಿದ್ದಾರೆ. ಸಂದರ್ಭ ಬಂದಾಗ ನಮ್ಮ ವರಿಷ್ಠರು ತೀರ್ಮಾನ ಮಾಡುತ್ತಾರೆ. ನನಗೆ ಗೊತ್ತಿರುವುದು ಒಂದೇ, ಅದು ಅಭಿವೃದ್ಧಿ ಎಂದು ಹೇಳಿದರು.

ನಂಜುಂಡೇಶ್ವರನ ದರ್ಶನ ಪಡೆದ ಪ್ರಧಾನಿ ಮೋದಿ





ನಂಜನಗೂಡು ಮೇ 7– ಪ್ರಧಾನಿ ನರೇಂದ್ರ ಮೋದಿ ರವರು ನಂಜನಗೂಡು ಶ್ರೀಕಂಠೇಶ್ವರ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರಲ್ಲದೆ, ದೇಶದ ಹಿತಕ್ಕಾಗಿ ವಿಶೇಷ ಸಂಕಲ್ಪ ಪೂಜೆ ನೆರವೇರಿಸಿದರು.

ಸಮಾವೇಶದಿಂದ ದೇವಾಲಯಕ್ಕೆ ತೆರಳಿದ ಮೋದಿ ಅವರಿಗೆ ದೇವಾಲಯದ ವತಿಯಿಂದ ಮಂಗಳವಾದ್ಯದೊಂದಿಗೆ ಸ್ವಾಗತಿಸಲಾಯಿತು. ಮೊದಲಿಗೆ ಮೋದಿ ಗಣಪತಿ, ಸುಬ್ರಹ್ಮಣ್ಯರ ದರ್ಶನ ಪಡೆದು ಮಂಗಳಾರತಿ ಸ್ವೀಕರಿಸಿದರು. ನಂತರ ಶ್ರೀಕಂಠೇಶ್ವರ ಗರ್ಭಗುಡಿಯಲ್ಲಿ ಲೋಕ ಕಲ್ಯಾಣಾರ್ಥವಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿ, ಸಂಕಲ್ಪ ಪೂಜೆ ನೆರವೇರಿಸಿದರು. ಈ ವೇಳೆ ಗರ್ಭಗುಡಿಯಲ್ಲಿ 5 ನಿಮಿಷ ಧ್ಯಾನಸಕ್ತರಾಗಿದ್ದರು. ನಂತರ ಮಂಗಳಾರತಿ ಸ್ವೀಕರಿಸಿ, ಪಾರ್ವತಿ ದೇವಿಯ ದರ್ಶನ ಪಡೆದರು. ಅಲ್ಲಿಂದ ನಾರಾಯಣಸ್ವಾಮಿ ನಂತರ ನಂದಿಯ ದರ್ಶನ ಪಡೆದರು.

ದೇವಾಲಯದ ವತಿಯಿಂದ ಮೋದಿ ಅವರಿಗೆ ಶ್ವೇತವಸ್ತ್ರ, ಫಲತಾಂಬೂಲದೊಂದಿಗೆ ಆತ್ಮೀಯವಾಗಿ ಅಭಿನಂದಿಸಲಾಯಿತು. ನಾನು ಉತ್ತರ ಕಾಶಿಯಿಂದ ದಕ್ಷಿಣ ಕಾಶಿಯ ದೇವಾಲಯಕ್ಕೆ ಭೇಟಿ ನೀಡಿದ್ದೇನೆ. ನೀವೆಲ್ಲಾ ದೇವರ ದರ್ಶನ ಮಾಡಿಸಿರುವುದು ಖುಷಿ ತಂದಿದೆ. ನೀವೆಲ್ಲಾ ದೇವರನ್ನು ಸ್ಪರ್ಶಿಸಿ ಪೂಜೆ ಸಲ್ಲಿಸಿ ಜನರ ಹಿತಕ್ಕಾಗಿ ಪ್ರತಿದಿನ ಪ್ರಾರ್ಥನೆ ಸಲ್ಲಿಸಿದ್ದೀರಿ. ದೇವರ ಸೇವಾ ಕಾರ್ಯ ಹೀಗೆಯೇ ಮುಂದುವರೆಯಲಿ ಎಂದು ಅರ್ಚಕರಿಗೆ ತಿಳಿಸಿದರಲ್ಲದೆ ಅಲ್ಲಿನ ಸಿಬ್ಬಂದಿಯೊಂದಿಗೆ ಫೋಟೋ ತೆಗೆಸಿಕೊಂಡರು.

ಅಲ್ಲಿಂದ ಚಾಮರಾಜನಗರ ಬೈಪಾಸ್ ರಸ್ತೆ ಮೂಲಕ ಮೈಸೂರಿನ ವಿಮಾನ ನಿಲ್ದಾಣಕ್ಕೆ ತೆರಳಿ ದೆಹಲಿಗೆ ಪ್ರಯಾಣ ಬೆಳೆಸಿದರು. ರಸ್ತೆಯುದ್ದಕ್ಕೂ ಇಕ್ಕೆಲಗಳಲ್ಲಿ ಜಮಾಯಿಸಿದ್ದ, ಜನ ಮೋದಿಯವರನ್ನು ಕಂಡು ಸಂಭ್ರಮಿಸಿದರು. ಕೆಲವರು ಮೋದಿ ಕಾರಿಗೆ ಹೂಮಳೆಗರೆದರು.

ಕಾಂಗೋದಲ್ಲಿ ಭಾರೀ ಪ್ರವಾಹ: 178ಕ್ಕೂ ಹೆಚ್ಚು ಮಂದಿ ಸಾವು

ಬುಕಾವು: ಕಾಂಗೊ ಪ್ರಜಾತಾಂತ್ರಿಕ ಗಣರಾಜ್ಯದ ದಕ್ಷಿಣ ಕಿವು ಪ್ರಾಂತದಲ್ಲಿ ಕಳೆದ ಕೆಲವು ದಿನಗಳಿಂದ ಭಾರೀ ಮಳೆ ಹಾಗೂ ಪ್ರವಾಹ ಉಂಟಾಗಿದ್ದು, ಪ್ರವಾಹದ ಪರಿಣಾಮ 178ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿ ಹಲವರು ನಾಪತ್ತೆಯಾಗಿದ್ದಾರೆಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ನೆರೆಯ ರಾಷ್ಟ್ರವಾದ ರ್ವಾಂಡಾ ದಲ್ಲಿಯೂ ಸತತವಾಗಿ ಭಾರೀ ಮಳೆಯಾಗುತ್ತಿದ್ದು, ಹಲವಾರು ಮಂದಿ ಸಾವನ್ನಪ್ಪಿದ್ದಾರೆಂದು ಹೇಳಿದ್ದಾರೆ. ಭೀಕರವಾದ ಪ್ರವಾಹದಿಂದಾಗಿ ನೂರಾರು ಮನೆಗಳು ಕೊಚ್ಚಿ ಹೋಗಿದ್ದು, ಕಾಲೆಹೆ, ಕೀವು ನದಿ ಪಶ್ಚಿಮ ಪ್ರದೇಶ ಹಾಗೂ ರ್ವಾಂಡಜಾ ಗಡಿ ಪ್ರದೇಶದಲ್ಲಿ 50ಕ್ಕೂ ಅಧಿಕ ಮಂದಿ ನಾಪತ್ತೆಯಾಗಿದ್ದಾರೆ.



ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಲೋಕೇಶ್, ಗಾಂಧಿನಗರ, ಕರಣಪುರ, ಮಾರುತಿ ಸರ್ಕಲ್ ಸೇರಿದಂತೆ ವಿವಿಧೆಡೆ ಪಾದಯಾತ್ರೆ ಮೂಲಕ ಮತ ಯಾಚಿಸಿದರು. ಕರವೇ ಜಿಲ್ಲಾಧ್ಯಕ್ಷ ಪ್ರವೀಣ್ ಕುಮಾರ್ ಇತರರು ಸಾಥ್ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಯಾವುದೇ ಸರ್ಕಾರವಿದ್ದರೂ ಪುಟ್ಟರಾಜು ನಮ್ಮೊಂದಿಗಿದ್ದಾರೆ ಎಂಬ ಜನರ ಬಲವಾದ ನಂಬಿಕೆಯೇ ನನ್ನ ಆಯ್ಕೆಗೆ ಕಾರಣ

–ಸಿ.ಎಸ್.ಪುಟ್ಟರಾಜು, ಮೇಲುಕೋಟೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ





ಸಂದರ್ಶನ: ಎಸ್.ಬಿ.ದೇವರಾಜ

ಮಂಡ್ಯ ಜಿಲ್ಲೆಯ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ಕಣ ರಂಗೇರಿದೆ. ಈ ಕ್ಷೇತ್ರದಲ್ಲಿ ಹಾಲಿ ಶಾಸಕರಾಗಿರುವ ಸಿ.ಎಸ್. ಪುಟ್ಟರಾಜು ಅವರು, ಸಂಸದರಾಗಿ, ಸಚಿವರಾಗಿ ಸುದೀರ್ಘ ಅಪಾರ ರಾಜಕೀಯ ಅನುಭವವುಳ್ಳವರಾಗಿದ್ದು ಈ ಬಾರಿ ಪುನರಾಯ್ಕೆ ಬಯಸಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾರೆ. ಬಿರುಸಿನ ಚುನಾವಣಾ ಪ್ರಚಾರದ ನಡುವೆ ಪುಟ್ಟರಾಜು ಅವರು 'ಮೈಸೂರು ಮಿತ್ರ'ನೊಂದಿಗೆ ಮುಕ್ತವಾಗಿ ಮಾತನಾಡಿದ್ದಾರೆ.

ಮೈಸೂರು ಮಿತ್ರ: ಹಲವು ಬಾರಿ ಈ ಕ್ಷೇತ್ರದ ಜನ ನಿಮ್ಮನ್ನು ಆಶೀರ್ವದಿಸಿದ್ದಾರೆ. ಈ ಬಾರಿ ಸ್ಪರ್ಧೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಸಿ.ಎಸ್.ಪುಟ್ಟರಾಜು: ಪ್ರತೀ ಚುನಾವಣೆಯಲ್ಲೂ ನಾನು ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳೇ ನನಗೆ ಶ್ರೀರಕ್ಷೆಯಾಗಿದ್ದವು. ನಿಮಗೆ ಗೊತ್ತಿರಲಿ, ಪ್ರತಿ ಬಾರಿ ಆಯ್ಕೆಯಾದಾಗಲೂ ಕ್ಷೇತ್ರವನ್ನು ಇಮ್ಮಡಿ ಅಭಿವೃದ್ಧಿಪಡಿಸಿದ್ದೇನೆ. ಅದು ನೀರಾವರಿ ಇರಬಹುದು. ರಸ್ತೆ, ಕೆರೆ-ಕಟ್ಟೆ ಹೀಗೆ ನನ್ನ ರೈತ ಬಂಧುಗಳಿಗೆ ಅನುಕೂಲ ಮಾಡಿಕೊಡುತ್ತಾ ಬಂದಿದ್ದೇನೆ. ಈಗ ಮೇಲುಕೋಟೆ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪುನರಾಯ್ಕೆ ಬಯಸಿದ್ದೇನೆ.

ಮಿತ್ರ: ನಿಮ್ಮ ಸುದೀರ್ಘ ರಾಜಕೀಯ ಅನುಭವದಲ್ಲಿ ಕ್ಷೇತ್ರದ ಜನರ ನಾಡಿಮಿಡಿತ ಅರಿತಿದ್ದೀರಾ?

ಸಿ.ಎಸ್.ಪುಟ್ಟರಾಜು: ನಮ್ಮ ಕ್ಷೇತ್ರದ ಮಹಾಜನತೆ ನಂಬಿಕೆಗೆ ಬಹಳಷ್ಟು ಬೆಲೆ ಕೊಡುವವರು. ನಾನು ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳಿಗಾಗಿ ಜನರು ನನ್ನನ್ನು ಮನೆ ಮಗನೆಂಬ ಭಾವನೆಯಿಂದ ಪ್ರತೀ ಚುನಾವಣೆಯಲ್ಲೂ ಹರಸಿದ್ದಾರೆ. ನಾನೂ ಕೂಡ ಜನರೇ ನನಗೆ ಎಲ್ಲಾ ಎಂಬ ಭಾವನೆಯಿಂದ ಅವರ ನಂಬಿಕೆಗೆ ಎಳ್ಳಷ್ಟೂ ಭಂಗ ಬಾರದಂತೆ ಕೆಲಸ ಮಾಡುತ್ತಾ ಬಂದಿದ್ದೇನೆ. ಕೆಲವರ ಅಪಪ್ರಚಾರಕ್ಕೂ ಕಿವಿಗೊಡಲಾರದ ಮಟ್ಟಿಗೆ ಜನ ನನ್ನ ನಂಬಿದ್ದಾರೆ. ಅದಕ್ಕೆ ನಾನೆಂದು ದ್ರೋಹ ಬಗೆಯದೆ ನಡೆದುಕೊಂಡು ಬಂದಿದ್ದೇನೆ.

ಮಿತ್ರ: ನೀವು ಶಾಸಕರಾಗಿ ಕ್ಷೇತ್ರಕ್ಕೆ ನೀಡಿರುವ ಮಹತ್ವದ್ದು ಎನ್ನಬಹುದಾದ ಕೊಡುಗೆ ಏನು?

ಸಿ.ಎಸ್.ಪುಟ್ಟರಾಜು: ನನ್ನ ಕ್ಷೇತ್ರದಲ್ಲಿ ಕೇವಲ ಒಂದೇ ಒಂದು ವಿದ್ಯುತ್ ಉಪಕೇಂದ್ರವಿತ್ತು. ರೈತರು ವಿದ್ಯುತ್ ಸಮಸ್ಯೆಯಿಂದ ತೀವ್ರ ಕಷ್ಟ ಪಡುತ್ತಿದ್ದರು. ಅದನ್ನು ಮನಗಂಡು ನಾನು ಹೋಬಳಿಗೆ 3ರಂತೆ ಒಟ್ಟು 12 ಹೊಸ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಿದ್ದೇನೆ. 6 ಹೊಸ ಏತ ನೀರಾವರಿ ಯೋಜನೆಗಳನ್ನು ಕ್ಷೇತ್ರಕ್ಕೆ ತಂದಿದ್ದೇನೆ. 12 ಹೊಸ ಪ್ರೌಢಶಾಲೆ, 5 ಪದವಿ ಪೂರ್ವ ಕಾಲೇಜು, 2 ಐಟಿಐ ಕಾಲೇಜು, 3 ಪದವಿ ಕಾಲೇಜು, ಹೋಬಳಿಗೆ 2ರಂತೆ ವಸತಿ ಶಾಲೆಗಳ ನಿರ್ಮಿಸಲಾಗಿದೆ. ನಮ್ಮ ಭಾಗದ ಮೂವರು ಉನ್ನತ ನ್ಯಾಮೂರ್ತಿಗಳಾಗಿದ್ದಾರೆ. ಅದನ್ನು ನೆನಪಿಸುವ ನಿಟ್ಟಿನಲ್ಲಿ ಟಿ.ಎಸ್. ಛತ್ರದಲ್ಲಿ ಹೈಕೋರ್ಟ್ ಮಾದರಿಯಲ್ಲಿ ಹೊಸ ಹೈಸ್ಕೂಲ್ ನಿರ್ಮಿಸಲಾಗುತ್ತಿದ್ದು, ಈ ಸರ್ಕಾರಿ ಶಾಲೆಯಲ್ಲಿ ಈಜುಕೊಳ, ಪ್ರಯೋಗಾಲಯ, ಒಳಾಂಗಣ ಸಭಾಂಗಣ, ಜಿಮ್ ಮುಂತಾದ ಸೌಲಭ್ಯಗಳನ್ನು ಒಳಗೊಂಡಿರುತ್ತದೆ. ಈ ಸರ್ಕಾರಿ ಶಾಲೆಯು ಒಂದು ಮಾದರಿ ಶಾಲೆಯಾಗಿ ರಾಜ್ಯದ ಗಮನ ಸೆಳೆಯುವಂತಿರುತ್ತದೆ. ನಾನೇ ವೈಯಕ್ತಿಕವಾಗಿ ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡಿಸುತ್ತಿದ್ದು, ಇನ್ನೊಂದು ತಿಂಗಳಲ್ಲಿ ಶಾಲೆ ಲೋಕಾರ್ಪಣೆಯಾಗಲಿದೆ.

ಮಿತ್ರ: ಕ್ಷೇತ್ರದಲ್ಲಿ ಇನ್ನೂ ಬಗೆಹರಿಸಬೇಕಾದಂತಹ ಸಮಸ್ಯೆಗಳ ಬಗ್ಗೆ ಅರಿವಿದೆಯೆ?

ಸಿ.ಎಸ್.ಪುಟ್ಟರಾಜು: ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಕೆಆರ್‌ಎಸ್ ಬಳಿ ಡಿಸ್ನಿಲ್ಯಾಂಡ್ ಮಾದರಿ ಮನರಂಜನಾ ತಾಣ ನಿರ್ಮಾಣ ಮಾಡುವ ಯೋಜನೆ ರೂಪಿಸಿದ್ದರು. ಅದು ಕಾರ್ಯಗತವಾಗಿದ್ದರೇ ಮಂಡ್ಯ ಜಿಲ್ಲೆಯೂ ಸೇರಿದಂತೆ ಹಳೇ ಮೈಸೂರು

> **"** ನಾನು ಹೋಬಳಿಗೆ 3ರಂತೆ ಒಟ್ಟು 12 ಹೊಸ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಿದ್ದೇನೆ. 6 ಹೊಸ ಏತ ನೀರಾವರಿ ಯೋಜನೆಗಳನ್ನು ಕ್ಷೇತ್ರಕ್ಕೆ ತಂದಿದ್ದೇನೆ. 12 ಹೊಸ ಪ್ರೌಢಶಾಲೆ, 5 ಪದವಿ ಪೂರ್ವ ಕಾಲೇಜು, 2 ಐಟಿಐ ಕಾಲೇಜು, 3 ಪದವಿ ಕಾಲೇಜು, ಹೋಬಳಿಗೆ 2ರಂತೆ ವಸತಿ ಶಾಲೆಗಳ ನಿರ್ಮಿಸಲಾಗಿದೆ. ನಮ್ಮ ಭಾಗದ ಮೂವರು ಉನ್ನತ ನ್ಯಾಯಮೂರ್ತಿಗಳಾಗಿದ್ದಾರೆ. ಅದನ್ನು ನೆನಪಿಸುವ ನಿಟ್ಟಿನಲ್ಲಿ ಟಿ.ಎಸ್.ಛತ್ರದಲ್ಲಿ ಹೈಕೋರ್ಟ್ ಮಾದರಿಯಲ್ಲಿ ಹೊಸ ಹೈಸ್ಕೂಲ್ ನಿರ್ಮಿಸಲಾಗುತ್ತಿದ್ದು, ಈ ಸರ್ಕಾರಿ ಶಾಲೆಯಲ್ಲಿ ಈಜುಕೊಳ, ಪ್ರಯೋಗಾಲಯ, ಒಳಾಂಗಣ ಸಭಾಂಗಣ, ಜಿಮ್ ಮುಂತಾದ ಸೌಲಭ್ಯಗಳನ್ನು ಒಳಗೊಂಡಿರುತ್ತದೆ. ಈ ಸರ್ಕಾರಿ ಶಾಲೆಯು ಒಂದು ಮಾದರಿ ಶಾಲೆಯಾಗಿ ರಾಜ್ಯದ ಗಮನ ಸೆಳೆಯುವಂತಿರುತ್ತದೆ. ನಾನೇ ವೈಯಕ್ತಿಕವಾಗಿ ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡಿಸುತ್ತಿದ್ದು, ಇನ್ನೊಂದು ತಿಂಗಳಲ್ಲಿ ಶಾಲೆ ಲೋಕಾರ್ಪಣೆಯಾಗಲಿದೆ.

ಭಾಗದ ಸುಮಾರು 50 ಸಾವಿರ ಯುವಕರಿಗೆ ಉದ್ಯೋಗ ದೊರೆಯುತ್ತಿತ್ತು. ಆದರೆ ಈ ಯೋಜನೆ ಅನುಷ್ಠಾನವಾಗಿಲ್ಲ. ಮುಂದಿನ ದಿನಗಳಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಪ್ರಯತ್ನಿಸಲಾಗುವುದು. ಹೆಣ್ಣು ಮಕ್ಕಳ ಭವಿಷ್ಯದ ದೃಷ್ಟಿಯಿಂದ ಜಕ್ಕನಹಳ್ಳಿ ಮತ್ತು ಪಾಂಡವಪುರ ರೈಲ್ವೇ ನಿಲ್ದಾಣದ ಬಳಿ ಹೆಣ್ಣು ಮಕ್ಕಳ ಶಾಲೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು.

ಮಿತ್ರ: ಪ್ರಚಾರದ ವೇಳೆ ಜನರಿಂದ ಸಲ್ಲಿಕೆಯಾಗುವಂತಹ ಪ್ರಮುಖ ಅಹವಾಲು ಏನು?

ಸಿ.ಎಸ್. ಪುಟ್ಟರಾಜು: ಕ್ಷೇತ್ರಕ್ಕೆ ಹೋದಾಗ ಜನರು ಸಣ್ಣಪುಟ್ಟ ಕೆಲಸಗಳನ್ನು ಕೇಳುವುದು ಸಹಜ. ಆದರೆ, 100ಕ್ಕೆ 90ರಷ್ಟು ಅಭಿವೃದ್ಧಿ ಕೆಲಸಗಳನ್ನು ನಾನು ಮಾಡಿರುವುದರಿಂದ ಸಾರ್ವಜನಿಕರು ಹೇಳಿಕೊಳ್ಳುವಂತಹ ಪ್ರಮುಖ ಸಮಸ್ಯೆಗಳ ಮುಂದಿಡುತ್ತಿಲ್ಲ. ಯಾವುದೂ ಇಲ್ಲ.

ಮಿತ್ರ: ಯಾವ ನಿರೀಕ್ಷೆಯೊಂದಿಗೆ ಜನರು ನಿಮ್ಮನ್ನು ಪುನರಾಯ್ಕೆ ಮಾಡಬಹುದು?

ಸಿ.ಎಸ್. ಪುಟ್ಟರಾಜು: ಕೊರೊನಾ ಕಾಲದಲ್ಲಿ ಮನೆ ಮಗನಾಗಿ ಜನರ ಜೊತೆ ನಿಂತಿದ್ದರಿಂದ ಕಷ್ಟ ಕಾಲದಲ್ಲಿ ಪುಟ್ಟರಾಜು ನಮ್ಮ ಜೊತೆ ಇರುತ್ತಾರೆ. ಯಾವುದೇ ಸರ್ಕಾರವಿದ್ದರೂ ಕ್ಷೇತ್ರವನ್ನು ಅಭಿವೃದ್ಧಿಪಡಿಸುತ್ತಾರೆ ಎಂಬ ನಿರೀಕ್ಷೆಯಿಂದ ಜನರು ನನ್ನನ್ನು ಆಯ್ಕೆ ಮಾಡಿಯೇ ಮಾಡುತ್ತಾರೆ. ನಾನು ಕೂಡ ಅವರ ನಿರೀಕ್ಷೆಯನ್ನೂ ಹುಸಿ ಮಾಡುವುದಿಲ್ಲ. ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಲೆಂದು ಶಾಲೆಗಳ ಸುಧಾರಣೆಗೆ ಆದ್ಯತೆ ನೀಡಿದ್ದೇನೆ. ನಮ್ಮ ರೈತರಿಗೆ ಶಕ್ತಿ ಮೀರಿ ಸೌಕರ್ಯ ಕಲ್ಪಿಸುವ ಪ್ರಯತ್ನ ಮಾಡುತ್ತಾ ಬಂದಿದ್ದೇನೆ.

ಮಿತ್ರ: ಪ್ರತಿ ಚುನಾವಣೆ ಸಂದರ್ಭವೂ ವಿಭಿನ್ನವಾಗಿರುತ್ತದೆ. ಈ ಬಾರಿಯ ಚುನಾವಣೆಯ ವಾತಾವರಣ ಹೇಗಿದೆ?

ಸಿ.ಎಸ್. ಪುಟ್ಟರಾಜು: ಪ್ರತಿ ಚುನಾವಣೆಯೂ ವಿಭಿನ್ನವಾಗಿರುವುದು ಸತ್ಯ. ಒಂದೊಂದು ಚುನಾವಣೆಯನ್ನು ಒಂದೊಂದು ರೀತಿಯಲ್ಲಿ ನೋಡುತ್ತೇವೆ. ಏನೇ ವಿಭಿನ್ನವಾಗಿದ್ದರು ಕ್ಷೇತ್ರದಲ್ಲಿ ನನ್ನ ಮೇಲೆ ವಿಶ್ವಾಸವಿಟ್ಟಿರುವ ಜನರಿರುವುದರಿಂದ ಪ್ರತೀ ಚುನಾವಣೆಯಲ್ಲೂ ಅವರೇ ಮುಂದೆ ನಿಂತು ನನಗೆ ವೋಟ್ ಹಾಕಿಸುತ್ತಾರೆ. ನನ್ನ ಜನ ನನ್ನೊಂದಿಗೆ ಇರುವವರೆಗೂ ನನಗೆ ಚಿಂತೆ ಇಲ್ಲ.

ಮಿತ್ರ: ಚುನಾವಣೆಯಲ್ಲಿ ನಿರ್ಣಾಯಕರೆನಿಸಿರುವ ಯುವ ಮತದಾರರನ್ನು ಸೆಳೆಯುವ ನಿಟ್ಟಿನಲ್ಲಿ ನಿಮ್ಮ ಪ್ರಯತ್ನ ಹೇಗಿದೆ?

ಸಿ.ಎಸ್. ಪುಟ್ಟರಾಜು: ನನ್ನ ಪುತ್ರ ಶಿವರಾಜು, ಯುವಕರೊಡಗೂಡಿ ಕೆಲಸ ಮಾಡುತ್ತಿದ್ದಾರೆ. ಯುವಜನರ ಕಷ್ಟ-ನಷ್ಟಗಳಿಗೆ ಸ್ಪಂದಿಸುತ್ತಿದ್ದಾರೆ. ಅದೇ ರೀತಿ ನನ್ನ ಅಣ್ಣನ ಮಕ್ಕಳು ಕೂಡ ಯುವ ಸಮುದಾಯದ ಸಂಘಟನೆಯಲ್ಲಿ ತೊಡಗಿಕೊಂಡಿದ್ದಾರೆ. ಚುನಾವಣೆ ಸಮಯ ಮಾತ್ರವಲ್ಲದೇ ಎಲ್ಲಾ ಸಮಯದಲ್ಲೂ ಯುವಸಮುದಾಯದೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡಿದ್ದಾರೆ, ಅವರ ಕಷ್ಟ-ನಷ್ಟಗಳಿಗೆ ಸ್ಪಂದಿಸುತ್ತಿದ್ದಾರೆ. ಸಹಜವಾಗಿಯೇ ಯುವ ಸಮೂಹ ಸದಾ ಕಾಲ ನಮ್ಮ ಜೊತೆಗಿದೆ. ಯುವಕರ ನಿರುದ್ಯೋಗ ಸಮಸ್ಯೆಯನ್ನು ನೀಗಿಸಬೇಕಾದ ಕರ್ತವ್ಯವೂ ನನಗಿದೆ. ಮುಂದಿನ ದಿನಗಳಲ್ಲಿ ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸುತ್ತೇನೆ.

ಎಸ್.ಎಂ. ಕೃಷ್ಣ ಸಂಬಂಧಿ ಮನೆ ಮೇಲೆ ಐಟಿ ದಾಳಿ; ಶೋಧ ಕಾರ್ಯ ಮುಂದುವರಿಕೆ

ಬೆಂಗಳೂರು: ರಾಜ್ಯದಲ್ಲಿ ಆದಾಯ ತೆರಿಗೆ ಅಧಿಕಾರಿಗಳ ದಾಳಿ ಮುಂದುವರೆದಿದ್ದು, ಕರ್ನಾಟಕ ಮಾಜಿ ಸಿಎಂ ಎಸ್ ಎಂ ಕೃಷ್ಣ ಅವರ ಸಂಬಂಧಿಕರ ಮನೆ ಸೇರಿದಂತೆ ಬೆಂಗಳೂರಿನ ಹಲವೆಡೆ ಐಟಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಚುನಾವಣೆಗೆ ಕೇವಲ ಮೂರೇ ದಿನಗಳು ಬಾಕಿ ಇದ್ದು, ಈ ವೇಳೆ ಹರಿದಾಡುವ ಹಣದ ಮೇಲೆ ಆದಾಯ ತೆರಿಗೆ (ಐಟಿ) ಇಲಾಖೆ ಹದ್ದಿನ ಕಣ್ಣಿಟ್ಟಿದೆ. ಇದೀಗ ರಾಜ್ಯದಲ್ಲಿ ಐಟಿ ದಾಳಿ ಮುಂದುವರೆದಿದ್ದು, ಬಿಜೆಪಿ ನಾಯಕ ಹಾಗೂ ಮಾಜಿ ಸಿಎಂ ಎಸ್.ಎಂ. ಕೃಷ್ಣ ಅವರ ಸಹೋದರಿ ನಿವಾಸದ ಮೇಲೆಯೂ ಐಟಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಬೆಂಗಳೂರಿನ ಕೋರಮಂಗಲದ 1ನೇ ಬ್ಲಾಕ್‌ನಲ್ಲಿರುವ ನಿವಾಸ ಎಸ್.ಎಂ.ಕೃಷ್ಣ ಸಹೋದರಿ ಎಸ್‌ಎಂ ಸುನೀತಾ ಅವರ ಮನೆ ಮೇಲೆ ಐಟಿ ದಾಳಿಯಾಗಿದ್ದು, ಬಾಗ್ಮನೆ ಹೆಸರಿನಲ್ಲಿರುವ ನಿವಾಸ ಹಾಗೂ ಬಾಗ್ಮನೆ ಬಿಲ್ಡರ್ ಕಚೇರಿಗಳ ಮೇಲೆಯೂ ದಾಳಿ ನಡೆಸಲಾಗಿದೆ, ಮೂಲಗಳ ಪ್ರಕಾರ ಕಳೆದ ಎರಡು ದಿನಗಳಿಂದ ಪರಿಶೀಲನೆ ನಡೆಯುತ್ತಿದ್ದು, ಈ ವೇಳೆ ಅಧಿಕಾರಿಗಳು ಸಾಕಷ್ಟು ದಾಖಲೆಗಳನ್ನು ಪರಿಶೀಲನೆ ನಡೆಸಿದ್ದಾರೆ ಎನ್ನಲಾಗಿದೆ.

ಕಾಂಗ್ರೆಸ್‌ಗೆ ವಿಶ್ವಕರ್ಮ ಸಮಾಜದ ಬೆಂಬಲ

ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಘೋಷಣೆ



ಮೈಸೂರು,ಮೇ 7(ಜಿಎ)–ಕಾಂಗ್ರೆಸ್ ಪಕ್ಷವು ವಿಶ್ವಕರ್ಮ ಸಮುದಾಯದ ಆಶ್ರಯ ತಾಣವಾಗಿದ್ದು, ಸಮುದಾಯಕ್ಕೆ ಹಲವಾರು ಅವಕಾಶ, ಅಭಿವೃದ್ಧಿಗಾಗಿ ಅನೇಕ ಯೋಜನೆ ನೀಡಿದೆ. ಹೀಗಾಗಿ ಈ ಬಾರಿ ವಿಧಾನಸಭಾ ಚುನಾವಣೆ ವೇಳೆ ಸಮುದಾಯವು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲಿದೆ ಎಂದು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಕೆಂಡಗಣ್ಣ ವಿಶ್ವಕರ್ಮ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಹಿಂದುಳಿದ ವರ್ಗದ ನಾಯಕರಾದ ಸಿದ್ಧರಾಮಯ್ಯ ಅವರ ಆಡಳಿತಾವಧಿಯಲ್ಲಿ ಸ್ಥಳೀಯ ಸಂಸ್ಥೆಗಳಿಂದ ನಡೆಯುವ ವಿಧಾನಪರಿಷತ್ ಸ್ಥಾನಕ್ಕೆ ಜಿ.ರಘು ಆಚಾರ್ ಅವರಿಗೆ ಟಿಕೆಟ್ ನೀಡಿ ಶಾಸಕರನ್ನಾಗಿಸಿತು. ಹೀಗೆ ನಮ್ಮ ಸಮುದಾಯಕ್ಕೆ ಕಾಂಗ್ರೆಸ್ ಪಕ್ಷವು ಹಲವಾರು ಅವಕಾಶಗಳನ್ನು ನೀಡಿದೆ ಎಂದರು.

ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ವಿಶ್ವಕರ್ಮ ಸಮುದಾಯಕ್ಕೆ ಯಾವುದೇ ಕೊಡುಗೆ ನೀಡದಿರುವ ಕಾರಣ ಸಮುದಾಯದ ಮತ ಕೇಳುವ ಯಾವುದೇ ನೈತಿಕತೆ ಇಲ್ಲ. ಜೆಡಿಎಸ್ ಪಕ್ಷವು ಈ ಹಿಂದಿನ ಸಾಲಿನ ನಗರಪಾಲಿಕೆ ಅವಧಿಯಲ್ಲಿ ನಮ್ಮ ಸಮುದಾಯಕ್ಕೆ ಸಿಗಬೇಕಾದ ಮೇಯರ್ ಸ್ಥಾನವನ್ನು ತಪ್ಪಿಸಿ ನಮಗೆ ದ್ರೋಹ ಮಾಡಿದ್ದು, ಹೀಗಾಗಿ ಸಾಮಾಜಿಕ ನ್ಯಾಯದ ಪರವಾಗಿರುವ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವುದರ ಮೂಲಕ ಜೆಡಿಎಸ್ ಹಾಗೂ ಬಿಜೆಪಿ ಪಕ್ಷಗಳಿಗೆ ಪಾಠ ಕಲಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಎನ್.ನಂದಕುಮಾರ್, ಕೆ.ಎನ್. ಕುಮಾರ್, ನಟರಾಜ್, ಹಂಚ್ಯ ಸುರೇಶ್, ಗೋವಿಂದಾಚಾರ್ ಉಪಸ್ಥಿತರಿದ್ದರು.

ಕೆ.ಆರ್.ನಗರದ ಕಾಂಗ್ರೆಸ್ ಅಭ್ಯರ್ಥಿಯಿಂದ ಬೆದರಿಕೆ ಕರೆ

ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಆರೋಪ



ಮೈಸೂರು, ಮೇ 7(ಜಿಎ)–ಕೆ.ಆರ್. ನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಕ್ಷೇತ್ರದ ಮತದಾರರಿಗೆ ಬೆದರಿಕೆ ಕರೆ ಮಾಡುತ್ತಿದ್ದಾರೆ ಎಂದು ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ರುದ್ರೇಶ್ ಆರೋಪಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರವಿಶಂಕರ್ ಅವರು ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಅವರ ಪುತ್ರ ಸಾ.ರಾ. ಜಯಂತ್ ಅವರ ವಿರುದ್ಧ ಸುಳ್ಳು ಆರೋಪ ಮಾಡಿರುವುದಲ್ಲದೆ, ಪಕ್ಷದ ಕಾರ್ಯಕರ್ತರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲು ಮಾಡಿಸುತ್ತಿದ್ದಾರೆ ಎಂದರು.

ಇತ್ತೀಚೆಗೆ ಜಯಂತ್ ತಂದೆಯ ಪರವಾಗಿ ಪ್ರಚಾರ ಮಾಡುತ್ತಿದ್ದರು. ಈ ವೇಳೆ ಸ್ಥಳದಲ್ಲಿದ್ದ ಕೆಲ ಕಾಂಗ್ರೆಸ್ಸಿನ ಕಾರ್ಯಕರ್ತರಲ್ಲೂ ಮತಯಾಚನೆ ಮಾಡುವ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಅಶ್ಲೀಲವಾಗಿ ನಿಂದಿಸಿದ್ದಾರೆ. ಜಯಂತ್ ಸುಮ್ಮನಿದ್ದರೂ ಜೆಡಿಎಸ್ ಕಾರ್ಯಕರ್ತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದು ದೂರಿದರು.

ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಅವರು ಮತದಾರನೊಬ್ಬನಿಗೆ ಕರೆ ಮಾಡಿ ಗೂಂಡಾವರ್ತನೆ ತೋರಿದ ಬಗ್ಗೆ ತಮ್ಮಲ್ಲಿ ದೂರವಾಣಿ ಕರೆಯ ದಾಖಲೆಯಿದೆ ಎಂದು ತಿಳಿಸಿ, ಡಿ.ರವಿಶಂಕರ್ ಅವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವಂತೆ ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಮುಖಂಡರಾದ ಮಂಜು, ಸಮೀರ್, ನಟೇಶ್ ಹಾಗೂ ಚೇತನ್ ಉಪಸ್ಥಿತರಿದ್ದರು.

ವರುಣದಲ್ಲಿ ಸಿದ್ದರಾಮಯ್ಯ ಅಭಿವೃದ್ಧಿ ಶೂನ್ಯ



ಮೈಸೂರು,ಮೇ 7(ಜಿಎ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರುಣ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ ಎಂದು ಲಿಂಗಾಯಿತ ಗೌಡ ಮಹಾಸಭಾ ರಾಜ್ಯ ಯುವ ಘಟಕದ ಅಧ್ಯಕ್ಷ ಶಂಭು ಪಟೇಲ್ ಆರೋಪಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೋಮಣ್ಣ ಅವರು ಎಲ್ಲಾ ಸಮುದಾಯದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟನೆ ಮಾಡುತ್ತಿದ್ದಾರೆ, ಆದರೆ ಸಿದ್ದರಾಮಯ್ಯ ಅವರು ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಎನ್ನುವಂತೆ ಮಾತಾಡುತ್ತಿದ್ದಾರೆ. ಅತ್ಯಂತ ಹೆಚ್ಚು ಲಿಂಗಾಯಿತ ಸಮುದಾಯದವರು ವರುಣ ಕ್ಷೇತ್ರದಲ್ಲಿ ಇದ್ದಾರೆ. ಮತ ಕೇಳಲು ಬಂದಾಗ ಮೃದುವಾಗಿ ಮಾತಾಡೋ ಇವರು ಉಳಿದ ಸಮಯದಲ್ಲಿ ಏರು ಧ್ವನಿಯಲ್ಲಿ ಮಾತಾಡುವಂತಹದ್ದು, ಸರಿಯಿಲ್ಲ. ಅಲ್ಲದೇ ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಅವರ ಅಭಿವೃದ್ಧಿ ಕೆಲಸ ಶೂನ್ಯವಾಗಿದೆ. ಸೋಮಣ್ಣ ಅವರು ಗೋವಿಂದರಾಜನಗರ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸವನ್ನು ಮನಗಂಡು ಈ ಬಾರಿ ವರುಣದಲ್ಲಿ ಗೆಲ್ಲಿಸಿ ನಮ್ಮ ಕ್ಷೇತ್ರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವುದಕ್ಕೆ ಅವಕಾಶ ಮಾಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ಲಿಂಗಾಯಿತ ಗೌಡ ಮಹಾಸಭಾ ನಗರಾಧ್ಯಕ್ಷ ಬಸವರಾಜು ಇದ್ದರು.

ಹೋಟೆಲ್ ಮಾಲೀಕರ ಸಂಘದಿಂದ ಮತ ಜಾಗೃತಿ ಪೋಸ್ಟರ್ ಬಿಡುಗಡೆ

ಮೈಸೂರು, ಮೇ 7(ಆರ್‌ಕೆ)–ಮೇ 10ರಂದು ನಡೆಯಲಿರುವ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬರೂ ತಪ್ಪದೇ ಮತದಾನ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸುಭದ್ರಗೊಳಿಸುವಂತೆ ಹೋಟೆಲ್ ಮಾಲೀಕರ ಸಂಘ ಕರೆ ನೀಡಿದೆ.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಸಂಘದ ಕಚೇರಿ ಸಭಾಂಗಣದಲ್ಲಿ ಹೋಟೆಲು ಮಾಲೀಕರ ಸಂಘ ಹಾಗೂ ಹೋಟೆಲು ಮಾಲೀಕರ ಸಂಘದ ಧರ್ಮದತ್ತಿ ವತಿಯಿಂದ ಮತದಾನ ಜಾಗೃತಿ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಕಡ್ಡಾಯವಾಗಿ ಮತದಾನ ಮಾಡಿ, ನಿಮ್ಮ ಕುಟುಂಬದ ಸದಸ್ಯರು, ಸ್ನೇಹಿತರಿಗೂ ಮತ ಚಲಾಯಿಸುವಂತೆ ಹೇಳಿ, ಮತದಾನ ಮಾಡುವುದು ನಮ್ಮ ಸಂವಿಧಾನಬದ್ಧ ಹಕ್ಕು. ಆದರೆ ಯಾವುದೇ ಆಮಿಷಕ್ಕೆ ಒಳಗಾಗದೆ ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಮೂಲಕ ಪ್ರಜಾತಂತ್ರ ವ್ಯವಸ್ಥೆಯನ್ನು ಗಟ್ಟಿಗೊಳಿಸಿ ಎಂಬಿತ್ಯಾದಿ ಸಂದೇಶಗಳನ್ನು ಪೋಸ್ಟರ್‌ನಲ್ಲಿ ಮುದ್ರಿಸಲಾಗಿದೆ.

ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಎಲ್ಲಾ ಹೋಟೆಲ್, ರೆಸ್ಟೋರೆಂಟ್, ಬೇಕರಿ, ಸ್ವೀಟ್ ಸ್ಟಾಲ್‌ಗಳಲ್ಲಿ ಪೋಸ್ಟರ್‌ಗಳನ್ನು ಪ್ರದರ್ಶಿಸಿ ಗ್ರಾಹಕರು, ಪ್ರವಾಸಿಗರಿಗೆ ಮತದಾನದ ಮಹತ್ವದ ಬಗ್ಗೆ ಅರಿವು ಮೂಡಿಸಲಾಗುವುದು ಎಂದು ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದರು. ಸಂಘದ ಕಾರ್ಯದರ್ಶಿ ಎ.ಆರ್. ರವೀಂದ್ರ ಭಟ್, ಸುಬ್ರಹ್ಮಣ್ಯ ತಂತ್ರಿ, ಪದಾಧಿಕಾರಿಗಳಾದ ಮಹೇಶ ಕಾಮತ್, ಎ.ಎಸ್. ಸತೀಶ್, ಗುರುಕುಮಾರ್, ಕೆ.ರಾಮ್‌ಮೋಹನ್, ಎಂ.ಆರ್.ಪುರಾಣಿಕ್, ಚಂದ್ರೇಗೌಡ, ಕೆ.ಭಾಸ್ಕರಶೆಟ್ಟಿ ಹಾಗೂ ಇತರರು ಪೋಸ್ಟರ್ ಬಿಡುಗಡೆ ಸಂದರ್ಭ ಉಪಸ್ಥಿತರಿದ್ದರು.



ಮೈಸೂರಿನ ಹಿನಕಲ್ ಬಡಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್‌ಗೌಡ ಅವರು ಬಿಜೆಪಿ ಕಾರ್ಯಕರ್ತರು, ತಮ್ಮ ಅಪಾರ ಬೆಂಬಲಿಗರೊಂದಿಗೆ ಪಾದಯಾತ್ರೆ ಮೂಲಕ ಮನೆ ಮನೆಗೆ ತೆರಳಿ ಮತಯಾಚಿಸಿದರು.



ಮೈಸೂರಿನ ಮೀನಾ ಬಜಾರ್ ಸುತ್ತಮುತ್ತಲ ಬಡಾವಣೆಯಲ್ಲಿ ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಪಾದಯಾತ್ರೆ ಮೂಲಕ ಮನೆ ಮನೆಗೆ ತೆರಳಿ ಮತಯಾಚನೆ ನಡೆಸಿದರು. ಈ ವೇಳೆ ಅಭಿಮಾನಿಗಳು, ಕಾರ್ಯಕರ್ತರು ಇದ್ದರು.

ಬಿಜೆಪಿ ಅಭ್ಯರ್ಥಿಗಳಿಗೆ 24 ಮನೆ ತೆಲುಗು ಶೆಟ್ಟರ ಸಮುದಾಯ ಬೆಂಬಲ

ಮೈಸೂರು, ಮೇ 7(ಜಿಎ)–ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ 24 ಮನೆ ತೆಲುಗು ಶೆಟ್ಟಿ ಜನಾಂಗದ ಕುಲಬಾಂಧವರು ಬಿಜೆಪಿ ಅಭ್ಯರ್ಥಿಗಳನ್ನು ಬೆಂಬಲಿಸುವಂತೆ ಶ್ರೀ ಕಾಮಾಕ್ಷಮ್ಮ 24 ಮನೆ ತೆಲುಗು ಶೆಟ್ಟರ ಸಂಘ ಮನವಿ ಮಾಡಿದೆ. ದೇಶದ ಬೆಳವಣಿಗೆಗೆ ನೂರಾರು ಯೋಜನೆಗಳನ್ನು ನೀಡಿದ್ದು, ಹಾಗೇ ನಮ್ಮ ಜನಾಂಗಕ್ಕೆ ಹಾಸ್ಟಲ್, ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಅನುದಾನ ನೀಡಿದ್ದಲ್ಲದೆ ಹಲವಾರು ಸವಲತ್ತು ನೀಡಿರುವ ಹಿನ್ನೆಲೆಯಲ್ಲಿ ಬಿಜೆಪಿ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುವ ಕೆ.ಆರ್. ಕ್ಷೇತ್ರದ ಶ್ರೀವತ್ಸ, ಚಾಮರಾಜ ಕ್ಷೇತ್ರದ ಎಲ್.ನಾಗೇಂದ್ರ, ನರಸಿಂಹರಾಜ ಕ್ಷೇತ್ರದ ಸಂದೇಶ್ ಸ್ವಾಮಿ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಕವೀಶ್‌ಗೌಡ ಅವನ್ನು ಬೆಂಬಲಿಸಿ ಎಂದು ಸಂಘದ ಅಧ್ಯಕ್ಷ ವಿ.ಶ್ರೀನಿವಾಸ್ (ರೈಲ್ವೆ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ನಾಗೇಂದ್ರ ಬಿರುಸಿನ ಪ್ರಚಾರ

ಮೈಸೂರು: ಮೈಸೂರಿನ ಬೃಂದಾವನ ಬಡಾವಣೆಯಲ್ಲಿ ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗೇಂದ್ರ ಬಿರುಸಿನ ಪ್ರಚಾರ ನಡೆಸಿದರು. ಈ ವೇಳೆ ಪಾಲಿಕೆ ಮಾಜಿ ಸದಸ್ಯರಾದ ದೇವರಾಜು, ಮಹೇಶ್‌ರಾಜೇ ಅರಸ್, ನಂಜಪ್ಪ, ಜೀವನ್ ಪ್ರಕಾಶ್, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಮಧು, ರವಿ, ದಶರಥ, ಅಶೋಕ್, ಬಸವರಾಜು, ಶ್ರೀಧರ್, ಮಣಿ, ಕುಶಲ್, ಶಿವಕುಮಾರ್, ದಾಸು, ಚಿಕ್ಕರಾಮು, ಆದಿತ್ಯ, ಜನಾರ್ಧನ, ಪ್ರೇಮ್, ಶ್ರೀಧರ್, ಶರತ್, ಮಂಜು, ಮಧುಸೂದನ್, ಶಿವು, ಪ್ರಕಾಶ್, ಸಿ.ಡಿ.ಕುಮಾರ್, ಬಸವರಾಜು, ಚಿಕ್ಕವೆಂಕಟು, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಇದ್ದರು.



ಡಬಲ್ ಎಂಜಿನ್ ಅಭಿವೃದ್ಧಿಗೆ ವೇಗ: ಶ್ರೀವತ್ಸ



ಮೈಸೂರು, ಮೇ 7– ರಾಜ್ಯದಲ್ಲಿ ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಸಾಕಷ್ಟು ಅನುಕೂಲತೆಗಳಿವೆ. ಅಭಿವೃದ್ಧಿಗೆ ಇನ್ನಷ್ಟು ವೇಗ ದೊರೆಯಲಿದೆ ಎಂದು ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಹೇಳಿದರು.


ಮೈಸೂರಿನ ಕುವೆಂಪುನಗರದಲ್ಲಿ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಅವರು ಮನೆ ಮನೆಗೆ ತೆರಳಿ ಮತಯಾಚಿಸಿ ಮಾತನಾಡಿ, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕಾರ್ಯಕರ್ತರು ಪಣತೊಟ್ಟು ಮನೆಮನೆಗೂ ತೆರಳಿ ಪ್ರಚಾರದಲ್ಲಿ ತೊಡಗಿದ್ದಾರೆ. ಪ್ರಾಮಾಣಿಕ ಕಾರ್ಯಕರ್ತರ ಪ್ರೀತಿಗೆ ಚಿರಋಣಿ. ಕೇಂದ್ರದಿಂದ ಬಿಡುಗಡೆ ಆಗುವ ಪ್ರತಿಯೊಂದು ಪೈಸೆ ಹಣವೂ ನಿರ್ದಿಷ್ಟ ಫಲಾನುಭವಿಯನ್ನು ತಲುಪಲು ಹಾಗೂ ನಿರ್ದಿಷ್ಟ ಯೋಜನೆಗೆ ಬಳಕೆಯಾಗಲು ಡಬಲ್ ಎಂಜಿನ್ ಸರ್ಕಾರ ಮುಖ್ಯ. 4 ವರ್ಷಗಳ ರಾಜ್ಯದ ಬಿಜೆಪಿ ಆಡಳಿತದಲ್ಲಿ ಇದು ಸಾಬೀತಾಗಿದೆ ಎಂದರು.

ಯೋಜನೆಗಳ ಜಾರಿ ಪರಿಣಾಮ ಸಾಮಾನ್ಯ ಜನರ ಬದುಕಿನಲ್ಲಿ ಹೊಸ ಆಶಾವಾದ ಮೂಡಿಸಿದೆ. ರಾಜ್ಯದಲ್ಲಿ ಶಿಕ್ಷಣ, ಆರೋಗ್ಯ, ಸಾಮಾಜಿಕ ಕ್ಷೇತ್ರಗಳು ಉದ್ಯೋಗ ಸೇರಿದಂತೆ ಹಲವು ವಲಯಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪೂರಕ ಸಹಯೋಗದಲ್ಲಿ ಮಹತ್ವಾಕಾಂಕ್ಷಿ ಬೆಳವಣಿಗೆ ಕಾಣಬಹುದು ಎಂದರು.

ಬಿಜೆಪಿಯ ಜನಕಲ್ಯಾಣ ಕಾರ್ಯಕ್ರಮಗಳೇ ಗೆಲುವಿಗೆ ಸ್ಫೂರ್ತಿಯಾಗಿದ್ದು, ಜನರ ಬದುಕು ಸುಧಾರಣೆಯತ್ತ ಸಾಗುತ್ತಿದೆ. ಸಮೃದ್ಧ ಕರ್ನಾಟಕ ನಿರ್ಮಾಣಕ್ಕಾಗಿ ಮತ್ತೊಮ್ಮೆ ಬಿಜೆಪಿಗೆ ಅವಕಾಶ ಕಲ್ಪಿಸಿ ಕೊಡಬೇಕೆಂದು ಮನವಿ ಮಾಡಿದರು. ಈ ವೇಳೆ ಪಾಲಿಕೆ ಸದಸ್ಯ ಎಂ.ಸಿ. ರಮೇಶ್, ಮಾಜಿ ಸದಸ್ಯರಾದ ರಮೇಶ್, ವೆಂಕಟೇಶ್ ದಾಸ್, ರವಿ, ಛಾಯಮ್ಮ, ನಾಗಣ್ಣ, ಲೋಕೇಶ್, ಚೆಲುವ, ಮಂಜುನಾಥ್ ಹಾಗೂ ಇನ್ನಿತರರು ಭಾಗವಹಿಸಿದ್ದರು.

ಯುವತಿ ನಾಪತ್ತೆ

ಮೈಸೂರು, ಮೇ 7– ಯುವತಿಯೋರ್ವಳು ನಾಪತ್ತೆಯಾಗಿರುವ ಬಗ್ಗೆ ಕುವಲಂದೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ಅನುಷ (20) ಏಪ್ರಿಲ್ 2ರಂದು ಬೆಳಗ್ಗೆ 6 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋಗಿದ್ದು ಇದುವರೆಗೂ ವಾಪಸ್ ಬಂದಿಲ್ಲ ಎಂದು ಈಕೆಯ ತಂದೆ ದೂರಿನಲ್ಲಿ ತಿಳಿಸಿದ್ದಾರೆ. ಈಕೆಯ ಬಗ್ಗೆ ಸುಳಿವು ಸಿಕ್ಕಲ್ಲಿ ಕವಲಂದೆ ಪೊಲೀಸ್ ಠಾಣೆ ದೂ. 08221-295621, ಮೊ. 9480805050, ಮೈಸೂರು ಕಂಟ್ರೋಲ್ ರೂಂ ದೂ. 0821-2520040 ಸಂಪರ್ಕಿಸಲು ಕೋರಲಾಗಿದೆ.

ಮೇಲುಕೋಟೆ ಕ್ಷೇತ್ರ ಅಭಿವೃದ್ಧಿಗಾಗಿ ಪುಟ್ಟರಾಜು ಶಾಸಕರಾಗಬೇಕು

● ಕೆ.ಆರ್.ನಗರ ಸೇರಿ ಮಂಡ್ಯ ಲೋಕಸಭಾ ಕ್ಷೇತ್ರದ 8 ಸ್ಥಾನ ಜೆಡಿಎಸ್ ಗೆಲ್ಲಲಿದೆ ● ಶಿವಳ್ಳಿಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹೇಳಿಕೆ ● ಯುವಕರ ಹರ್ಷೋದ್ಘಾರ ಕಂಡು ಪುಳಕಿತರಾದ ಹೆಚ್‌ಡಿಡಿ





ಮಂಡ್ಯ, ಮೇ 7– ಮೇಲುಕೋಟೆ ಕ್ಷೇತ್ರದಲ್ಲಿ ಕಳೆದ 5 ವರ್ಷದಲ್ಲಿ ಯಾರೂ ಕಂಡರಿಯದ ಅಭಿವೃದ್ಧಿ ಕೆಲಸಗಳಾಗಿವೆ. ಆದಾಗ್ಯೂ ಸಿ.ಎಸ್.ಪುಟ್ಟರಾಜುರನ್ನು ಸೋಲಿಸಬೇಕೆಂದು ಕೆಲವರು ಶ್ರಮ ವಹಿಸುತ್ತಿದ್ದಾರೆ. ದುದ್ದ ಹೋಬಳಿ ಸೇರಿದಂತೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಮತ್ತೊಮ್ಮೆ ಸಿ.ಎಸ್.ಪುಟ್ಟರಾಜು ಶಾಸಕರಾಗಬೇಕೆಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಕರೆ ನೀಡಿದರು.

ಭಾನುವಾರ ಮೇಲುಕೋಟೆ ಕ್ಷೇತ್ರ ವ್ಯಾಪ್ತಿಯ ಮಂಡ್ಯ ತಾಲೂಕಿನ ಶಿವಳ್ಳಿಯಲ್ಲಿ ಜೆಡಿಎಸ್ ಅಭ್ಯರ್ಥಿ ಸಿ.ಎಸ್. ಪುಟ್ಟರಾಜು ಪರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಪುಟ್ಟರಾಜು ಅವರನ್ನು ಸೋಲಿಸಲು ಯಾರು ಏನು ಮಾಡಿದರು. ಈಗ ಏನು ಮಾಡುತ್ತಿದ್ದಾರೆ ಎಂಬುದು ನನಗೆ ತಿಳಿದಿದೆ. ನಾನು ಯಾರ ಹೆಸರನ್ನು ಹೇಳಲ್ಲ. ಪುಟ್ಟರಾಜು ತನ್ನದೇ ಆದ ಅಭಿವೃದ್ಧಿ ಕೊಡುಗೆ ಕೊಟ್ಟಿದ್ದಾರೆ. ಪುಟ್ಟರಾಜು ಸೋಲಿಸಲು ಅನೇಕರು ಶ್ರಮಿಸುತ್ತಿರಬಹುದು. ಆದರೆ ಅವರ ಗೆಲುವು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದರು.

ಈ 90ರ ವಯಸ್ಸಿನಲ್ಲಿ ಯಾರಿಗೋಸ್ಕರ ನಾನು ಹೋರಾಡುತ್ತಿದ್ದೇನೆ ಎಂದು ಯೋಚಿಸಿ. ಇಂದಿರಾಗಾಂಧಿ ಕೂಡ ಮಹಿಳಾ ಮೀಸಲಾತಿ ನೀಡಲಿಲ್ಲ. ಆದರೆ ಮಹಿಳೆಯರು, ಎಲ್ಲಾ ವರ್ಗದವರಿಗೆ ಮೀಸಲಾತಿ ಕೊಟ್ಟಿದ್ದು ಈ ದೇವೇಗೌಡ. ಈದ್ಗಾ ಮೈದಾನ ಸಮಸ್ಯೆ ಸರಿಪಡಿಸಿದ್ದು ಯಾರು ಹೇಳಿ? ಸಮಸ್ಯೆಗಳ ಬಗ್ಗೆ ದೆಹಲಿಯಲ್ಲಿ ಮಾತಾಡಿದ್ದೇನೆ. ಕುಮಾರಸ್ವಾಮಿ ಎಲ್ಲಾ ವರ್ಗದವರ ಏಳಿಗೆಗೆ ಶ್ರಮಿಸುತ್ತಿದ್ದಾರೆ. 26 ಸಾವಿರ ಕೋಟಿ ಸಾಲ ಮನ್ನಾ ಮಾಡಿದ ರೈತನ ಮಗ ಹಿಂದೂಸ್ತಾನದಲ್ಲಿ ಯಾರಾದರೂ ಇದ್ದಾರಾ ಹೇಳಿ ಎಂದು ಪ್ರಶ್ನಿಸಿದರು.

ನುಡಿದಂತೆ ನಡೆದ ಮುಖ್ಯಮಂತ್ರಿ ಯಾರಾದರೂ ಇದ್ದರೆ ಅದು ಕುಮಾರಸ್ವಾಮಿ. ರೈತರ ಹೆಸರಲ್ಲಿ ಪಂಜಾಬಲ್ಲಿ ವಿಶೇಷ ರಾಗಿ ತಳಿಗೆ ದೇವೇಗೌಡರ ಹೆಸರಿಟ್ಟಿದ್ದಾರೆ ಅಂದರೆ ಅರ್ಥ ಮಾಡಿಕೊಳ್ಳಿ. ನಾವೆಲ್ಲಾ ರೈತರ ಮಕ್ಕಳು. ಪುಟ್ಟರಾಜು ಸೋಲಿಸಲು ರಾಜಕೀಯ ನಡೆಯುತ್ತಿದೆ. ಇದೊಂದು ನಾಟಕವಾಗಿದ್ದು, ಈ ನಾಟಕಗಳಿಗೆ ಮಾರುಹೋಗಬಾರದು. ಸಮಸ್ತ ಜನರಲ್ಲಿ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ. ಕೆ.ಆರ್.ನಗರ ಸೇರಿ ಮಂಡ್ಯ ಲೋಕಸಭಾ ಕ್ಷೇತ್ರದ ಎಂಟಕ್ಕೆ ಎಂಟು ಸ್ಥಾನ ಗೆಲ್ಲಲೇಬೇಕು ಎಂದರು.

ನನ್ನನ್ನು ಮುಖ್ಯಮಂತ್ರಿ ಮಾಡಿದ ಜಿಲ್ಲೆ ಇದು. ನಾನು ಮಂಡ್ಯವನ್ನು ಎಂದಿಗೂ ಮರೆಯೋದಿಲ್ಲ. ಪುಟ್ಟರಾಜು ಸೋಲಿಸಲು ಕುತಂತ್ರ ನಡೀತಿದೆ. 13ನೇ ತಾರೀಖು ಪುಟ್ಟರಾಜು ಗೆಲ್ಲಬೇಕು. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲು ಆಶೀರ್ವಾದ ಮಾಡಿ. ಕುಮಾರಸ್ವಾಮಿ ಘೋಷಿಸಿರುವ ಎಲ್ಲಾ ಯೋಜನೆಗಳು ಕಾರ್ಯಗತವಾಗಬೇಕು. ಕುಮಾರಸ್ವಾಮಿ ಮುಖ್ಯಮಂತ್ರಿಯಾಗೋದನ್ನು ತಡೆಯಲು ಯಾರಿಂದಲೂ ಆಗಲ್ಲ, ಸಾಧ್ಯವೂ ಇಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್ ಅಭ್ಯರ್ಥಿ ಸಿ.ಎಸ್.ಪುಟ್ಟರಾಜು ಮಾತನಾಡಿ, ಪುರಸಭೆ ಸದಸ್ಯ ಬಾಬು ನಿಧನರಾದ ಹಿನ್ನೆಲೆಯಲ್ಲಿ ಪಾಂಡವಪುರದ ಕಾರ್ಯಕ್ರಮ ಶಿವಳ್ಳಿಗೆ ಸ್ಥಳಾಂತರವಾಯಿತು. ದೇವೇಗೌಡರು ಇಳಿ ವಯಸ್ಸಿನಲ್ಲೂ ರೈತರ ಪರ ನಿರಂತರ ಹೋರಾಟ ಮಾಡು ತ್ತಿದ್ದು, ನೀರಾವರಿ ವಿಷಯದಲ್ಲಿ ಸಾಕಷ್ಟು ಹೋರಾಟ ಮಾಡಿ, ಶ್ರಮ ಪಟ್ಟಿದ್ದಾರೆ. ಕುಮಾರ ಸ್ವಾಮಿ ಮತ್ತೊಮ್ಮೆ ಮುಖ್ಯಮಂತ್ರಿ ಆಗಬೇಕು. ಈ ನಾಡಿನ ರೈತರು, ಬಡವರ ಬದುಕು ಹಸನಾಗಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಸಾಗರೋಪಾದಿಯಲ್ಲಿ ಗೌಡರನ್ನು ನೋಡಲು ಪಕ್ಷದ ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳು ನೆರೆದಿದ್ದರು. ಮಾಜಿ ಪ್ರಧಾನಿಯನ್ನು ಅದ್ಧೂರಿಯಾಗಿ ಸ್ವಾಗತಿಸಲಾಯಿತು. ಕ್ರೇನ್ ಮೂಲಕ ಬೃಹತ್ ಸೇಬು, ಮೊಸಂಬಿ ಹಾರ ಹಾಕಿ ಗೌರವ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಕೆ.ಟಿ.ಶ್ರೀಕಂಠೇಗೌಡ, ಎನ್.ಅಪ್ಪಾಜಿಗೌಡ, ಜಿ.ಬಿ.ಶಿವಕುಮಾರ್, ಜೆಡಿಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾ ಖಾನ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಹೆಚ್‌ಡಿಕೆ ಸಿಎಂ ಆಗಲು ಜನತೆ ಆಶೀರ್ವದಿಸಬೇಕು

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಮನವಿ



ನಾಗಮಂಗಲ, ಮೇ 7– ಜನಸಾಮಾನ್ಯರಿಗೆ ಅಗತ್ಯವಾಗಿರುವ ಪಂಚರತ್ನ ಯೋಜನೆಗಳ ಜೊತೆಗೆ ಜೆಡಿಎಸ್‌ನ ಪ್ರಣಾಳಿಕೆಗಳ ಈಡೇರಿಕೆಗಾಗಿ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲು ನಾಗಮಂಗಲ ಕ್ಷೇತ್ರದ ಜನತೆಯ ಆಶೀರ್ವಾದ ಬೇಕಾಗಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಮನವಿ ಮಾಡಿದರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಜೆಡಿಎಸ್ ಕಾರ್ಯಕರ್ತರ ಬೃಹತ್ ಸಮಾವೇಶ ಹಾಗೂ ಜೆಡಿಎಸ್ ಅಭ್ಯರ್ಥಿ ಕೆ.ಸುರೇಶ್‌ಗೌಡ ಪರ ಮತಯಾಚನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನಮ್ಮ ಪ್ರಯತ್ನದಿಂದ ಹೇಮಾವತಿ ನೀರನ್ನು ಈ ಭಾಗಕ್ಕೆ ಹರಿಸುವ ಪ್ರಯತ್ನ ಮಾಡದಿದ್ದರೆ ಮತ್ತಷ್ಟು ಕಷ್ಟದ ದಿನಗಳು ಎದುರಾಗುತ್ತಿತ್ತು. ನಾನು ಪ್ರಧಾನಿಯಾಗಿದ್ದಾಗ ಕಾಶ್ಮೀರಕ್ಕೆ ಹೋಗಬೇಡಿ. ನೀವು ಅಲ್ಲಿಗೆ ಹೋದರೆ ಉಗ್ರಗಾಮಿಗಳು ಕೊಲ್ಲುತ್ತಾರೆ ಅಂದರು. ಆದರೆ ಅಲ್ಲಿಗೆ ಹೋದಾಗ ಉಗ್ರಗಾಮಿಗಳು ನನ್ನನ್ನು ಕೊಂದರೆ ನನ್ನ ಜನ್ಮಭೂಮಿ ಹರದನಹಳ್ಳಿಯ ತೋಟದಲ್ಲಿ ಸಮಾಧಿ ಮಾಡಿ ಎಂದಿದ್ದೆ. ಅದೇ ರೀತಿ ಈ ಕ್ಷೇತ್ರದಲ್ಲಿ ನಮ್ಮ ಪಕ್ಷವನ್ನು ಮುಗಿಸಿ ಮತ್ಯಾರೋ ಡಿಸಿಎಂ ಆಗುತ್ತಾರಂತೆ. ಆದರೆ ಅವರನ್ನು ರಾಜಕೀಯವಾಗಿ ಬೆಳೆಸಿದ್ದು ಯಾರು ಎಂಬುದನ್ನು ಮರೆತಿರುವವರಿಗೆ ನೀವು ಬುದ್ಧಿ ಕಲಿಸುವ ಮೂಲಕ ಸುರೇಶ್ ಗೌಡರಿಗೆ ಮತ ನೀಡಿ ಎಂದು ಮನವಿ ಮಾಡಿದರು.

ಜೆಡಿಎಸ್ ಅಭ್ಯರ್ಥಿ ಕೆ.ಸುರೇಶ್‌ಗೌಡ ಮಾತನಾಡಿ, ಈ ದಿನ ಸೇರಿರುವ ಜನಸಾಗರ ನಿಜಕ್ಕೂ ನನ್ನ ಪೂರ್ವ ಜನ್ಮದ ಪುಣ್ಯದ ಫಲ. ಈ ಸುರೇಶ್‌ಗೌಡ ನೀವು ನೀಡುವ ಗೌರವವನ್ನು ಯಾವತ್ತಿಗೂ ಮಾರಾಟ ಮಾಡುವವನಲ್ಲ. ಧರ್ಮಸ್ಥಳದ ಮಂಜುನಾಥಸ್ವಾಮಿ ಆಣೆಗೂ ಬಗರ್‌ಹುಕುಂ ಸಾಗುವಳಿ ಚೀಟಿ ನೀಡುವ ವಿಷಯದಲ್ಲಿ ಯಾವೊಬ್ಬ ರೈತರಿಂದಲೂ ಒಂದು ನಯಾಪೈಸೆ ಪಡೆದಿಲ್ಲ. ಪಿತೃ ಸಮಾನರಾದ ದೇವೇಗೌಡರು ಮತ್ತು ಅಣ್ಣನ ಸಮಾನರಾದ ಕುಮಾರಣ್ಣರ ಮೇಲೆ ನಂಬಿಕೆ ಇಟ್ಟು ನನಗೆ ಮತ ನೀಡುವಂತೆ ಮನವಿ ಮಾಡಿದರು.

ವೇದಿಕೆಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಅಪ್ಪಾಜಿಗೌಡ, ಮನ್‌ಮುಲ್ ಹಾಗೂ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ನೆಲ್ಲಿಗೆರೆ ಬಾಲು ಮಾತನಾಡಿದರು.

ಬೈಕ್‌ನಿಂದ ಬಿದ್ದು ಪುರಸಭಾ ಸದಸ್ಯ ಸಾವು

ಪಾಂಡವಪುರ, ಮೇ 7– ಬೈಕ್‌ನಿಂದ ಆಯತಪ್ಪಿ ಬಿದ್ದು ಪುರಸಭಾ ಸದಸ್ಯರೊಬ್ಬರು ಸಾವನ್ನಪ್ಪಿರುವ ಘಟನೆ ಪಟ್ಟಣದ ಬಳಿ ಭಾನುವಾರ ನಡೆದಿದೆ.



ಪಟ್ಟಣದ ಹಿರಿಯ ಜೆಡಿಎಸ್ ಮುಖಂಡ ಕೆ.ವೈರಮುಡಿಗೌಡ ಅವರ ಪುತ್ರ ಹಾಗೂ ಪುರಸಭೆ 9ನೇ ವಾರ್ಡ್ ಸದಸ್ಯ ಬಿ.ವೈ.ಬಾಬು(50) ಸಾವನ್ನಪ್ಪಿದವರು. ಭಾನುವಾರ ಬೆಳಗ್ಗೆ 8 ಗಂಟೆ ವೇಳೆ ಚಾಮರಾಜನಗರ–ಬೀದರ್ ರಾಷ್ಟ್ರೀಯ ಹೆದ್ದಾರಿಯ ರಿಲಯನ್ಸ್ ಪೆಟ್ರೋಲ್ ಬಂಕ್ ಬಳಿ ತಮ್ಮ ಬೈಕ್‌ನಲ್ಲಿ ಬರುತ್ತಿದ್ದ ವೇಳೆ ಬಾಬು ನಿಯಂತ್ರಣ ತಪ್ಪಿ ಬೈಕ್‌ನಿಂದ ಕೆಳಕ್ಕೆ ಬಿದ್ದರು. ಈ ವೇಳೆ ತೀವ್ರ ಗಾಯಗೊಂಡ ಅವರಿಗೆ ಪಾಂಡವಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದೊಯ್ಯುತ್ತಿದ್ದ ವೇಳೆ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಪಾಂಡವಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಶಾಸಕ ಸಿ.ಎಸ್.ಪುಟ್ಟರಾಜು, ಮುಖಂಡರಾದ ಸುನೀತಾ ಪುಟ್ಟಣ್ಣಯ್ಯ, ಎ.ಎಲ್.ಕೆಂಪೂಗೌಡ, ಎಚ್.ಮಂಜುನಾಥ್, ಎಚ್.ತ್ಯಾಗರಾಜು, ಸಿ.ಅಶೋಕ್, ಡಾ.ಇಂದ್ರೇಶ್ ಸೇರಿದಂತೆ ಪ್ರಮುಖರು ಮೃತರ ಅಂತಿಮ ದರ್ಶನ ಪಡೆದರು.

ಬಿಎಲ್‌ಡಿ ಪರ ಶಾಸಕ ಡಾ.ಯತೀಂದ್ರ ಪ್ರಚಾರ



ಕೆ.ಆರ್.ಪೇಟೆ, ಮೇ 7– ತಾಲೂಕಿನ ಕಿಕ್ಕೇರಿ, ಅಕ್ಕಿಹೆಬ್ಬಾಳು, ಬೂಕನಕೆರೆ ಹೋಬಳಿ ವಿವಿಧೆಡೆ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಬಿ.ಎಲ್.ದೇವರಾಜು ಪರ ರೋಡ್ ಶೋ ನಡೆಸಿ ಪ್ರಚಾರ ನಡೆಸಿದರು. ನಂತರ ಮಾತನಾಡಿದ ಅವರು, ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ. ಅದೇ ರೀತಿ ಅತ್ಯುತ್ತಮ ಆಡಳಿತಗಾರರು, ಶುದ್ಧ ಹಸ್ತರು, ಪ್ರಾಮಾಣಿಕರಾದ ನಮ್ಮ ಕಾಂಗ್ರೆಸ್ ಅಭ್ಯರ್ಥಿ ಬಿ.ಎಲ್.ದೇವರಾಜಣ್ಣ ಗೆಲ್ಲಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿ.ಎಲ್.ದೇವರಾಜು ನಮ್ಮ ತಂದೆ ಸಮಕಾಲೀನರು. ಸಿದ್ದರಾಮಯ್ಯನವರು ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರಿದ ನಂತರ ಸಿಎಂ ಆದರು. ಅದೇ ರೀತಿ ಬಿ.ಎಲ್.ದೇವರಾಜು ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರಿದ ಕ್ಷಣದಿಂದಲೇ ಅವರಿಗೆ ಒಳ್ಳೆಯದಾಗಿದೆ. ಪಕ್ಷ ಸೇರಿದ ಒಂದೇ ವಾರಕ್ಕೆ ಕಾಂಗ್ರೆಸ್‌ನಿಂದ ಟಿಕೆಟ್ ಸಿಕ್ಕಿದ್ದು ಮೊದಲ ಜಯವೆಂದೇ ಹೇಳಬೇಕು. ಕ್ಷೇತ್ರದ ಜನತೆ ದೇವರಾಜಣ್ಣ ಅವರನ್ನು ಕೈ ಬಿಡುವುದಿಲ್ಲ ಎಂದರು.

ಈ ವೇಳೆ ತಮಿಳುನಾಡು ಶಾಸಕ ಮಾಲ್ಗುಡಿ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸುರೇಶ್, ಬಿ.ನಾಗೇಂದ್ರಕುಮಾರ್, ಮುಖಂಡರಾದ ವಿಜಯ್ ರಾಮೇಗೌಡ, ಎಂ.ಡಿ.ಕೃಷ್ಣಮೂರ್ತಿ, ತಾಲೂಕು ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಈರಪ್ಪ, ಮುಖಂಡರಾದ ಮಾಧವಪ್ರಸಾದ್, ಜಿ.ಕೆರುಕ್ಮಾಂಗದ, ಚಂದ್ರೇಗೌಡ, ಎಂ.ಜೆ.ಶಶಿಧರ್, ಎಲ್.ಪಿ.ನಂಜಪ್ಪ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಕೆ.ಬಿ.ಪ್ರತಿಮಾ, ಮೀನಾಕ್ಷಿ ಸೇರಿದಂತೆ ಇತರರಿದ್ದರು.



ನಂಜನಗೂಡು ಬಳಿಯ ಎಲಚಗೆರೆ ಬೋರೆಯಲ್ಲಿ ನಡೆದ ಬಿಜೆಪಿ ಪ್ರಚಾರ ಸಮಾವೇಶದಲ್ಲಿ ಪ್ರಧಾನಿ ಮೋದಿ ಮತಯಾಚಿಸಿದರು. ಮೈಸೂರು –ಚಾಮರಾಜನಗರ ವಿಧಾನಸಭಾ ಕ್ಷೇತ್ರ ಬಿಜೆಪಿ ಅಭ್ಯರ್ಥಿಗಳು ಹಾಗೂ ಇನ್ನಿತರ ಗಣ್ಯರು ಚಿತ್ರದಲ್ಲಿದ್ದಾರೆ. /ಚಿತ್ರ: ಲಕ್ಷ್ಮೀನಾರಾಯಣ ಯಾದವ್

ಕರ್ನಾಟಕದಲ್ಲಿ ಪ್ರಧಾನಿ ನರೇಂದ್ರ ಮೋದಿ ರೋಡ್ ಶೋ

ವಾರಣಾಸಿಯಲ್ಲಿ 'ಪಿಂಡ ದಾನ' ವಿಧಿ ನೆರವೇರಿಸಿದ ಕುಟುಂಬ ಸದಸ್ಯರು

ವಾರಣಾಸಿ: ಪ್ರಧಾನಿ ನರೇಂದ್ರ ಮೋದಿಯವರು ಕರ್ನಾಟಕದಲ್ಲಿ ರೋಡ್‌ಶೋ ನಡೆಸುವಲ್ಲಿ ಬ್ಯುಸಿ ಆಗಿದ್ದರೆ, ಅತ್ತ ಮೋದಿ ಅವರ ಕಿರಿಯ ಸಹೋದರ ಪಂಕಜ್ ಮೋದಿ ಮತ್ತು ಇತರ ಕುಟುಂಬ ಸದಸ್ಯರು ದಶಾಶ್ವಮೇಧ ಘಾಟ್‌ನಲ್ಲಿ ತಮ್ಮ ದಿವಂಗತ ತಾಯಿ ಹೀರಾಬೆನ್ ಮತ್ತು ತಂದೆ ದಾಮೋದರ್ ದಾಸ್ ಮೋದಿ ಅವರ 'ಪಿಂಡ ದಾನ' ವಿಧಿಗಳನ್ನು ನೆರವೇರಿಸಿದರು.

ಕಳೆದ ವರ್ಷ ಡಿಸೆಂಬರ್ 30ರಂದು ಪ್ರಧಾನಿಯವರ ತಾಯಿ ನಿಧನರಾಗಿದ್ದರು. ಅವರ ಸಹೋದರ ಮತ್ತು ಇತರ ಕುಟುಂಬ ಸದಸ್ಯರು ಗಂಗಾ ತೀರದಲ್ಲಿ ಆಚರಣೆಗಳನ್ನು ಪೂರ್ಣಗೊಳಿಸಿದ್ದರು. ಹಿಂದೂ ನಂಬಿಕೆಯ ಪ್ರಕಾರ 'ಪಿಂಡ ದಾನ' ಎಂಬುದು ಅಗಲಿದ ಆತ್ಮಕ್ಕೆ ಗೌರವ ಸಲ್ಲಿಸುವ ಆಚರಣೆಯಾಗಿದೆ. ಪಂಡಿತ್ ರಾಜು ಝಾ ಅವರು ಮೋದಿಯವರ ಕುಟುಂಬಕ್ಕೆ ನೆರವು ನೀಡಿ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸಿದರು. ಪಂಕಜ್ ಮೋದಿ ಮತ್ತು ಅವರ ಸಂಬಂಧಿಕರು ಗಂಗಾ ಆರತಿಯಲ್ಲಿ ಕೂಡ ಪಾಲ್ಗೊಂಡು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಒಂದನೇ ಪುಟದಿಂದ

ರಾಜ್ಯವಾಗಬೇಕೆ...ಬಿಜೆಪಿ ಅಧಿಕಾರಕ್ಕೆ ತನ್ನಿ..

ಈ ಬಾರಿಯ ಕರ್ನಾಟಕ ವಿಧಾನಸಭಾ ಚುನಾವಣೆ ಇತಿಹಾಸದಲ್ಲಿ ದಾಖಲಾಗಬೇಕು. ಇದು ಕರ್ನಾಟಕ ರಾಜ್ಯವನ್ನು ದೇಶದ ನಂಬರ್ ಒನ್ ಮಾಡುವ ಚುನಾವಣೆ. ಮಹಾಯಜ್ಞದಂತೆ ಚುನಾವಣೆ ನಡೆಯುತ್ತಿದೆ. ಡಬ್ಬಲ್ ಎಂಜಿನ್ ಸರಕಾರದ ಮೇಲೆ ಜನತೆಗೆ ಅಪಾರ ಭರವಸೆ ಇದೆ. ಹಾಗಾಗಿ ಕರ್ನಾಟಕದೆಲ್ಲೆಡೆ ಕೇಳಿ ಬರುತ್ತಿರುವ ಒಂದೇ ಒಂದು ಕೂಗೆಂದರೆ ಅದು 'ಈ ಬಾರಿಯ ನಿರ್ಧಾರ ಬಹುಮತದ ಬಿಜೆಪಿ ಸರ್ಕಾರ'. ಡಬ್ಬಲ್ ಎಂಜಿನ್ ಎಂದರೆ ಡಬ್ಬಲ್ ಸೇವೆ, ಡಬ್ಬಲ್ ವೇಗ, ಡಬಲ್ ಶಕ್ತಿಯಿಂದ ಕೆಲಸ ಮಾಡುವ ಸರ್ಕಾರ ಎಂದರ್ಥ. ಆರ್ಥಿಕ ಶಕ್ತಿಯಾಗಿ ಬೆಳೆಯುತ್ತಿರುವ ಭಾರತಕ್ಕೆ ವಿದೇಶ ಬಂಡವಾಳ ಹರಿದು ಬರುತ್ತಿದೆ. ಮೊಬೈಲ್ ತಯಾರಿಕೆಯಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಇದು ನಾವೆಲ್ಲರೂ ಗರ್ವಪಡುವ ವಿಷಯ. ಆದರೆ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಲ್ಲಿ ಈ ಭಾವನೆಯೇ ಇಲ್ಲ. ಈ ಎರಡೂ ಪಕ್ಷಗಳು ಸರ್ಕಾರ ನಡೆಸುವಾಗ ವಿದೇಶಿ ಬಂಡವಾಳ ಹೂಡಿಕೆಯ ಪ್ರಯೋಜನ ಪಡೆಯಲಿಲ್ಲ. ಯಾವುದೇ ಅಭಿವೃದ್ಧಿಯೂ ಆಗಲಿಲ್ಲ ಎಂದು ಟೀಕಿಸಿದರು.

ಭಾರತ ರಕ್ಷಣಾ ವ್ಯವಸ್ಥೆ ಗಟ್ಟಿಯಾಗಿದೆ. ನಿರಂತರವಾಗಿ ಸದೃಢತೆಯೊಂದಿಗೆ ಹೊಸ ಕ್ರಾಂತಿ ಆಗುತ್ತಿದೆ. ಏಷ್ಯಾದಲ್ಲಿ ಬಹುದೊಡ್ಡ ಹೆಲಿಕಾಪ್ಟರ್ ತಯಾರಿ ಕರ್ನಾಟಕ ರಾಜ್ಯದಲ್ಲಿ ಆಗುತ್ತಿದೆ. ಕರ್ನಾಟಕ ಸ್ಟಾರ್ಟ್ ಅಪ್ ಇಂಡಸ್ಟ್ರಿಯ ರಾಜಧಾನಿ ಆಗಬೇಕಿದೆ. ರೈಲು ವಲಯ ಪ್ರಗತಿ ಕಾಣುತ್ತಿದೆ. ಈ ಹಿಂದೆ ಪ್ರತಿ ವರ್ಷ 7 ಕಿ.ಮೀ. ರೈಲ್ವೆ ಮಾರ್ಗದ ವಿದ್ಯುದ್ದೀಕರಣ ಆಗುತ್ತಿತ್ತು. ಆದರೆ, ಬಿಜೆಪಿ ಸರ್ಕಾರದ ಅವಧಿಯಲ್ಲಿ 1600 ರೈಲು ಮಾರ್ಗ ವಿದ್ಯುದ್ದೀಕರಣ ಆಗಿದೆ. ಹೆದ್ದಾರಿಗಳು ಅಭಿವೃದ್ಧಿಯಾಗಿವೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಅನ್ನು ದೇಶದ ಜನ ಪ್ರಶಂಸಿಸಿದ್ದಾರೆ. ಮೂಲ ಸೌಕರ್ಯ ಸುಧಾರಣೆ ಕಂಡಿದೆ ಎಂದು ತಿಳಿಸಿದರು.

ಇದು ನಿಮ್ಮ ಹಣ: ಇತಿಹಾಸ ತೆಗೆದು ನೋಡಿದರೆ ಕಾಂಗ್ರೆಸ್ ಸಾಕಷ್ಟು ವಂಚನೆ ಮಾಡಿರುವುದು ತಿಳಿಯುತ್ತದೆ. ಮೋದಿ ಬಂದ ಮೇಲೆ ರೈಲು ನಿಲ್ದಾಣ, ವಿಮಾನ ನಿಲ್ದಾಣ, ರಸ್ತೆ, ಕೈಗಾರಿಕೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ವೇಗವಾಗಿ ಅಭಿವೃದ್ಧಿಯಾಗುತ್ತಿದೆ. ಇದಕ್ಕೆಲ್ಲಾ ಹಣ ಎಲ್ಲಿಂದ ಬರುತ್ತದೆ ಎಂದು ಅನ್ನಿಸಬಹುದು. ಆದರೆ ಇದು ನಿಮ್ಮ ದುಡ್ಡು. ಆ ಹಣವನ್ನು ನಾನು ಅಭಿವೃದ್ಧಿಗೆ ಖರ್ಚು ಮಾಡುತ್ತಿದ್ದೇನೆ. ದೆಹಲಿಯಿಂದ 100 ಪೈಸೆ ಕಳುಹಿಸಿದರೆ ಅದರಲ್ಲಿ 85 ಪೈಸೆ ಕಾಂಗ್ರೆಸ್ ಮುಖಂಡರ ಜೇಬಿಗೆ ಹೋಗುತ್ತದೆ. ಇದು ಮೋದಿ ಹೇಳುತ್ತಿರುವುದಲ್ಲ. ಮಾಜಿ ಪ್ರಧಾನಿ ರಾಜೀವ್ ಗಾಂಧಿಯೇ ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿದ್ದರು. ಇಂತಹ ಪಕ್ಷದಿಂದ ದೇಶದ ಅಭಿವೃದ್ಧಿ ಹೇಗೆ ಸಾಧ್ಯ. 85 ಪರ್ಸೆಂಟ್ ಕಮಿಷನ್ ಸರ್ಕಾರದಿಂದ ಹಣ ಎಲ್ಲಿ ಉಳಿಯುತ್ತದೆ?. ಆದರೆ ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಸರ್ಕಾರದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳಾಗಿವೆ ಎಂದು ಶ್ಲಾಘಿಸಿದರು.

ಸಂಸದರಾದ ವಿ.ಶ್ರೀನಿವಾಸ ಪ್ರಸಾದ್, ಪ್ರತಾಪ್ ಸಿಂಹ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ವರುಣ ಹಾಗೂ ಚಾಮರಾಜನಗರ ಕ್ಷೇತ್ರದ ಅಭ್ಯರ್ಥಿ ವಿ.ಸೋಮಣ್ಣ, ಕೃಷ್ಣರಾಜ ಕ್ಷೇತ್ರದ ಟಿ.ಎಸ್.ಶ್ರೀವತ್ಸ, ಚಾಮರಾಜ ಕ್ಷೇತ್ರದ ಎಲ್.ನಾಗೇಂದ್ರ, ನರಸಿಂಹರಾಜ ಕ್ಷೇತ್ರದ ಸಂದೇಶ್ ಸ್ವಾಮಿ, ಚಾಮುಂಡೇಶ್ವರಿ ಕ್ಷೇತ್ರದ ಕವೀಶ್ ಗೌಡ, ಗುಂಡ್ಲುಪೇಟೆಯ ನಿರಂಜನ ಕುಮಾರ್, ನಂಜನಗೂಡಿನ ಹರ್ಷವರ್ಧನ್, ತಿ.ನರಸೀಪುರದ ಡಾ.ರೇವಣ್ಣ, ಕೊಳ್ಳೇಗಾಲದ ಎನ್.ಮಹೇಶ್, ಪಿರಿಯಾಪಟ್ಟಣದ ಸಿ.ಹೆಚ್.ವಿಜಯ್ ಶಂಕರ್, ಕೆ.ಆರ್.ನಗರದ ಹೊಸಹಳ್ಳಿ ವೆಂಕಟೇಶ್, ಹುಣಸೂರಿನ ಸೋಮಶೇಖರ್, ಹನೂರಿನ ಡಾ.ಪ್ರೀತನ್ ನಾಗಪ್ಪ, ಹೆಚ್.ಡಿ.ಕೋಟೆ ಅಭ್ಯರ್ಥಿ ಕೃಷ್ಣನಾಯಕ್ ಮತ್ತಿತರರು ಉಪಸ್ಥಿತರಿದ್ದರು.

ಹುಷಾರ್... ಹುಷಾರ್...

ಇದನ್ನು ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ ಎಂದರು. ಇದು ಕರ್ನಾಟಕದ ಮಾತ್ರವಲ್ಲ ಇಡೀ ರಾಷ್ಟ್ರಕ್ಕೆ ಸಂಬಂಧಿಸಿದ ವಿಷಯ. ಭಾರತದಿಂದ ಕರ್ನಾಟಕವನ್ನು ವಿಭಜಿಸುವ ಕೃತ್ಯವನ್ನು ತುಕಡೆ ತುಕಡೆ ಗ್ಯಾಂಗ್ ಮಾಡುತ್ತಿದೆ. ಈ ಮೂಲಕ ದೇಶದ ಸ್ವಾತಂತ್ರ್ಯ ಸಂಗ್ರಾಮ, ಅದರಲ್ಲಿ ಭಾಗವಹಿಸಿದ್ದ ಲಕ್ಷಾಂತರ ಕನ್ನಡದ ಕಲಿಗಳು ಹಾಗೂ ಕೋಟ್ಯಾಂತರ ಕನ್ನಡಿಗರ ರಾಷ್ಟ್ರಪ್ರೇಮಕ್ಕೆ ಅಪಮಾನ ಮಾಡುತ್ತಿದ್ದಾರೆ. ಕರ್ನಾಟಕ ಭಾರತದ ಅವಿಭಾಜ್ಯ ಅಂಗ. ಹೀಗೆಂದು ರಾಷ್ಟ್ರಕವಿ ಕುವೆಂಪು ಅವರು 'ಜಯ ಭಾರತ ಜನನಿಯ ತನುಜಾತೆ ಜಯಯೇ ಕರ್ನಾಟಕ ಮಾತೆ' ಗೀತೆಯಲ್ಲಿ ಹೇಳಿದ್ದಾರೆ. ಭಾರತ ಪ್ರತಿಯೊಬ್ಬ ಕನ್ನಡಿಗರ ತಾಯಿ. ಕರ್ನಾಟಕ ಭಾರತದ ಮಗಳು ಎಂದು ಕುವೆಂಪು ಅವರು ಸ್ಪಷ್ಟವಾಗಿ ಹೇಳಿದ್ದಾರೆ ಎಂದು ಭಾವುಕವಾಗಿ ನುಡಿದರು.

ಆದರೆ ಕಾಂಗ್ರೆಸ್, ಸಾರ್ವಭೌಮತ್ವದ ಬಗ್ಗೆ ಮಾತನಾಡಿ ಕರ್ನಾಟಕದ ಸಂಸ್ಕೃತಿ, ಪರಂಪರೆಯನ್ನು ಅಪಮಾನ ಮಾಡುತ್ತಿದೆ. ಇಂತಹ ಪಕ್ಷಕ್ಕೆ ಮತದಾರರು ರಾಜಕೀಯ ಆಕ್ಸಿಜನ್ ನೀಡಬಾರದು. ವಿದೇಶಿ ರಾಜತಾಂತ್ರಿಕರೊಂದಿಗೆ ಕಾಂಗ್ರೆಸ್‌ನ ರಾಜ ಕುಟುಂಬವೊಂದು ದೇಶದ ಹೊರಗೆ ಮಾತುಕತೆ ನಡೆಸುತ್ತಾರೆ. ಹೀಗೆ ಮಾಡಲು ಕಾಂಗ್ರೆಸ್‌ನವರಿಗೆ ನಾಚಿಕೆ ಅನ್ನುವುದೇ ಇಲ್ಲ. ದೇಶದ ಭಾವನೆ, ಸುಭದ್ರತೆಗೆ ಧಕ್ಕೆಯಾಗುವಂತೆ ನಡೆದುಕೊಳ್ಳುತ್ತಿದ್ದಾರೆ. ಓಲೈಕೆ ರಾಜಕಾರಣಕ್ಕಾಗಿ ಕಾಂಗ್ರೆಸ್ ನಾಯಕರು ವೀರಶೈವ ಲಿಂಗಾಯತ ಹಾಗೂ ಓಬಿಸಿ ವರ್ಗವನ್ನು ಅಪಮಾನಿಸುತ್ತಿದ್ದಾರೆ. ಇದರಿಂದ ರಾಜ್ಯದ ಆಂತರಿಕ ಭದ್ರತೆಗೆ ಧಕ್ಕೆಯಾಗುತ್ತಿದೆ. ಕಾಂಗ್ರೆಸ್ ಕಾಲದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದ್ದಲ್ಲದೆ ಭಯೋತ್ಪಾದನೆ ಹೆಚ್ಚಳವಾಗಿತ್ತು. ಕೇರಳದಲ್ಲೂ ಇಂಥ ತುಷ್ಟೀಕರಣ ನಡೆದಿದೆ. ಕರ್ನಾಟಕದಲ್ಲೂ ಅದಾಗಬಾರದೆಂದರೆ ಬಿಜೆಪಿ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಸೂಡಾನ್‌ನಲ್ಲಿ ಸಿಲುಕಿದ್ದ ರಾಜ್ಯದ ಹಕ್ಕಿಪಿಕ್ಕಿ ಸಮುದಾಯದವರನ್ನು ಸುರಕ್ಷಿತವಾಗಿ ಕರೆತಂದಿದ್ದೇವೆ. ಪ್ರತಿ ದೇಶವಾಸಿಯ ರಕ್ಷಣೆಯ ಜವಾಬ್ದಾರಿ ಮೋದಿಯದ್ದಾಗಿದೆ. ದೇಶ ಹಾಗೂ ನನ್ನ ಜನರ ರಕ್ಷಣೆಗೆ ಯಾವ ರೀತಿಯ ಹೋರಾಟಕ್ಕೂ ಸಿದ್ಧನಿದ್ದೇನೆ. ಆದರೆ, ಸಂಕಷ್ಟದಲ್ಲೂ ಕಾಂಗ್ರೆಸ್ ರಾಜಕಾರಣ ಮಾಡಿದೆ ಎಂದು ಹರಿಹಾಯ್ದರು.

ವಿಧಾನಸಭಾ ಚುನಾವಣೆಯ ತಮ್ಮ ಪ್ರಚಾರಕ್ಕೆ ದಕ್ಷಿಣ ಕಾಶಿಯಲ್ಲಿ ತೆರೆ ಎಳೆದ ಪ್ರಧಾನಿ ಮೋದಿ

ಅಂತಿಮ ಮತ ಪ್ರಚಾರದಲ್ಲೂ ಜನರಿಂದ ಭಾರೀ ಪ್ರತಿಕ್ರಿಯೆ



ಮೈಸೂರು, ಮೇ 7(ಎಸ್‌ಬಿಡಿ)– ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಪ್ರಧಾನಿ ಮೋದಿ ಮತಬೇಟೆಗೆ ದಕ್ಷಿಣ ಕಾಶಿ ನಂಜನಗೂಡು ನೆಲದಲ್ಲಿ ಅದ್ಧೂರಿ ತೆರೆ ಬಿದ್ದಿತು. ಹಳೇ ಮೈಸೂರು ಭಾಗದ ಹೆಚ್ಚು ಕ್ಷೇತ್ರಗಳಲ್ಲಿ ಕಮಲ ಅರಳಿಸುವ ಆಶಯ ಹೊಂದಿರುವ ಮೋದಿ, ಅಭ್ಯರ್ಥಿಗಳ ಸಮ್ಮುಖದಲ್ಲಿ ಜನತೆಗೆ ಶಿರಬಾಗಿ ನಮಿಸುವ ಮೂಲಕ ನಿರಂತರ ಪ್ರಚಾರಕ್ಕೆ ತೆರೆ ಎಳೆದರು.

ನೀವೆಲ್ಲಾ ಮನೆಗೆ ತೆರಳಿ ಜನರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ, ಅವರು ನನಗೆ ಆಶೀರ್ವಾದ ಮಾಡುತ್ತಾರೆ. ಅವರ ಆಶೀರ್ವಾದದಿಂದ ನನಗೆ ಉತ್ಸಾಹದಿಂದ ಕೆಲಸ ಮಾಡಲು ಶಕ್ತಿ ಬರುತ್ತದೆ. ಮೇ 10 ರಂದು ಮತಕೇಂದ್ರಗಳಿಗೆ ತೆರಳಿ ಮತದಾನ ಮಾಡಿ, ನಿಮ್ಮ ಮತದಿಂದಲೇ ರಾಜ್ಯ ಹಾಗೂ ದೇಶದ ಅಭಿವೃದ್ಧಿ ಎನ್ನುವುದನ್ನು ಮರೆಯಬೇಡಿ ಎಂದು ಮೋದಿ ಮನವಿ ಮಾಡಿದರು. ಇದೇ ವೇಳೆ ಮೋದಿ ಅವರಿಗೆ ನಿರಂಜನ ಕುಮಾರ್ ಶಾಲು, ಮಾಜಿ ಎಂಎಲ್‌ಸಿ ಸಿದ್ದರಾಜು ಶಲ್ಯ ಹೊದಿಸಿದರೆ ವಿ.ಸೋಮಣ್ಣ ಹಾರ ಹಾಕಿದರು. ಹರ್ಷವರ್ಧನ್ ಸ್ಮರಣಿಕೆ ನೀಡಿ ಇತರರೊಂದಿಗೆ ಆತ್ಮೀಯವಾಗಿ ಅಭಿನಂದಿಸಿದರು.

ಮುಗಿಲು ಮುಟ್ಟಿದ ಉದ್ಘೋಷ: ನಂಜನಗೂಡು–ಗುಂಡ್ಲುಪೇಟೆ ರಸ್ತೆ ಎಲಚಗೆರೆ ಬೋರೆಯ ವಿಶಾಲ ಪ್ರದೇಶದಲ್ಲಿ ಭವ್ಯ ವೇದಿಕೆ ಹಾಗೂ ಸಭಿಕರಿಗೆ ಪೆಂಡಾಲ್ ವ್ಯವಸ್ಥೆ ಮಾಡಲಾಗಿತ್ತು. ಎಲ್ಲೆಲ್ಲೂ ಬಿಜೆಪಿ ಬಾವುಟ, ಕೇಸರಿ ಧ್ವಜ, ಮೋದಿ ಅವರ ವಿಶೇಷ ಫೋಟೋ ಹಾಗೂ ಕಟೌಟ್‌ಗಳು ರಾರಾಜಿಸುತ್ತಿದ್ದವು. ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಲಕ್ಷಾಂತರ ಜನ ನೆರೆದಿದ್ದರು. ಸಂಜೆ 4.45ಕ್ಕೆ ಹೆಲಿಕಾಪ್ಟರ್‌ನಲ್ಲಿ ಆಗಮಿಸಿದ ಮೋದಿ ವೇದಿಕೆ ಹಿಂಭಾಗದ ಟೆಂಟ್‌ನಲ್ಲಿ ಕೆಲಕಾಲ ವಿಶ್ರಾಂತಿ ಪಡೆದು ಸಂಜೆ 5.09ಕ್ಕೆ ವೇದಿಕೆ ಏರುತ್ತಿದ್ದಂತೆ ಮೋದಿ ಉದ್ಘೋಷ ಮುಗಿಲು ಮುಟ್ಟಿತ್ತು.

ಅನುವಾದ ಮೊಟಕು: ಮೋದಿ ಭಾಷಣವನ್ನು ಮಾಜಿ ಎಂಎಲ್‌ಸಿ ಗೋ.ಮಧುಸೂದನ್ ಅನುವಾದ ಮಾಡುತ್ತಿದ್ದರು. ಆದರೆ, ಭಾಷಣ ದೀರ್ಘವಾಗುತ್ತದೆ ಎಂಬ ಕಾರಣಕ್ಕೆ ಪ್ರಧಾನಿ ಮೋದಿ, ಪ್ರತಾಪಸಿಂಹ ಅವರನ್ನು ಕರೆ ಅನುವಾದ ನಿಲ್ಲಿಸಲು ಸೂಚನೆ ನೀಡಿದರು. ನಂತರ ತಾವೇ ಮಾತು ಮುಂದುವರೆಸಿ, ನಾನು ಗುಜರಾತಿ. ಆದರೂ ಹಿಂದಿ ಮಾತನಾಡುತ್ತೇನೆ. ಕೆಲ ತಪ್ಪುಗಳಾಗುತ್ತವೆ. ಕನ್ನಡಿಗರಿಗೆ ಹಿಂದಿ ಅರ್ಥ ಆಗುತ್ತದೆ. ಎಲ್ಲಾ ಭಾಷೆ ಬಗ್ಗೆ ಅವರ ಪ್ರೀತಿ ದೊಡ್ಡದು. ಅನುಮತಿ ಕೊಟ್ಟರೆ ಹಿಂದಿಯಲ್ಲಿ ಮಾತನಾಡುತ್ತೇನೆ ಎಂದರು. ಇದಕ್ಕೆ ಸಭಿಕರಿಂದ ಸಮ್ಮತಿ ದೊರೆತ ನಂತರ ಭಾಷಣ ಮುಂದುವರೆಸಿದರು. ಪೊಲೀಸರು ಹಾಗೂ ಸಿಐಎಸ್‌ಎಫ್ ಸಿಬ್ಬಂದಿ ಬಿಗಿ ಬಂದೋಬಸ್ತ್ ಮಾಡಿದ್ದರು. ನಂಜನಗೂಡು ಮಾರ್ಗವಾಗಿ ಸಂಚರಿಸುವ ವಾಹನಗಳ ಮಾರ್ಗ ಬದಲಿಸಲಾಗಿತ್ತು. ಮೋದಿ ಸಮಾವೇಶದ ಬಳಿಕ ನಂಜನಗೂಡಿಗೆ ತೆರಳಿ ಅಲ್ಲಿಂದ ಮಂಡಕಳ್ಳಿ ವಿಮಾನ ನಿಲ್ದಾಣ ತಲುಪಿದ ನಂತರ ಮುಖ್ಯ ರಸ್ತೆ ಸಂಚಾರ ಮುಕ್ತಗೊಳಿಸಲಾಯಿತು. ತಾಸುಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗಿತ್ತು.

ನಂಜುಂಡೇಶ್ವರನ ಸ್ಮರಣೆ: ಭಾಷಣದ ಮಧ್ಯೆ ಮೋದಿ, ತಾಯಿ ಚಾಮುಂಡೇಶ್ವರಿ, ನಂಜುಂಡೇಶ್ವರಸ್ವಾಮಿ, ಮಲೆ ಮಹದೇಶ್ವರ ಸ್ವಾಮಿಗೆ ನಮಿಸಿದರಲ್ಲದೆ ಶ್ರೀ ಆದಿ ಚುಂಚನಗಿರಿ, ಶ್ರೀ ಸುತ್ತೂರು ಮಠ, ಶ್ರೀ ದೇವನೂರು ಮಠವನ್ನು ಸ್ಮರಿಸಿಕೊಂಡರು. ಶ್ರೀಕಂಠೇಶ್ವರ ದೇವಾಲಯಕ್ಕೆ ಭೇಟಿ ಕೊಡುತ್ತಿರುವುದು ನನ್ನ ಸೌಭಾಗ್ಯ. ಎಲ್ಲರಿಗೂ ಉತ್ತಮ ಆರೋಗ್ಯ, ಅಭಿವೃದ್ಧಿಗಾಗಿ ಪ್ರಾರ್ಥಿಸುತ್ತೇನೆ. ಶ್ರೀಕಂಠೇಶ್ವರ ವಿಷಪಾನ ಮಾಡಿದವರು. ಕಾಂಗ್ರೆಸ್‌ನವರ ಎಲ್ಲಾ ರೀತಿಯ ಬೈಗುಳವನ್ನೂ ಸಹಿಸುವ ಶಕ್ತಿಯನ್ನು ವಿಷಕಂಠಸ್ವಾಮಿಯಿಂದ ಪಡೆದಿದ್ದೇನೆ. ಚುನಾವಣೆ ಸಂದರ್ಭದಲ್ಲಿ ಜನತೆಯ ಪೂರ್ಣ ಆಶೀರ್ವಾದವೂ ನಮಗೆ ಸಿಗುತ್ತಿದೆ ಎಂದರು.

ವಂದೇ ಮಾತರಂ ಮೊಳಗಿಸಿದ ಮೋದಿ

ಮೋದಿ ಭಾಷಣದ ಮಧ್ಯೆ ತಮ್ಮ ಮೊಬೈಲ್ ಫೋನ್‌ನಲ್ಲಿ ಫ್ಲ್ಯಾಶ್ ಲೈಟ್ ಆನ್ ಮಾಡುವಂತೆ ಕೋರಿದರು. ನೆರೆದಿದ್ದವರೆಲ್ಲಾ ಫ್ಲ್ಯಾಶ್ ಲೈಟ್ ಆನ್ ಮಾಡಿದರು. ಈ ವೇಳೆ ಮೋದಿ ಗಟ್ಟಿಯಾಗಿ ಭಾರತ್ ಮಾತಾಕೀ ಜೈ, ವಂದೇ ಮಾತರಂ ಮೊಳಗಿಸಿದರು. ಮೋದಿ ಭಾರತ್ ಮಾತಾಕಿ ಎನ್ನುತ್ತಿದ್ದಂತೆ ನೆರೆದಿದ್ದವರು ಜೈ ಎಂದರು, ಹಾಗೆಯೇ ವಂದೇ ಎನ್ನುತ್ತಿದಂತೆ ಮಾತರಂ ಎಂದು ಧ್ವನಿಗೂಡಿಸಿದರು. ಇದೇ ವೇಳೆ ಮೋದಿ ಜೈ ಭಜರಂಗ ಬಲಿ ಎಂದು ಹಲವು ಬಾರಿ ಉದ್ಘೋಷಿಸಿದರು.

ಮೋದಿ ಕನ್ನಡ ಡಿಂಡಿಮ

'ದಕ್ಷಿಣ ಕಾಶಿ ನಂಜನಗೂಡಿನ ಜನತೆಗೆ ನನ್ನ ನಮಸ್ಕಾರಗಳು' ಎಂದು ಮಾತು ಆರಂಭಿಸಿದ ಮೋದಿ, ಭಾಷಣದ ನಡುವೆ ಹಲವು ಕನ್ನಡ ಪದಗಳನ್ನು ಬಳಕೆ ಮಾಡಿದ್ದು ವಿಶೇಷವಾಗಿತ್ತು. 'ಬಂಧು ಭಗಿನಿಯರೇ', 'ಸ್ನೇಹಿತರೇ', 'ಸಹೋದರ ಸಹೋದರಿಯರೇ' ಹೀಗೆ ಅನೇಕ ಪದಗಳನ್ನು ಬಳಸಿ ನೆರೆದಿದ್ದವರ ಗಮನ ಸೆಳೆದರು.

ಪ್ರಜಾಪ್ರಭುತ್ವದ ಉಳಿವಿಗಾಗಿ ಶ್ರೀವತ್ಸ ಗೆಲ್ಲಿಸಿ



ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ ಮನವಿ

ಮೈಸೂರು, ಮೇ 7– ಹಣಬಲ, ತೋಳ್ಬಲ ಇಲ್ಲದ ಸರಳ ವ್ಯಕ್ತಿತ್ವದ, ಜನಪರ ಕಾಳಜಿಯುಳ್ಳ ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಅವರನ್ನು ಕೃಷ್ಣರಾಜ ಕ್ಷೇತ್ರದ ಮತದಾರರು ಅತ್ಯಧಿಕ ಮತಗಳ ಅಂತರದಿಂದ ಚುನಾಯಿಸುವ ಮೂಲಕ ಪ್ರಜಾಪ್ರಭುತ್ವವನ್ನು ಗೆಲ್ಲಿಸಬೇಕೆಂದು ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ ಅಧ್ಯಕ್ಷರೂ ಆದ ರಾಜ್ಯ ಬಿಜೆಪಿ ಮುಖಂಡ ಆರ್.ರಘು(ಕೌಟಿಲ್ಯ)ಕರೆ ನೀಡಿದರು.

ಶ್ರೀವತ್ಸ ಅವರೊಂದಿಗೆ ಕುರುಬಾರಳ್ಳಿಯಲ್ಲಿ ನಡೆದ ಪಾದಯಾತ್ರೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶ್ರೀವತ್ಸ ಅವರು ಬಡವರ ದನಿಯಾಗಿ ನಿಲ್ಲಬಲ್ಲ, ಸಾಮಾನ್ಯ ಜನರ ದುಃಖ–ದುಮ್ಮಾನಗಳಿಗೆ ಸ್ಪಂದಿಸುವ ಕಾಳಜಿಯುಳ್ಳ ಅಭ್ಯರ್ಥಿಯಾಗಿದ್ದಾರೆ.

ಕೃಷ್ಣರಾಜ ಕ್ಷೇತ್ರದಲ್ಲಿ ಸ್ವಜನ ಪಕ್ಷಪಾತವಿಲ್ಲದ ಅಭಿವೃದ್ಧಿ ಹಾಗೂ ಜನಪರ ಕಾಳಜಿ ಕಾರ್ಯಕ್ರಮಗಳು ನಡೆಯುವಂತಾಗಲು ಶ್ರೀವತ್ಸರವರನ್ನು ಗೆಲ್ಲಿಸುವ ಮೂಲಕ ಮತದಾರರು ತಮ್ಮದು ಬಿಜೆಪಿಯ ಸುಭದ್ರಕೋಟೆ ಎನ್ನುವುದನ್ನು ಸಾಬೀತುಪಡಿಸಲಿದ್ದಾರೆ ಎಂದು ರಘು ಇದೇ ಸಂದರ್ಭದಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿಯ ಪ್ರಣಾಳಿಕೆಯಲ್ಲಿ ಶಿಕ್ಷಣ, ಉದ್ಯೋಗ, ಸೂರು ಇಲ್ಲದವರಿಗೆ ಸೂರು ಕೊಡುವ ಯೋಜನೆಗಳ ಭರವಸೆ ನೀಡಲಾಗಿದೆ. ಕೃಷ್ಣರಾಜ ಕ್ಷೇತ್ರವನ್ನು ಸೂರು ರಹಿತರ ಹಾಗೂ ನಿರುದ್ಯೋಗ ರಹಿತರ ಕ್ಷೇತ್ರವನ್ನಾಗಿಸುವುದು ಶ್ರೀವತ್ಸ ಅವರ ಸಂಕಲ್ಪವಾಗಿದೆ. ಇದರ ಜತೆ ಜತೆಗೇ ಮಹಿಳೆಯರ ಸ್ವಾವಲಂಬನೆ ಹಾಗೂ ಗುಣಮಟ್ಟದ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ನನ್ನ ಗುರಿ ಎಂದು ಶ್ರೀವತ್ಸ ತಮ್ಮ ಭರವಸೆಯ ಪಟ್ಟಿಯಲ್ಲಿ ಪ್ರಕಟಿಸಿದ್ದಾರೆ. ಅದನ್ನು ಈಡೇರಿಸುತ್ತಾರೆ ಎನ್ನುವ ಭರವಸೆ ನನ್ನದಾಗಿದೆ. ಏಕೆಂದರೆ ಶ್ರೀವತ್ಸ ಸಾಮಾನ್ಯ ಕಾರ್ಯಕರ್ತರಾಗಿ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡವರು. ತಮ್ಮ ಇಡೀ ಜೀವನವನ್ನು ಸಾರ್ವಜನಿಕ ಬದುಕಿಗೆ ಮುಡಿಪಾಗಿರಿಸಿರುವವರು ಇಂಥವರ ಆಯ್ಕೆ ಪ್ರಜಾಪ್ರಭುತ್ವದ ಮೌಲ್ಯ ಹಾಗೂ ಸಂವಿಧಾನದ ಆಶಯ ಎತ್ತಿಹಿಡಿಯಲಿದೆ ಎಂದು ಕೌಟಿಲ್ಯ ರಘು ಹೇಳಿದರು. ಪಾದಯಾತ್ರೆಯಲ್ಲಿ ಉಪಮೇಯರ್ ರೂಪಾ, ನಗರಪಾಲಿಕ ಸದಸ್ಯ ರಮೇಶ್, ಮಾಜಿ ಉಪಮೇಯರ್ ಮಹದೇವಮ್ಮ, ಮುಖಂಡರಾದ ವಿಕ್ರಂ ಅಯ್ಯಂಗಾರ್, ಬಿ.ಎಸ್.ಅಶೋಕ್ ಮೊದಲಾದ ಮುಖಂಡರು ಉಪಸ್ಥಿತರಿದ್ದರು.

ಮತದಾರರಲ್ಲಿ ವಿಶ್ವಾಸ ಮೂಡಿಸಲು ಪೊಲೀಸ್ ಪಥಸಂಚಲನ



ಮೈಸೂರು, ಮೇ 7(ಎಂಕೆ)– ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆ ಸಾರ್ವಜನಿಕರಿಗೆ ಧೈರ್ಯ ತುಂಬುವ ನಿಟ್ಟಿನಲ್ಲಿ ಹೆಬ್ಬಾಳ ಪೊಲೀಸ್ ಠಾಣೆ ವತಿಯಿಂದ ಭಾನುವಾರ ರೂಟ್ ಮಾರ್ಚ್ ನಡೆಸಲಾಯಿತು. ಹೆಬ್ಬಾಳಿನ ಲಕ್ಷ್ಮಿಕಾಂತ್‌ನಗರದಿಂದ ಆರಂಭವಾದ ರೂಟ್ ಮಾರ್ಚ್ ಪ್ರಮುಖ ಬೀದಿಗಳಲ್ಲಿ ಸಾಗಿತು. ಮತದಾನದ ದಿನದಂದು ಯಾವುದಕ್ಕೂ ಯಾರಿಗೂ ಭಯಪಡದೆ ಮತದಾರರು ಮತಗಟ್ಟೆಗೆ ಬಂದು ತಮ್ಮ ಹಕ್ಕು ಚಲಾಯಿಸಬೇಕು. ಮತದಾರರ ರಕ್ಷಣೆಗೆ ನಾವಿದ್ದೇವೆ ಎಂಬುದನ್ನು ತಿಳಿಸಿಲಾಯಿತು. ಹೆಬ್ಬಾಳ ಪೊಲೀಸ್ ಠಾಣೆ ಸಬ್ ಇನ್‌ಸ್ಪೆಕ್ಟರ್‌ಗಳಾದ ಅಂಬಮ್ಮ ಅಂಬ್ರಿನಾ, ಐಟಿಬಿಪಿ ಹಾಗೂ ಡಿಎಆರ್ ಸಿಬ್ಬಂದಿ ರೂಟ್ ಮಾರ್ಚ್‌ನಲ್ಲಿ ಭಾಗವಹಿಸಿದ್ದರು.

ಚುನಾವಣೆ ಸಿಬ್ಬಂದಿಗೆ ಊಟೋಪಚಾರ ವ್ಯವಸ್ಥೆ

ಮೈಸೂರು, ಮೇ 7(ಎಸ್‌ಪಿಎನ್)– ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ 2023ರ ಸಂಬಂಧ ಮತಗಟ್ಟೆ ಅಧಿಕಾರಿ/ನೌಕರರಿಗೆ ಊಟೋಪಚಾರದ ವ್ಯವಸ್ಥೆಯನ್ನು ಕಲ್ಪಿಸುವಂತೆ ಮೈಸೂರು ಜಿಪಂ ಪಿಎಂ ಪೋಷಣ್ ಶಕ್ತಿ ನಿಯೋಜನೆಯ ಶಿಕ್ಷಣಾಧಿಕಾರಿ ತಿಳಿಸಿದ್ದಾರೆ. ಆಯಾಯ ಶಾಲೆಯ ಮುಖ್ಯಶಿಕ್ಷಕರು ಚುನಾವಣಾ ಕರ್ತವ್ಯಕ್ಕೆ ತೆರಳುವ ಮುನ್ನ ಬಿಸಿಯೂಟ ಸಿಬ್ಬಂದಿಗೆ ಈ ಕುರಿತು ಮಾಹಿತಿ ನೀಡಿ, ಮೇ 9 ಮತ್ತು 10 ರಂದು ಚುನಾವಣಾ ಕರ್ತವ್ಯಕ್ಕೆ ಹಾಜರಾಗುವ ಮತಗಟ್ಟೆ ಸಿಬ್ಬಂದಿಗಳನ್ನು ಸಂಪರ್ಕಿಸಿ, ಊಟ–ತಿಂಡಿ ವ್ಯವಸ್ಥೆ ಕುರಿತು ಮಾಹಿತಿ ಪಡೆಯಬೇಕು. ಆದರೆ, ಶಾಲಾ ಬಿಸಿಯೂಟದ ದವಸ–ಧಾನ್ಯಗಳನ್ನು ಬಳಸದೇ ಮತಗಟ್ಟೆ ಅಧಿಕಾರಿಗಳಿಂದಲೇ ಹಣ ಪಡೆದು ಊಟ–ತಿಂಡಿಯನ್ನು ತಯಾರಿಸಿ ಕೊಡುವಂತೆ ಆಯಾಯ ತಾಲೂಕು ಪಂಚಾಯತ್ ಪಿಎಂ ಪೋಷಣ್ ಶಕ್ತಿ ನಿಯೋಜನೆಯ ಸಹಾಯಕ ನಿರ್ದೇಶಕರ ಮೂಲಕ ಶಾಲಾ ಮುಖ್ಯಶಿಕ್ಷಕರಿಗೆ ಸೂಚಿಸಿದ್ದಾರೆ.

ಹುಣಸೂರು ನಮ್ಮ ಕುಟುಂಬದ ಕರ್ಮಭೂಮಿ

–ಜಿ.ಡಿ.ಹರೀಶ್‌ಗೌಡ, ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ





> “ಮೈಸೂರು, ಹುಣಸೂರು ನಮ್ಮ ಕುಟುಂಬದ ಕಾರ್ಯಕ್ಷೇತ್ರ, ನಮ್ಮ ತಂದೆ ಮೊದಲು ಶಾಸಕರಾಗಿದ್ದು ಇಲ್ಲಿಂದಲೇ. ಅವರು ಎರಡು ಬಾರಿ ಇಲ್ಲಿನ ಶಾಸಕರಾಗಿದ್ದರು. ನಂತರ ಸಚಿವರೂ ಆದರು. ತಾಯಿ ಹನಗೋಡು ಕ್ಷೇತ್ರದಿಂದ ಮೈಸೂರು ಜಿಲ್ಲಾ ಪಂಚಾಯಿತಿಗೆ ಆಯ್ಕೆಯಾಗಿದ್ದರು. ಇಲ್ಲಿಯೇ ಲಕ್ಷ್ಮೀ ಮಹಿಳಾ ಸಹಕಾರಿ ಬ್ಯಾಂಕ್ ಸ್ಥಾಪಿಸಿ, ಸಾವಿರಾರು ಕುಟುಂಬ, ಲಕ್ಷಾಂತರ ಮಂದಿಯ ಬಾಳಿಗೆ ಬೆಳಕು ನೀಡಿದ್ದಾರೆ. ತಂದೆ ಹಾಗೂ ತಾಯಿಯ ಮೂಲಕ ಈ ಮೊದಲಿನಿಂದಲೂ ಕ್ಷೇತ್ರದಲ್ಲಿ ಜನಸಂಪರ್ಕ ಹೊಂದಿದ್ದೇನೆ. ಭಾರೀ ಪ್ರಮಾಣದಲ್ಲಿ ಇಲ್ಲಿ ಬಂಧುಗಳು–ನೆಂಟರಿಷ್ಟರಿದ್ದಾರೆ. ಮೇಲಾಗಿ ಅಭಿಮಾನಿಗಳು, ಹಿತೈಷಿಗಳು ಹಾಗೂ ಪಕ್ಷದ ಕಾರ್ಯಕರ್ತರು ಅತ್ಯಧಿಕ ಸಂಖ್ಯೆಯಲ್ಲಿದ್ದಾರೆ. ಇದೂ ಸಹ ನಾನು ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲು ಒಂದು ಪ್ರಮುಖ ಕಾರಣ.

ಸಂದರ್ಶನ: ಎಸ್.ಬಿ.ದೇವರಾಜ

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಹುಣಸೂರು ಕ್ಷೇತ್ರದಿಂದ ಜಾತ್ಯಾತೀತ ಜನತಾ ದಳದ ಅಭ್ಯರ್ಥಿಯಾಗಿ ಯುವ ಮುಖಂಡ ಜಿ.ಡಿ. ಹರೀಶ್‌ಗೌಡ ಸ್ಪರ್ಧಿಸಿದ್ದಾರೆ. ಎರಡು ಬಾರಿ ಈ ಕ್ಷೇತ್ರದಿಂದ ಸ್ಪರ್ಧಿಸುವ ಅವಕಾಶ ಇವರಿಗೆ ಕೈತಪ್ಪಿತ್ತು. ಪಕ್ಷದ ವರಿಷ್ಠರ ಸಲಹೆಯನ್ನು ಶಿರಸಾ ವಹಿಸಿ ಪಾಲಿಸುವುದರೊಂದಿಗೆ ಕ್ಷೇತ್ರ ತ್ಯಾಗ ಮಾಡಿದ್ದರು. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಇವರ ರಾಜಕೀಯ ಭವಿಷ್ಯ ನಿರ್ಧರಿಸುವ ಕಣವಾಗಿ ಹುಣಸೂರು ಈಗ ಮಾರ್ಪಟ್ಟಿದೆ. ಪಕ್ಷದ ಅಭ್ಯರ್ಥಿಯಾಗಿ ಘೋಷಣೆಯಾದ ದಿನದಿಂದ ನಿರಂತರವಾಗಿ ಕ್ಷೇತ್ರಾದ್ಯಂತ ಸಂಚರಿಸಿ ಮತದಾರರ ಮನವೊಲಿಸುವ ಪ್ರಯತ್ನ ಮಾಡುತ್ತಿದ್ದಾರೆ. ಭಾರೀ ಬೆಂಬಲ ವ್ಯಕ್ತವಾಗುತ್ತಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ.

ಜಿ.ಡಿ.ಹರೀಶ್‌ಗೌಡರು ರಾಜಕೀಯ ಕುಟುಂಬದಿಂದ ಬಂದವರು. ತಂದೆ ಜಿ.ಟಿ. ದೇವೇಗೌಡರು ನಾಲ್ಕು ಬಾರಿ ಶಾಸಕರು, ಎರಡು ಬಾರಿ ಸಚಿವರಾಗಿದ್ದವರು. ಅವರೂ ಸಹ ಹುಣಸೂರನ್ನು ತಮ್ಮ ರಾಜಕೀಯ ಕರ್ಮ ಭೂಮಿಯನ್ನಾಗಿ ಮಾಡಿಕೊಂಡಿದ್ದರು. ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು, ಇದ್ದಂತಹ ಕಡಿಮೆ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದರು. ನಂತರ ಮತ್ತೊಮ್ಮೆ ಸ್ಪರ್ಧಿಸಿ ಗೆದ್ದು ಕುಮಾರಸ್ವಾಮಿಯವರ ಸರ್ಕಾರದಲ್ಲಿ ಸಹಕಾರ ಸಚಿವರಾಗಿದ್ದರು. ಹರೀಶ್‌ಗೌಡರ ತಾಯಿ ಸಹ ಸಾರ್ವ ಜನಿಕ ಜೀವನದಲ್ಲಿದ್ದಾರೆ. ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡರು ಸಹಕಾರಿ ಕ್ಷೇತ್ರದಲ್ಲಿ ಉನ್ನತ ಸ್ಥಾನ–ರಾಜ್ಯ ಪತ್ತಿನ ಸಹಕಾರ ಮಹಾ ಮಂಡಲದ ಅಧ್ಯಕ್ಷರಾಗಿದ್ದಾರೆ. ಒಮ್ಮೆ ಜಿಲ್ಲಾ ಪಂಚಾಯತ್ ಸದಸ್ಯರೂ ಆಗಿದ್ದರು. ಹರೀಶ್‌ಗೌಡರು ಸಹ ಸಹಕಾರ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ. ಇವರು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈಗ ವಿಧಾನಸೌಧ ಪ್ರವೇಶಿಸುವ ಮಹಾ ಕನಸು ಹೊತ್ತಿದ್ದು, ಹುಣಸೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆಗಿಳಿದಿದ್ದಾರೆ. ಬಿಡುವಿಲ್ಲದ ಪ್ರಚಾರ ಭರಾಟೆ ನಡುವೆ ‘ಮೈಸೂರು ಮಿತ್ರ’ನೊಂದಿಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

ಮೈಸೂರು ಮಿತ್ರ: ಕಳೆದೆರಡು ಚುನಾವಣೆಗಳಲ್ಲಿ ನಿಮ್ಮ ಸ್ಪರ್ಧೆಗೆ ಬಹಳಷ್ಟು ಒತ್ತಡವಿತ್ತು. ಈ ಬಾರಿ ಅವಕಾಶ ಸಿಕ್ಕಿರುವ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

ಜಿ.ಡಿ.ಹರೀಶ್‌ಗೌಡ: ಅನೇಕ ವೇಳೆ ನಾವಂದುಕೊಂಡಂತೆ ಆಗುವುದಿಲ್ಲ. ಹಿಂದೆ ಸಾಕಷ್ಟು ತಯಾರಿ ಮಾಡಿಕೊಂಡಿದ್ದೆವು. ಆದರೆ, ಆಗ ಎದುರಾದಂತಹ ಪರಿಸ್ಥಿತಿಯನ್ನು ಮನಗಂಡು ಪಕ್ಷದ ವರಿಷ್ಠರು ನನ್ನ ಮನವೊಲಿಸಿದ್ದರು. ಅವರ ಮಾತಿಗೆ ಮನ್ನಣೆ ನೀಡಿ ನಾನು ಸ್ಪರ್ಧೆಯ ನಿರ್ಧಾರವನ್ನು ಕೈಬಿಟ್ಟು, ಪಕ್ಷಕ್ಕಾಗಿ ದುಡಿದಿದ್ದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದ ಆರಾಧಕರು ನಾವು. ಅವರು ತೆಗೆದುಕೊಂಡಂತಹ ನಿರ್ಧಾರಗಳು ಸರಿಯಾಗಿವೆ ಎಂಬುದು ಅಂದು ನಮಗೆ ಅನಿಸಿತ್ತು. ಈಗ ಕಾಲ ಕೂಡಿ ಬಂದಿದೆ. ನನಗೆ ಆಶೀರ್ವಾದ ಮಾಡಿದ್ದಾರೆ. ಕ್ಷೇತ್ರದಲ್ಲಿ ಭಾರೀ ಬೆಂಬಲ ವ್ಯಕ್ತವಾಗುತ್ತಿದೆ. ನನ್ನ ಗೆಲುವಿಗೆ ಯಾವುದೇ ಅಡ್ಡಿ–ಆತಂಕವಿಲ್ಲ.

ಮಿತ್ರ: ಹುಣಸೂರು ಕ್ಷೇತ್ರದೊಂದಿಗೆ ನಿಮ್ಮ ನಂಟಿನ ಬಗ್ಗೆ ತಿಳಿಸುವಿರಾ?

ಹರೀಶ್‌ಗೌಡ: ಮೈಸೂರು, ಹುಣಸೂರು ನಮ್ಮ ಕುಟುಂಬದ ಕಾರ್ಯಕ್ಷೇತ್ರ, ನಮ್ಮ ತಂದೆ ಮೊದಲು ಶಾಸಕರಾಗಿದ್ದು ಇಲ್ಲಿಂದಲೇ. ಅವರು ಎರಡು ಬಾರಿ ಇಲ್ಲಿನ ಶಾಸಕರಾಗಿದ್ದರು. ನಂತರ ಸಚಿವರೂ ಆದರು. ತಾಯಿ ಹನಗೋಡು ಕ್ಷೇತ್ರದಿಂದ ಮೈಸೂರು ಜಿಲ್ಲಾ ಪಂಚಾಯಿತಿಗೆ ಆಯ್ಕೆಯಾಗಿದ್ದರು. ಇಲ್ಲಿಯೇ ಲಕ್ಷ್ಮೀ ಮಹಿಳಾ ಸಹಕಾರಿ ಬ್ಯಾಂಕ್ ಸ್ಥಾಪಿಸಿ, ಸಾವಿರಾರು ಕುಟುಂಬ, ಲಕ್ಷಾಂತರ ಮಂದಿಯ ಬಾಳಿಗೆ ಬೆಳಕು ನೀಡಿ ದ್ದಾರೆ. ನಮ್ಮ ಕುಟುಂಬ ಟ್ರಸ್ಟ್‌ವೊಂದನ್ನು ಸ್ಥಾಪಿಸಿ ಟೈಲರಿಂಗ್ ತರಬೇತಿ ನೀಡುತ್ತಿದೆ. ಪರಿಸರ ಸಂರಕ್ಷಣೆ ನಿಟ್ಟಿನಲ್ಲಿ ಸಾವಿರಾರು ಸಸಿಗಳನ್ನು ನೆಡಲಾಗಿದೆ. ಭಾರೀ ಪ್ರಮಾಣದಲ್ಲಿ ಇಲ್ಲಿ ಬಂಧುಗಳು–ನೆಂಟರಿಷ್ಟರಿದ್ದಾರೆ. ಮೇಲಾಗಿ ಅಭಿಮಾನಿಗಳು, ಹಿತೈಷಿಗಳು ಹಾಗೂ ಪಕ್ಷದ ಕಾರ್ಯಕರ್ತರು ಅತ್ಯಧಿಕ ಸಂಖ್ಯೆಯಲ್ಲಿದ್ದಾರೆ. ಇದೂ ಸಹ ನಾನು ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲು ಒಂದು ಪ್ರಮುಖ ಕಾರಣ.

ಮಿತ್ರ: ಪ್ರಚಾರದ ವೇಳೆ ಕ್ಷೇತ್ರದ ಜನರ ಸ್ಪಂದನೆ ಹೇಗಿದೆ?

ಹರೀಶ್‌ಗೌಡ: ಅದ್ಭುತವಾಗಿದೆ. ಹೋದಲ್ಲೆಲ್ಲಾ ಪ್ರೀತಿಯಿಂದ ಸ್ವಾಗತಿಸಿ, ಬೆಂಬಲಿಸುವ ಭರವಸೆ ನೀಡುತ್ತಿದ್ದಾರೆ. ಅದರಲ್ಲೂ ಮಹಿಳೆಯರು, ಯುವಕರು, ವಯಸ್ಸಾದವರು, ಅತ್ಯಂತ ವಿಶ್ವಾಸದಿಂದ ಕಂಡು ಈ ಬಾರಿ ನಿಮ್ಮನ್ನೇ ಬೆಂಬಲಿಸುತ್ತೇವೆ ಎಂದು ಹೇಳಿ, ಸ್ಫೂರ್ತಿಯಾಗಿದ್ದಾರೆ. ಇದನ್ನು ಸಹಿಸದವರು ಸಾಮಾಜಿಕ ಜಾಲತಾಣದಲ್ಲಿ ಇಲ್ಲಸಲ್ಲದ ಹೇಳಿಕೆಗಳನ್ನು ಹರಿಬಿಡುತ್ತಿದ್ದಾರೆ. ವಾಸ್ತವ ಸಂಗತಿ ನಮಗೆ ತಿಳಿದಿರುವುದರಿಂದ ಅದಕ್ಕೆ ಪ್ರತಿಕ್ರಿಯಿಸಲು ಹೋಗುವುದಿಲ್ಲ.

ಮಿತ್ರ: ನೀವು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ, ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದೀರಿ. ಸಹಕಾರಿ ಕ್ಷೇತ್ರದ ಈ ಸೇವೆ ಈಗ ನಿಮಗೆ ಸಹಕಾರಿಯಾಗಬಹುದೇ?

ಹರೀಶ್‌ಗೌಡ: ಖಂಡಿತಾ. ರಾಜ್ಯದಲ್ಲಿ ಬಹುತೇಕ ಜನಪ್ರತಿನಿಧಿಗಳು ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದವರೇ ಆಗಿದ್ದಾರೆ. ಇದು ಒಂದು ಪವಿತ್ರ ಸೇವಾ ಕ್ಷೇತ್ರ, ಇದರಿಂದ ಅನುಕೂಲ ಪಡೆದಂತಹ ಜನ ಕೃತಜ್ಞತಾ ಭಾವ ಹೊಂದಿರುತ್ತಾರೆ. ನಾನೂ ಸಹ ಸಿಕ್ಕಂತಹ ಅಧಿಕಾರ ಮತ್ತು ಸ್ಥಾನಮಾನವನ್ನು ಜನರ ಸೇವೆಗಾಗಿಯೇ ಬಳಸಿದ್ದೇನೆ ಅದರಲ್ಲೂ ನಮ್ಮ ರೈತ ಬಾಂಧವರ ನೆರವಿಗೆ ಧಾವಿಸಿದ್ದೇನೆ. ಹಾಗಾಗಿ ಸಹಕಾರಿ ಕ್ಷೇತ್ರದಡಿ ಅನುಕೂಲ ಪಡೆದಂತಹವರು ನನ್ನನ್ನು ಬೆಂಬಲಿಸುತ್ತಾರೆ. ಆದರೆ, ಇದನ್ನೂ ಸಹ ಕೆಲವರು ಅಧಿಕಾರದ ದುರುಪಯೋಗದ ಹೆಸರಿನಲ್ಲಿ ಟೀಕಿಸುತ್ತಿದ್ದಾರೆ. ಇದರ ಬಗ್ಗೆ ಏನು ಹೇಳುವುದು. ನೀವೇ ಹೇಳಿ.

ಮಿತ್ರ: ಕ್ಷೇತ್ರದ ಯುವಮತದಾರರ ಪ್ರತಿಕ್ರಿಯೆ ಹೇಗಿದೆ?

ಹರೀಶ್‌ಗೌಡ: ಕ್ಷೇತ್ರಾದ್ಯಂತ ಈಗಾಗಲೇ ಸಾಕಷ್ಟು ಬಾರಿ ಸುತ್ತು ಹಾಕಿರುವ ನನಗೆ ಯುವಶಕ್ತಿ ಮಹಾಶಕ್ತಿಯಾಗಿ ಬೆಂಬಲಕ್ಕೆ ನಿಂತಿದೆ. ನಮ್ಮ ಭವಿಷ್ಯದ ದೃಷ್ಟಿಯಿಂದಲೋ ಏನೋ ತಾಲೂಕಿನ ಯುವಕರು ನನ್ನ ಪರ ಟೊಂಕಕಟ್ಟಿ ನಿಂತಿದ್ದಾರೆ. ನಾನೂ ಸಹ ಅವರನ್ನು ದೃಷ್ಟಿಯಲ್ಲಿಟ್ಟುಕೊಂಡು ಭವಿಷ್ಯದಲ್ಲಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಕನಸು ಕಂಡಿದ್ದೇನೆ. ಈಗ ನನ್ನೊಂದಿಗೆ ಇರುವ ಯುವ ಸಮೂಹವನ್ನು ನೋಡಿ ಬೆಚ್ಚಿರುವಂತಹ ಕೆಲವರು ಸಾಮಾಜಿಕ ಜಾಲತಾಣದಲ್ಲಿ ಅಪಪ್ರಚಾರ ಮಾಡುತ್ತಿದ್ದಾರೆ.

ಮಿತ್ರ: ನಿಮ್ಮ ತಂದೆ ಜಿ.ಟಿ. ದೇವೇಗೌಡರು ಎರಡು ಬಾರಿ ಇಲ್ಲಿಂದ ಶಾಸಕರಾಗಿದ್ದರು. ಇದೇನಾದರೂ ನಿಮಗೆ ಅನುಕೂಲ ಆಗುವುದೇ?

ಹರೀಶ್‌ಗೌಡ: ಕೇವಲ ಎರಡು ಬಾರಿ ಶಾಸಕರಾಗಿ ನಮ್ಮ ತಂದೆ ಮಾಡಿದಂತಹ ಅಭಿವೃದ್ಧಿ ಕಾರ್ಯಗಳು ಈಗ ನನ್ನ ಕೈಹಿಡಿಯುವ ಕಾಲ ಬಂದಿದೆ. ಜನ ಯಾವುದನ್ನೂ ಮರೆತಿಲ್ಲ. ಕೆರೆ–ಕಟ್ಟೆಗಳ ಸುಧಾರಣೆ, ರಸ್ತೆಗಳ ನಿರ್ಮಾಣ, ಹೋಬಳಿಗೊಂದು ವಿದ್ಯುತ್ ಕೇಂದ್ರ, 18 ಪ್ರೌಢಶಾಲೆ, 7 ಪಿಯು ಕಾಲೇಜ್, 3 ಪ್ರಥಮ ದರ್ಜೆ ಕಾಲೇಜು, ಹೀಗೆ ಅಭಿವೃದ್ಧಿ ಕಾರ್ಯವನ್ನು ಅಂದೇ ನನ್ನ ತಂದೆ ಪರಿಹರಿಸಿದ್ದರು. ಅದನ್ನು ಈಗಲೂ ಸಹ ಜನ ನೆನಪು ಮಾಡಿಕೊಳ್ಳುತ್ತಿದ್ದಾರೆ. ಹಾಗಿದ್ದ ಮೇಲೆ ಇವುಗಳು ನನ್ನ ಕೈಹಿಡಿಯದೇ ಇರುತ್ತವೆಯೇ.

ಮಿತ್ರ: ಕ್ಷೇತ್ರದಲ್ಲಿ ಈಗ ನಿಮ್ಮ ಗಮನಕ್ಕೆ ಬಂದಿರುವಂತಹ ಗಂಭೀರ ಸಮಸ್ಯೆಗಳೇನು?

ಹರೀಶ್‌ಗೌಡ: ಹೆಚ್ಚು–ಕಡಿಮೆ 15 ವರ್ಷಗಳಿಂದ ಒಬ್ಬರೇ ಶಾಸಕರಾಗಿದ್ದಾರೆ. ಹಲವು ವರ್ಷಗಳ ಕಾಲ ಅವರದ್ದೇ ಸರ್ಕಾರವಿತ್ತು. ಆಗ ಈ ಕ್ಷೇತ್ರ ಅಭಿವೃದ್ಧಿಯ ಚಿತ್ರಣವನ್ನೇ ಬದಲಿಸಬಹುದಿತ್ತು. ಹುಣಸೂರು ತಾಲೂಕು ಸರ್ವಜನಾಂಗದ ಕರ್ಮಭೂಮಿಯಾಗಿದೆ. ಯಾವೊಂದು ಶಾಶ್ವತ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿಲ್ಲ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿ ತಾಲೂಕಿಗೆ ಕುಡಿಯುವ ನೀರಾಗಲೀ, ವಿದ್ಯುತ್ ಸಮಸ್ಯೆ ನಿವಾರಣೆಗೆ ಬಹಳಷ್ಟು ಕೊಡುಗೆ ನೀಡಿದ್ದಾರೆ. ಈಗ ಕುಡಿಯುವ ನೀರಿನ ಸಮಸ್ಯೆ ನೀಗಲು ಕೆಆರ್‌ಎಸ್ ಹಿನ್ನೀರಿನಿಂದ ನೀರು ಹರಿಸಲಾಗುತ್ತಿದೆ. ಇವೆಲ್ಲಾ ಯಾವಾಗಲೋ ಆಗಬೇಕಾಗಿದ್ದ ಕೆಲಸಗಳು. ಇವುಗಳ ಬಗ್ಗೆ ಜನರಿಗೆ ಮನವರಿಕೆಯಾಗಿದೆ. ನನಗೆ ಅವಕಾಶ ಸಿಕ್ಕರೆ ಕ್ಷೇತ್ರದ ಅಭಿವೃದ್ಧಿಯ ಚಿತ್ರಣವೇ ಬದಲಾಗಲಿದೆ.

ಮಿತ್ರ ನಿಮ್ಮನ್ನು ಏಕೆ ಆಯ್ಕೆ ಮಾಡಬೇಕು. ನೀವು ಶಾಸಕರಾದರೆ ನಿಮ್ಮ ಮೊದಲ ಆದ್ಯತೆ ಯಾವುದಕ್ಕೆ?

ಹರೀಶ್‌ಗೌಡ: ಹುಣಸೂರು ನಮ್ಮ ಕುಟುಂಬದ ಕರ್ಮಭೂಮಿ ಎಂದು ಈ ಮೊದಲೇ ನಾನು ಹೇಳಿದ್ದೇನೆ. ಇಲ್ಲಿನ ಜನ ನಮ್ಮ ಕುಟುಂಬವನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಾರೆ. ನಮ್ಮ ಮೇಲೆ ಭರವಸೆ ಇಟ್ಟಿದ್ದಾರೆ, ನಮ್ಮ ಮೇಲೆ ಸಾಕಷ್ಟು ನಿರೀಕ್ಷೆಗಳಿವೆ. ಅವರ ಆಶೋತ್ತರಗಳನ್ನು ಕೈಲಾದ ಮಟ್ಟಿಗೆ ಈಗ ಈಡೇರಿಸಿದರೂ ಬೃಹತ್ ಪ್ರಮಾಣದಲ್ಲಿ ನೆರವಾಗುವುದು ಸಾಧ್ಯವಾಗದ ಮಾತು. ರಾಜಕೀಯವಾಗಿ ಶಕ್ತಿ ತುಂಬಿದರೆ ಜನಸೇವೆಗೆ ಮತ್ತಷ್ಟು ಅವಕಾಶ ಆಗುತ್ತದೆ ಎಂಬುದು ನಮ್ಮ ಮಹದಾಸೆ.

ಒಂದು ವೇಳೆ ಶಾಸಕರಾಗಿ ಆಯ್ಕೆಯಾದರೆ ಇಡೀ ಕ್ಷೇತ್ರದ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು, ಅಚ್ಚುಕಟ್ಟಾದ ರಸ್ತೆ, ನಿರಂತರ ವಿದ್ಯುತ್, ಗ್ರಾಮಗಳಲ್ಲಿ ಸ್ವಚ್ಛತೆ, ವಿದ್ಯಾವಂತ ಯುವಕರಿಗೆ ಉದ್ಯೋಗ ಮಾರ್ಗಗಳನ್ನು ಕಂಡುಕೊಳ್ಳುವುದು ಹಾಗೆಯೇ ರೈತ ಬಾಂಧವರಿಗೆ ಕಾಲ ಕಾಲಕ್ಕೆ ಅಗತ್ಯವಿರುವಂತಹ ಸೌಕರ್ಯಗಳನ್ನು ಮಾಡಿಕೊಡುವುದು. ಇವೆಲ್ಲಾ ಕೇವಲ ಭರವಸೆಗಳಲ್ಲ, ಶಪಥ.

ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹರೀಶ್‌ಗೌಡರಿಂದ ಬಿರುಸಿನ ಪ್ರಚಾರ



ಮೈಸೂರು, ಮೇ 7(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡ ಪಾದಯಾತ್ರೆ ಮೂಲಕ ಬಿರುಸಿನ ಮತಯಾಚನೆ ನಡೆಸಿದರು.

ನೂರಾರು ಮಂದಿ ಬೆಂಬಲಿಗರು, ಕಾರ್ಯಕರ್ತರೊಡನೆ ಕ್ಷೇತ್ರ ವ್ಯಾಪ್ತಿಯ ಕಾವಾಟಗೇರಿ, ಚಿಕ್ಕ ಒಕ್ಕಲಗೇರಿ, ಬಂಬೂಬಜಾರ್, ಜಯಲಕ್ಷ್ಮಿಪುರಂ, ವಿಜಯನಗರ, ಹೆಬ್ಬಾಳಿನ ಸುಬ್ರಹ್ಮಣ್ಯ ನಗರ ಹಾಗೂ ಲಕ್ಷ್ಮಿಕಾಂತನಗರದ ಪ್ರಮುಖ ಬೀದಿಗಳಲ್ಲಿ ಮತ್ತು ಉದ್ಯಾನವನಗಳಲ್ಲಿ ಪಾದಯಾತ್ರೆ ನಡೆಸಿ, ಮತ ನೀಡುವಂತೆ ಮನವಿ ಮಾಡಿದರು.

ಈ ವೇಳೆ ಮತದಾರರ ಸಮಸ್ಯೆ ಆಲಿಸಿ, ಗೆದ್ದು ಶಾಸಕರಾದರೆ ಸಮಸ್ಯೆಗಳನ್ನು ಪರಿಹರಿಸುವುದಾಗಿ ಭರವಸೆ ನೀಡಿದರು. ಮತಯಾಚನೆ ವೇಳೆ ಕೆಲಸ ಕೊಡಿಸುವಂತೆ ಮನವಿ ನೀಡಿ, ಭೇಟಿಯಾದ ನಿರುದ್ಯೋಗಿ ಯುವತಿಯರಿಗೆ ಚುನಾವಣೆ ಮುಗಿದ ಕೂಡಲೇ ಭೇಟಿ ಮಾಡಿ. ಖಂಡಿತವಾಗಿಯೂ ಕೆಲಸ ಕೊಡಿಸುವುದಾಗಿ ತಿಳಿಸಿದರು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಬದಲಾವಣೆ ಬಯಸಿರುವ ಮತದಾರರು, ನನ್ನನ್ನು ಗೆಲ್ಲಿಸುವ ಸಂಪೂರ್ಣ ವಿಶ್ವಾಸವಿದೆ. ಮತಯಾಚನೆಗೆ ಹೋದ ಕಡೆಯೆಲ್ಲಾ ಪೂರ್ಣಕುಂಭ ಸ್ವಾಗತ ನೀಡುವುದಲ್ಲದೆ ಗೆಲ್ಲುವಂತೆ ಹರಸುತ್ತಿದ್ದಾರೆ. ಮಹಿಳೆಯರ ಬೆಂಬಲ ಕಾಂಗ್ರೆಸ್ ಪರವಾಗಿದೆ ಎಂದರು.

ಮತದಾನ ಪೂರ್ಣಗೊಳ್ಳುವವರೆಗೂ ಕದಲಬೇಡಿ: ಪಾದಯಾತ್ರೆ ಬಳಿಕ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಮತದಾನದ ದಿನದಂದು ಆಯಾ ಬೂತ್ ಪದಾಧಿಕಾರಿಗಳು ಮತದಾನ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಮತಗಟ್ಟೆಯಿಂದ ಎಲ್ಲಿಯೂ ಹೋಗಬಾರದು. ಮತದಾನಕ್ಕೆ ಬರುವವರಿಗೆ ಸರಿಯಾದ ಮಾರ್ಗದರ್ಶನ ನೀಡುವುದರ ಜೊತೆಗೆ ಕಾಂಗ್ರೆಸ್ ಬೆಂಬಲಿಸುವಂತೆ ಮನವಿ ಮಾಡಬೇಕು ಎಂದು ತಿಳಿಸಿದರು.

ಹಾಗೆಯೇ ಮತದಾನ ಮಾಡುವಾಗ ಬಟನ್ ಒತ್ತಿದ ಬಳಿಕ ಯಾವ ಗುರುತಿಗೆ ಮತ ನೀಡಿದ್ದೀರಿ ಎಂಬುದನ್ನು ಖಚಿತಪಡಿಸುವ ಚೀಟಿ ಬರುವವರೆಗೂ ಗಮನಿಸಬೇಕು. ಬಟನ್ ಒತ್ತಿ ಶಬ್ದ ಬಂದ ಕೂಡಲೇ ಹೊರಬರಬಾರದು. ಮತದಾನ ಮಾಡಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂಬುದನ್ನು ಮತದಾರರಿಗೆ ತಿಳಿಹೇಳಬೇಕು ಎಂದರು. ವಾರ್ಡ್ ಅಧ್ಯಕ್ಷ ಜಗದೀಶ್, ಮುಖಂಡರಾದ ಪುಟ್ಟರಾಜು, ರಾಮಚಂದ್ರ, ತನುಜಾ ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಬೀದಿ ನಾಟಕದ ಮೂಲಕ ಮತಯಾಚನೆ...

ಹೆಬ್ಬಾಳಿನ ಲಕ್ಷ್ಮಿಕಾಂತನಗರ, ಸುಬ್ರಹ್ಮಣ್ಯ ನಗರ ಸೇರಿದಂತೆ ಕ್ಷೇತ್ರದ ಪ್ರಮುಖ ಬಡಾವಣೆಗಳಲ್ಲಿ ಬೀದಿ ನಾಟಕದ ಮೂಲಕ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡರಿಗೆ ಮತ ನೀಡಿ ಗೆಲ್ಲಿಸುವಂತೆ ಮನವರಿಕೆ ಮಾಡಿಕೊಡಲಾಯಿತು. ಕೆ.ಹರೀಶ್‌ಗೌಡ ಅಭಿಮಾನಿ ಬಳಗದ ಕಾರ್ಯಕರ್ತರು, ಬಿಜೆಪಿ ಸರ್ಕಾರದಿಂದ ಬಡವರ ಹಾಗೂ ಮಧ್ಯಮ ವರ್ಗದವರ ಜೀವನ ಕಷ್ಟವಾಗಿದೆ. ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ರಾಜ್ಯದ ಪ್ರಗತಿಗಾಗಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಬೇಕು ಎಂದು ಕೋರಿದರು.



ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್ ಗೌಡ ಅವರು ತಮ್ಮ ಬೆಂಬಲಿಗರೊಡಗೂಡಿ ಹಿನಕಲ್, ವಿಜಯನಗರ 3 ಮತ್ತು 4ನೇ ಹಂತ ಹಾಗೂ ದಟ್ಟಗಳ್ಳಿ ಪ್ರದೇಶದಲ್ಲಿ ಮನೆ ಮನೆಗೆ ಭೇಟಿ ನೀಡಿ, ಮತಯಾಚಿಸಿದರು.

ಮಧುಮೇಹ ಚಿಕಿತ್ಸಾ ಶಿಬಿರ



ಮೈಸೂರು, ಮೇ 7– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮೇ 8 ರಿಂದ 13 ರವರೆಗೆ ಮಧುಮೇಹ ತೊಂದರೆಗೆ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9886485005, ದೂ. 0821–2548231 ಸಂಪರ್ಕಿಸಬಹುದು.



ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸಂದೇಶ್ ಸ್ವಾಮಿ ಬೃಹತ್ ರ್‍ಯಾಲಿ ನಡೆಸುವ ಮೂಲಕ ಮತಯಾಚನೆ ಮಾಡಿದರು.



ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡರ ಪರವಾಗಿ ಕಾಂಗ್ರೆಸ್ ಯುವ ಮುಖಂಡ ಶ್ರೀಧರ್ ಮಾಯಪ್ಪ ಮತ ಯಾಚಿಸಿದರು. ಈ ಸಂದರ್ಭದಲ್ಲಿ ಮಹೇಶ್, ಪ್ರವೀಣ್ ಹಾಗೂ ಇತರರು ಉಪಸ್ಥಿತರಿದ್ದರು.

ಇಂದು ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟ

ಬೆಂಗಳೂರು: 2023ರ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಫಲಿತಾಂಶ ನಾಳೆ(ಮೇ 8)ರಂದು ಪ್ರಕಟವಾಗಲಿದೆ. ಕಳೆದ ಮಾ.31 ರಿಂದ ಏ.15ರವರೆಗೂ ಪರೀಕ್ಷೆ ನಡೆದಿತ್ತು. ಎಲ್ಲಾ ವಿಷಯಗಳ ಉತ್ತರಪತ್ರಿಕೆಗಳ ಮೌಲ್ಯಮಾಪನ ಮುಗಿದಿದ್ದು, ನಾಳೆ ಫಲಿತಾಂಶ ಪ್ರಕಟವಾಗಲಿದೆ. ನಾಳೆ ಬೆಳಗ್ಗೆ 10ಕ್ಕೆ ಗಂಟೆಗೆ ರಾಜ್ಯ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಫಲಿತಾಂಶ ಪ್ರಕಟಿಸಲಾಗುತ್ತದೆ. ಬಳಿಕ http://karresults.nic.inನಲ್ಲಿ ಫಲಿತಾಂಶ ವೀಕ್ಷಿಸಬಹುದು.

ಮಂಗಳವಾರದಂದು ಮೃಗಾಲಯ ವೀಕ್ಷಣೆಗೆ ಅವಕಾಶ

ಮೈಸೂರು, ಮೇ 7– ಶಾಲಾ ಕಾಲೇಜುಗಳಿಗೆ ಬೇಸಿಗೆ ರಜೆ ಇರುವ ಕಾರಣ ವಿದ್ಯಾರ್ಥಿಗಳು, ಪ್ರವಾಸಿಗರು, ಜನಸಾಮಾನ್ಯರು ಹಾಗೂ ಸ್ಥಳೀಯರು ಮೃಗಾಲಯವನ್ನು ವೀಕ್ಷಿಸಲು ಅನುವಾಗುವಂತೆ ಮೇ 9ರ ಮಂಗಳವಾರದಂದು ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿಕೆರೆ ಪ್ರಕೃತಿ ಉದ್ಯಾನವನವನ್ನು ಸಾರ್ವಜನಿಕ ವೀಕ್ಷಣೆಗೆ ತೆರೆಯಲಾಗುವುದು ಎಂದು ಚಾಮರಾಜೇಂದ್ರ ಮೃಗಾಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

150 ಸ್ಥಾನ ಗೆಲ್ಲಲು ಬಿಜೆಪಿಗೆ ಆಶೀರ್ವದಿಸಿ

ಗೋಣಿಕೊಪ್ಪ ಬಿಜೆಪಿ ಸಮಾವೇಶದಲ್ಲಿ ಅಸ್ಸಾಂ ಸಿಎಂ ಮನವಿ



ಅಸ್ಸಾಂ ರಾಜ್ಯದ ಮುಖ್ಯಮಂತ್ರಿ ಡಾ. ಹಿಮಂತ ಬಿಸ್ವಾ ಶರ್ಮ ಫೀ. ಮಾ. ಕೆ. ಎಂ. ಕಾರ್ಯಪ್ಪ, ಜನರಲ್ ತಿಮ್ಮಯ್ಯ ಪುತ್ಥಳಿಗೆ ಕಾರ್ಯಕರ್ತರೊಂದಿಗೆ ಪುಷ್ಪಾರ್ಚನೆ ಸಲ್ಲಿಸಿದ ಸಂದರ್ಭ.

ಗೋಣಿಕೊಪ್ಪ, ಮೇ 7– ಕೊಡಗು ಜಿಲ್ಲೆಯ ಇಬ್ಬರು ಬಿಜೆಪಿ ಅಭ್ಯರ್ಥಿಗಳಿಗೆ ಮತ ಹಾಕುವ ಮೂಲಕ ರಾಜ್ಯದಲ್ಲಿ 150 ಸ್ಥಾನ ಗೆಲ್ಲಲು ಆಶೀರ್ವದಿಸಿ ಎಂದು ಅಸ್ಸಾಂ ಮುಖ್ಯಮಂತ್ರಿ ಡಾ. ಹಿಮಂತ ಬಿಸ್ವಾ ಶರ್ಮ ಮನವಿ ಮಾಡಿಕೊಂಡರು.

ಶನಿವಾರ ಸರ್ಕಾರಿ ಮಾದರಿ ಕನ್ನಡ ಮಾಧ್ಯಮ ಶಾಲಾ ಮೈದಾನದಲ್ಲಿ ಬಿಜೆಪಿ ಪಕ್ಷದಿಂದ ಆಯೋಜಿಸಿದ್ದ ಸಾರ್ವಜನಿಕ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಪ್ರಧಾನಿ ನರೇಂದ್ರ ಮೋದಿ ಅವರ ಅಭಿವೃದ್ಧಿ ಕಾರ್ಯಗಳು, ರಾಜ್ಯದ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಸರ್ಕಾರದ ಯೋಜನೆಗಳು ಜನರಿಗೆ ತಲುಪಿದೆ. ಇದನ್ನು ಮನಗಂಡು ಮತ ಹಾಕುವ ಮೂಲಕ ಬಹುಮತದ ಸರ್ಕಾರ ಆಡಳಿತಕ್ಕೆ ಬರುವಂತಾಗಬೇಕು. ಬಿಜೆಪಿ ಪ್ರಣಾಳಿಕೆ ಕೂಡ ಅಭಿವೃದ್ಧಿ ಚಿಂತನೆಯಲ್ಲಿದೆ ಎಂದರು.

ರಾಜ್ಯದಲ್ಲಿ ಮುಸ್ಲಿಂರಿಗೆ ಮೀಸಲಾತಿ ಕಡಿತಗೊಳಿಸಿರುವುದನ್ನು ವಿರೋಧಿಸಿ, ನಮ್ಮ ಸರ್ಕಾರ ಬಂದರೆ ಮತ್ತೆ ಜಾರಿಗೆ ತರುತ್ತೇವೆ ಎಂದು ಕಾಂಗ್ರೆಸ್ ಘೋಷಿಸಿದೆ. ದೇಶದಲ್ಲಿ ಹಿಂದೂಗಳು, ಜೈನರು, ಬುದ್ಧರು, ಕ್ರಿಶ್ಚಿಯನ್ನರು ಕೂಡ ತೆರಿಗೆ ಪಾವತಿಸುತ್ತಾರೆ. ಆದರೆ, ಇವರಿಗೆ ಮಾತ್ರ ಮೀಸಲಾತಿ ನೀಡುವುದು ಎಷ್ಟು ಸರಿ. ಕಾಂಗ್ರೆಸ್ ಪಕ್ಷ ಮುಸ್ಲಿಂ ಪಕ್ಷವಾಗಿ ಮುನ್ನಡೆಯುತ್ತಿದೆ. ದೇಶದ್ರೋಹ ಕೃತ್ಯದಲ್ಲಿ ತೊಡಗಿರುವ ಪಿಎಫ್‌ಐ ಗೆ ಬೆಂಬಲವಾಗಿ ನಿಂತಿದೆ. ಕೊಡಗು ಜಿಲ್ಲೆ ಕೂಡ ಸ್ಲೀಪರ್ ಸೆಲ್ ಆಗಿ ಮಾರ್ಪಾಡು ಆಗುತ್ತಿರುವುದು ಭಯಾನಕ ವಿಚಾರ ಎಂದರು.

ಬಿಜೆಪಿ ಅಭ್ಯರ್ಥಿ ಕೆ. ಜಿ. ಬೋಪಯ್ಯ ಮಾತನಾಡಿ, ಅಭಿವೃದ್ಧಿ ಕಾರ್ಯಗಳನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸುತ್ತಿದ್ದೇವೆ. ಜಿಲ್ಲೆಯ ಬೆಳೆಗಾರರ ಜಮ್ಮ ಬಾಣೆ ಸಮಸ್ಯೆ, ಅತಿವೃಷ್ಟಿ, ರಸ್ತೆ ಅಭಿವೃದ್ಧಿ ಸೇರಿದಂತೆ ಸಾಕಷ್ಟು ಸಮಸ್ಯೆಗಳಿಗೆ ಬಿಜೆಪಿ ಸರ್ಕಾರ ಪರಿಹಾರ ಕಂಡುಕೊಂಡಿದೆ. ವನ್ಯಪ್ರಾಣಿಗಳಿಂದ ಆಗುವ ನಷ್ಟಕ್ಕೆ ನೀಡುವ ಪರಿಹಾರವನ್ನು ಹೆಚ್ಚಿಸಿದೆ. ವನ್ಯಪ್ರಾಣಿ ನಿಯಂತ್ರಣಕ್ಕೆ ಸರ್ಕಾರ ಯೋಜನೆ ರೂಪಿಸಿದೆ. ಆದ್ದರಿಂದ ಮತ್ತೆ ಬಿಜೆಪಿ ಸರ್ಕಾರ ಬಹುಮತದಿಂದ ಆಡಳಿತಕ್ಕೆ ಬರಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ಪುಷ್ಪಾರ್ಚನೆ: ಕಾವೇರಿ ಕಾಲೇಜು ಮೈದಾನದ ಹೆಲಿಪ್ಯಾಡ್‌ನಲ್ಲಿ ಬಂದಿಳಿದ ಡಾ. ಹಿಮಂತ ಬಿಸ್ವಾ ಶರ್ಮ ಅವರು ಆವರಣದಲ್ಲಿರುವ ಫೀ. ಮಾ. ಕೆ. ಎಂ. ಕಾರ್ಯಪ್ಪ, ಜನರಲ್ ತಿಮ್ಮಯ್ಯ ಪುತ್ತಳಿಗೆ ಪುಷ್ಪಾರ್ಚನೆ ಸಲ್ಲಿಸಿ, ವೇದಿಕೆಗೆ ಆಗಮಿಸಿ, ಭಾರತಾಂಭೆಗೆ ಪುಷ್ಪ ನಮನ ಸಲ್ಲಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಪಳೆಯಂಡ ರಾಬಿನ್ ದೇವಯ್ಯ, ವಿರಾಜಪೇಟೆ ಮಂಡಲ ಅಧ್ಯಕ್ಷ ನೆಲ್ಲೀರ ಚಲನ್‌ಕುಮಾರ್, ಚುನಾವಣಾ ಪ್ರಭಾರಿ ಪ್ರತಾಪ್ ಸಿಂಹ ನಾಯಕ್, ಪ್ರಮುಖರಾದ ರೀನಾ ಪ್ರಕಾಶ್, ನಾಪಂಡ ರವಿ ಕಾಳಪ್ಪ, ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ವಾಟೇರಿರ ಬೋಪಣ್ಣ, ಅಜ್ಜಿಕುಟ್ಟೀರ ಪ್ರವೀಣ್, ಕಾಂಗೀರ ಸತೀಶ್ ಇತರರಿದ್ದರು.

ಕೊಡವ ಭಾಷೆಯಲ್ಲಿ ಭಾಷಣ

ಕೊಡವ ಭಾಷೆಯಲ್ಲಿ ಮಾತು ಆರಂಭಿಸಿದ ಅಸ್ಸಾಂ ರಾಜ್ಯದ ಮುಖ್ಯಮಂತ್ರಿ ಡಾ. ಹಿಮಂತ ಬಿಸ್ವಾ ಶರ್ಮ ಎಲ್ಲರ ಗಮನ ಸೆಳೆದರು. ಕೊಡಗ್ ಮಾಜನಕ್ ನಾಡ ನಮಸ್ಕಾರ. ಕುಲದೇವಿ ಕಾವೇರಿ, ಇಗ್ಗುತ್ತಪ್ಪನ ಪ್ರಾರ್ಥನೆ ಮಾಡಿಯಂಡ್ ದಂಡ್ ಮಹಾನ್ ಸೇನಾಧಿಕಾರಿ ಯಳಾನ ಫೀ. ಮಾ. ಕಾರ್ಯಪ್ಪ ಜನರಲ್ ತಿಮ್ಮಯ್ಯ ಗೇನ ಮಾಡಿಯಂಡ್, ದಂಡ್ ತಕ್ಕ್ ಪರಿಯುವಿ. (ಮಾಜನರಿಗೆ ನನ್ನ ನಮಸ್ಕಾರಗಳು . ಕುಲದೇವಿ ಕಾವೇರಿ, ಇಗ್ಗುತ್ತಪ್ಪ ದೇವರನ್ನು ಪ್ರಾರ್ಥಿಸಿಕೊಂಡು, ಎರಡು ಮಹಾನ್ ಸೇನಾಧಿಕಾರಿಗಳಾದ ಫೀ. ಕೆ. ಎಂ. ಕಾರ್ಯಪ್ಪ ಜನರಲ್ ತಿಮ್ಮಯ್ಯ ಅವರನ್ನು ಸ್ಮರಿಸಿಕೊಂಡು ಮಾತು ಆರಂಭಿಸುತ್ತೇನೆ.) ಎಂದು ಸ್ಥಳೀಯರ ಮನ ಸೆಳೆದರು.

ಕಾಂಗ್ರೆಸ್‌ನಿಂದ ವಿರಾಜಪೇಟೆ ಬಿಜೆಪಿ ಅಭ್ಯರ್ಥಿ ತೇಜೋವಧೆ



ಮಡಿಕೇರಿ, ಮೇ 7– ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಕಾಂಗ್ರೆಸ್ ತೀರಾ ಕೀಳು ಮಟ್ಟದ ಪದ ಬಳಕೆ ಮಾಡುವ ಮೂಲಕ ವೈಯಕ್ತಿಕ ತೇಜೋವಧೆ ಮಾಡುತ್ತಿದೆ ಎಂದು ಜಿಲ್ಲಾ ಬಿಜೆಪಿ ಪ್ರಮುಖರು ಆರೋಪಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸಮಿತಿ ಸದಸ್ಯ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ಕಾಂಗ್ರೆಸಿಗರು ತಮ್ಮ ಅಭ್ಯರ್ಥಿ ಪೊನ್ನಣ್ಣ ಅವರ ಕುರಿತು ಬಿಜೆಪಿ ತೇಜೋವಧೆ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ಆದರೆ ಬಿಜೆಪಿ ತನ್ನ ಚುನಾವಣಾ ಪ್ರಚಾರದ ಸಂದರ್ಭ ಅಭ್ಯರ್ಥಿಯ ಹಿನ್ನೆಲೆಯನ್ನು ಮಾತ್ರವೇ ಮತದಾರರಿಗೆ ತಿಳಿಸಿದೆ ಪ್ರತಿಸ್ಪರ್ಧಿ ಅಭ್ಯರ್ಥಿಯ ಪೂರ್ವಪರವನ್ನು ಮತದಾರರಿಗೆ ತಿಳಿಸುವುದು ವೈಯಕ್ತಿಕ ತೇಜೋವಧೇ ಅಲ್ಲ, ರಾಜಕೀಯ ಕ್ಷೇತ್ರದಲ್ಲಿ ಇರುವವರು ಇದನ್ನು ಮೊದಲು ಅರಿತುಕೊಳ್ಳಬೇಕು ಎಂದು ಮನು ಮುತ್ತಪ್ಪ ಹೇಳಿದರು. ಬಿಜೆಪಿ ಅಭ್ಯರ್ಥಿ ಕೆ.ಜಿ. ಬೋಪಯ್ಯ ಅವರ ಕುರಿತು ತೀರಾ ಅವಹೇಳನಕಾರಿ ಮತ್ತು ಕೀಳು ಪದ ಬಳಕೆ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗುತ್ತಿದೆ. ಇದನ್ನು ತೀವ್ರವಾಗಿ ಖಂಡಿಸುವುದಾಗಿ ಮನು ಮುತ್ತಪ್ಪ ಹೇಳಿದರು.

ಪ್ರಣಾಳಿಕೆ 'ಎಡಿಟ್': ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಅಲ್ಪ ಸಂಖ್ಯಾತ ಸಮುದಾಯಕ್ಕೆ ಹೆಚ್ಚಿನ ಮಹತ್ವ ಮತ್ತು ಯೋಜನೆಗಳನ್ನು ನೀಡುವುದಾಗಿ ಘೋಷಿಸಿದೆ. ಈ ಪ್ರಣಾಳಿಕೆಯನ್ನು ಕಾಂಗ್ರೆಸ್‌ನವರಿಗೆ ಸಹಿಸಲು ಆಗುತ್ತಿಲ್ಲ. ಹೀಗಾಗಿ ಕಾಂಗ್ರೆಸ್ ಘೋಷಿಸಿದ ಪ್ರಣಾಳಿಕೆಯನ್ನು ಎಡಿಟ್ ಮಾಡಿ ಬಿಜೆಪಿ ನಾಯಕರ ಫೋಟೋಗಳನ್ನು ಅದಕ್ಕೆ ಅಳವಡಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಡಲಾಗಿದೆ. ಇದರ ಹಿಂದೆ ಕೆಲವು ಪರಿಸರವಾದಿಗಳ ಕುಮ್ಮಕ್ಕು ಇದ್ದು, ಈ ಕುರಿತು ವಿರಾಜ ಪೇಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗಿದೆ ಎಂದು ಮನು ಮುತ್ತಪ್ಪ ಮಾಹಿತಿ ನೀಡಿದರು.

ಜಾತಿ ಕಾರ್ಡ್ ನಡೆಯಲ್ಲ: ಕೊಡಗು ಜಿಲ್ಲೆಯಲ್ಲಿ ಕ್ಷೇತ್ರ ಪುನರ್ ವಿಂಗಡಣೆಯಾದ ಬಳಿಕ ಜಾತಿಯನ್ನು ಮುಂದಿಟ್ಟು ಅಭ್ಯರ್ಥಿಗಳ ಅಪಪ್ರಚಾರ ಮಾಡುತ್ತಿರುವುದು ಕಂಡು ಬರುತ್ತಿದೆ. ಆದರೆ ಗೌಡ ಸಮುದಾಯ ಹೆಚ್ಚಿರುವ ಮಡಿಕೇರಿ ಕ್ಷೇತ್ರದಲ್ಲಿ ಕೊಡವ ಅಭ್ಯರ್ಥಿಯನ್ನು, ಕೊಡವ ಸಮುದಾಯ ಅಧಿಕವಿರುವ ವಿರಾಜಪೇಟೆ ಕ್ಷೇತ್ರದಲ್ಲಿ ಗೌಡ ಸಮುದಾಯದ ಅಭ್ಯರ್ಥಿಯನ್ನು ಬಿಜೆಪಿ ಕಣಕ್ಕಿಳಿಸುವ ಮೂಲಕ ಜಾತ್ಯಾತೀತತೆ ಮೆರೆದಿದೆ. ಎರಡೂ ಕ್ಷೇತ್ರದ ಮತದಾರರು ಪ್ರಜ್ಞಾವಂತರಾಗಿದ್ದು, ಎಲ್ಲಾ ಚುನಾವಣೆಗಳಲ್ಲೂ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಸೂಕ್ತ ಉತ್ತರ ನೀಡಿದ್ದಾರೆ ಎಂದರು.

ಬಹುಮತದ ಗೆಲುವು: ಕೋವಿಡ್, ಲಾಕ್‌ಡೌನ್, ಪ್ರಾಕೃತಿಕ ವಿಕೋಪಗಳ ಸಂಕಷ್ಟಗಳ ನಡುವೆಯೂ ಬಿಜೆಪಿ ಸರಕಾರ ಕೊಡಗು ಜಿಲ್ಲೆಗೆ ಸಾವಿರಾರು ಕೋಟಿ ರೂ.ಗಳನ್ನು ಅನುದಾನವಾಗಿ ನೀಡಿ ಅಭಿವೃದ್ಧಿಗೆ ಒತ್ತು ನೀಡಿದೆ. ಈ ಬಾರಿಯ ಚುನಾವಣೆಯಲ್ಲೂ ಬಿಜೆಪಿ ಇಬ್ಬರು ಅಭ್ಯರ್ಥಿಗಳು ಕನಿಷ್ಠ 25ರಿಂದ 30 ಸಾವಿರ ಮತಗಳ ಅಂತರದಿಂದ ವಿಜಯ ಸಾಧಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಪ್ರಮುಖರಾದ ನೆಲ್ಲೀರ ಚಲನ್, ಮಾಜೀ ಜಿ.ಪಂ ಅಧ್ಯಕ್ಷೆ ಶರೀನ್ ಸುಬ್ಬಯ್ಯ, ಮಹೇಶ್ ಜೈನಿ, ಕಾಂಗೀರ ಸತೀಶ್ ಉಪಸ್ಥಿತರಿದ್ದರು.

ಬೆಂಗಳೂರಲ್ಲಿ ಕೊಡಗು ಜಿಲ್ಲೆಯ ಯುವಕ ಆತ್ಮಹತ್ಯೆ



ಮಡಿಕೇರಿ, ಮೇ 7– ಕೊಡಗು ಜಿಲ್ಲೆಯ ಯುವಕನೋರ್ವ ಬೆಂಗಳೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಘಟನೆ ವರದಿಯಾಗಿದೆ. ಸೋಮವಾರಪೇಟೆ ಕಿರಗಂದೂರುವಿನ ರುಕ್ಮಿಣಿ ಹಾಗೂ ಶಿವಪ್ಪ ದಂಪತಿ ಪುತ್ರ ಜಿತಿನ್(22) ಎಂಬಾತನೇ ಆತ್ಮಹತ್ಯೆ ಮಾಡಿಕೊಂಡ ಯುವಕ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಕಳೆದ ಒಂದು ವರ್ಷದಿಂದ ಬೆಂಗಳೂರಿನಲ್ಲಿ ಉದ್ಯೋಗ ಮಾಡಿಕೊಂಡಿದ್ದ ಜಿತೀನ್ ವಿಜಯನಗರದ ಬಾಡಿಗೆ ಮನೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾನೆ. ಘಟನೆ ಕುರಿತು ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಯಲ್ಲಿ ಆತ್ಮಹತ್ಯೆ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಮೇ 14, ಬಿ.ಜಿ. ಅನಂತಶಯನರ 'ಸೊಡರು' ಪುಸ್ತಕ ಬಿಡುಗಡೆ



ಮಡಿಕೇರಿ, ಮೇ 7– ಶಕ್ತಿ ಪತ್ರಿಕೆಯ ಸಲಹಾ ಸಂಪಾದಕ ಬಿ.ಜಿ.ಅನಂತಶಯನ ಅವರು ಬರೆದಿರುವ ಪತ್ರಿಕೋದ್ಯಮ ಅನುಭವ ಆಧಾರಿತ 'ಸೊಡರು' ಎಂಬ ಪುಸ್ತಕ ಮೇ 14ರಂದು ಮಡಿಕೇರಿಯಲ್ಲಿ ಬಿಡುಗಡೆಯಾಗಲಿದೆ.

ಪುಸ್ತಕದಲ್ಲಿ ವರದಿಗಾರಿಕೆ ಸಂದರ್ಭ ಉಂಟಾಗುವ ಎಡರು–ತೊಡರುಗಳು, ಇರಿಸು–ಮುರಿಸು, ಕಾನೂನು ಅಡೆತಡೆಗಳು, ಬೆದರಿಕೆ, ಸ್ವಯಂಕೃತ ಅಪರಾಧ ಇತ್ಯಾದಿ ವಿಚಾರಗಳನ್ನು ಅನುಭವದ ಸಹಿತ ನೀಡಲಾಗಿದೆ.

ಪುಸ್ತಕ ಬಿಡುಗಡೆ: ನಗರದ ಹೃದಯ ಭಾಗದಲ್ಲಿರುವ ಜಿ. ಚಿದ್ವಿಲಾಸ್ ಅವರ ರೆಡ್ ಬ್ರಿಕ್ಸ್ ಕಟ್ಟಡದ ಸಭಾಂಗಣದಲ್ಲಿ ಮೇ 14ರ ಸಂಜೆ 5.30 ಗಂಟೆಗೆ ಸೊಡರು ಪುಸ್ತಕ ಬಿಡುಗಡೆಯಾಗಲಿದೆ. ಸಭಾಂಗಣದಲ್ಲಿ ಪುಸ್ತಕ ಮಳಿಗೆಯನ್ನೂ ತೆರೆಯಲಾಗುತ್ತಿದ್ದು, ಭಾಗವಹಿಸುವ ಜಿಲ್ಲೆಯ ಸಾಹಿತಿಗಳು, ಬರಹಗಾರರು ಅವರು ಹೊರ ತಂದಿರುವ ಪುಸ್ತಕಗಳನ್ನು ಇಟ್ಟು ಮಾರಾಟ ಮಾಡಲು ಅವಕಾಶ ಒದಗಿಸಲಾಗಿದೆ.

ಮುಖ್ಯ ಅತಿಥಿಗಳು: ಸೊಡರು ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಮಾಜಿ ಕಾನೂನು ಸಚಿವ ಎಂ.ಸಿ. ನಾಣಯ್ಯ, 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಪತ್ರಿಕೆಗಳ ಪ್ರಧಾನ ಸಂಪಾದಕ ಕೆ.ಬಿ. ಗಣಪತಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ರಾಜ್ಯ ಪ್ರೆಸ್‌ಕ್ಲಬ್ ಹಾಗೂ ಮಾಧ್ಯಮ ಅಕಾಡೆಮಿ ಮಾಜಿ ಅಧ್ಯಕ್ಷ ಎಂ.ಎ. ಪೊನ್ನಪ್ಪ, ಗಡಿನಾಡು ಸಂಚಾರಿ ಪತ್ರಿಕೆಯ ಸಂಪಾದಕ ಟಿ.ಪಿ. ರಮೇಶ್, ಶಕ್ತಿ ಪತ್ರಿಕೆ ಪ್ರಧಾನ ಸಂಪಾದಕ ಜಿ.ರಾಜೇಂದ್ರ ಅವರು ಪಾಲ್ಗೊಳ್ಳಲಿದ್ದಾರೆ ಎಂದು ಬಿ.ಜಿ. ಅನಂತಶಯನ ಅವರು ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

ಬ್ರಹ್ಮಕುಮಾರಿ ವತಿಯಿಂದ ಚಿಣ್ಣರ ಬೇಸಿಗೆ ಸಂಭ್ರಮ ಸಂಪನ್ನ



ವಿರಾಜಪೇಟೆ, ಮೇ 7– ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಜ್ಞಾನಗಂಗಾ ಭವನ ವಿರಾಜಪೇಟೆ ಸೇವಾ ಕೇಂದ್ರದಲ್ಲಿ ಚಿಣ್ಣರ ಬೇಸಿಗೆ ಸಂಭ್ರಮ ಯಶಸ್ವಿಯಾಗಿ ಪೂರ್ಣಗೊಂಡಿದೆ.

ಕೇಂದ್ರದ ಮುಖ್ಯ ಸಂಚಾಲಕಿ ಬಿ.ಕೆ ಕೋಮಲ ಅವರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಈ ಚಿಣ್ಣರ ಬೇಸಿಗೆ ಸಂಭ್ರಮ ಕಾರ್ಯಕ್ರಮಕ್ಕೆ ಭಾರತ ರತ್ನ, ನಾಟ್ಯರತ್ನ, ನಾಟ್ಯ ಮಯೂರಿ ನೃತ್ಯ ಶಾಲೆಯ ಸಂಸ್ಥಾಪಕ ವಿದುಷಿ ಪ್ರೇಮಾಂಜಲಿ ಆಚಾರ್ಯ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಅನಿಲ ಸರಕಾರಿ ಹಿರಿಯ ಪ್ರೌಢಶಾಲೆ ದೇವರಪುರ, ಬಿಕೆ ಚಂದ್ರಿಕಾ ಅಕ್ಕನವರು ಗೋಣಿಕೊಪ್ಪಲು, ಲಲಿತಾ ಮಣಿ ಅಕ್ಕನವರು (ಬ್ರಹ್ಮಕುಮಾರಿ ಕುಶಾಲನಗರ ಸೇವಾ ಕೇಂದ್ರ) ಉಪಸ್ಥಿತರಿದ್ದರು.

ಪರಮಾತ್ಮನ ಬಗ್ಗೆ ಅಧ್ಯಯನ ಮಾಡಿ ಜ್ಞಾನ ಪಡೆದು ಮತ್ತು ಧ್ಯಾನ ಮಾಡುವುದರಿಂದಲೇ ನಮ್ಮಲ್ಲಿ ಶಿಸ್ತು, ಶಾಂತಿ, ಪ್ರೀತಿ, ದಯೆ, ಸತ್ಯತೆ ಇತ್ಯಾದಿ ಮೌಲ್ಯಗಳು ಬರಲು ಸಾಧ್ಯವೆಂದು ಮಕ್ಕಳಿಗೆ ಮೌಲ್ಯಗಳ ಮಹತ್ವವನ್ನು ಕೋಮಲರವರು ತಿಳಿಸಿಕೊಟ್ಟರು.

ಪರೀಕ್ಷೆಯ ಭಯ ನಿವಾರಣೆ ಮತ್ತು ಏಕಾಗ್ರತೆಯ ಬಗ್ಗೆ ಶಿಕ್ಷಕಿ ಅನಿಲ ನಡೆಸಿಕೊಟ್ಟರು. ಮಕ್ಕಳಿಗೆ ಸರಳವಾದ ಕರಕುಶಲದ (ಕ್ರಾಫ್ಟ್) ಬಗ್ಗೆ ಪ್ರಥಮ ಫೌಂಡೇಶನ್ ಮೈಸೂರು ಶಾಖೆಯವರಾದ ಜನಿತಾ ಅರಿವು ಮಾಡಿಸಿದರು. ಬ್ರಹ್ಮಕುಮಾರಿಯರಾದ ಬಿಕೆ ಮಹಾಲಕ್ಷ್ಮಿ, ವೈಷ್ಣವಿ, ಶಿವಾನಿ, ಹಾಡು ನೃತ್ಯ, ಆಟೋಟಗಳ ಚಟುವಟಿಕೆಯನ್ನು ಮಕ್ಕಳಿಗೆ ಹೇಳಿಕೊಟ್ಟರು. ಸುಮಾರು 50ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಮೂರು ದಿನಗಳ ಕಾಲ ನಡೆದ ಈ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪಾನೀಯಗಳು, ಸ್ನ್ಯಾಕ್ಸ್ ಹಾಗೂ ಮಧ್ಯಾಹ್ನದ ಭೋಜನವನ್ನು ಸೇವಾ ಕೇಂದ್ರದಿಂದಲೇ ಮಾಡಿಸಲಾಯಿತು.

ಮೇ 10, ಮತದಾನ: ವೇತನ ಸಹಿತ ರಜೆ



ಚಾಮರಾಜನಗರ, ಮೇ 7– ವಿಧಾನಸಭಾ ಚುನಾವಣೆಗೆ ಮೇ 10ರಂದು ಮತದಾನ ನಡೆಯಲಿದ್ದು, ಮತ ಚಲಾಯಿಸಲು ಅನುಕೂಲವಾಗುವಂತೆ ಅಂದು ರಜೆ ಘೋಷಿಸಲಾಗಿದೆ.

ಆಯಾ ಮತ ಕ್ಷೇತ್ರಗಳ ಎಲ್ಲಾ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಕಚೇರಿಗಳು, ಶಾಲಾ ಕಾಲೇಜು, ವಿವಿಧ ಸಂಘ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು (ಅನುದಾನ ಶಿಕ್ಷಣ ಸಂಸ್ಥೆಗಳು ಒಳಗೊಂಡಂತೆ), ಎಲ್ಲಾ ಸ್ಥಳೀಯ ಸಂಸ್ಥೆಗಳು, ರಾಷ್ಟ್ರೀಕೃತ ಬ್ಯಾಂಕುಗಳು, ಇತರೆ ಬ್ಯಾಂಕುಗಳು ಮುಂತಾದ ಕಚೇರಿಗಳು, ವ್ಯವಹಾರಿಕ ಸಂಸ್ಥೆಗಳು, ಔದ್ಯಮಿಕ ಸಂಸ್ಥೆಗಳು, ಇನ್ನಿತರ ಸಾರ್ವಜನಿಕ ಸಂಸ್ಥೆಗಳಲ್ಲಿ ಖಾಯಂ ಹಾಗೂ ದಿನಗೂಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರಾಗಿರುವ ನೌಕರರಿಗೆ ಮತದಾನ ಮಾಡಲು ಅನುಕೂಲವಾಗುವಂತೆ ವೇತನ ಸಹಿತ ರಜೆ ಮಂಜೂರು ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ತಿಳಿಸಿದ್ದಾರೆ.

ಚಾ.ನಗರ ಅಭಿವೃದ್ಧಿಯತ್ತ ನನ್ನ ಚಿತ್ತ; ಸೋಮಣ್ಣ



ಚಾಮರಾಜನಗರ, ಮೇ 7– ಚಾಮರಾಜನಗರ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವುದೇ ನನ್ನ ಉದ್ದೇಶವಾಗಿದೆ. ಕ್ಷೇತ್ರ ಅಭಿವೃದ್ಧಿ ಪಡಿಸಲು ನನ್ನದೇ ಆದ ರೀತಿಯಲ್ಲಿ ಯೋಜನೆ ರೂಪಿಸಿಕೊಂಡಿದ್ದೇನೆ ಎಂದು ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ತಿಳಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ಚಿತ್ತ ಚಾಮರಾಜನಗರ ಅಭಿವೃದ್ಧಿಯತ್ತ ಇದೆ. ಹೀಗಾಗಿ, ಕ್ಷೇತ್ರದ ಮತದಾರರು ನನಗೆ ಒಂದು ಅವಕಾಶ ನೀಡಬೇಕು ಎಂದು ಮನವಿ ಮಾಡಿದರು. ನನ್ನ ಮಗನನ್ನು ಶಾಸಕನಾಗಿಸಲು ನಾನು ಇಲ್ಲಿಗೆ ಬಂದಿಲ್ಲ. ಮಕ್ಕಳನ್ನು ರಾಜಕೀಯಕ್ಕೆ ತರಲ್ಲ. ಚಾಮರಾಜನಗರದಲ್ಲಿ ಮನೆ ಮಾಡಿದ್ದೇನೆ. 24x7 ಕೆಲಸ ಮಾಡುತ್ತೇನೆ. ನನ್ನ ಚಿತ್ತ ಚಾಮರಾಜನಗರವನ್ನು ಮತ್ತೊಂದು ಗೋವಿಂದರಾಜ ನಗರವನ್ನಾಗಿ ಮಾಡುವುದಾಗಿದೆ ಎಂದ ಅವರು, ಈಗಾಗಲೇ ನನ್ನ ಮತ ಚಾಮರಾಜನಗರ ಕ್ಷೇತ್ರದಲ್ಲಿದೆ. ನನ್ನ ಪತ್ನಿಯು ಸಹ ಈ ಕ್ಷೇತ್ರದ ಮತದಾರರಾಗಿದ್ದಾರೆ ಎಂದರು.

> ನಾನು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎಂದು ಎಲ್ಲಿಯೂ ಹೇಳಿಲ್ಲ. ಕೇಂದ್ರದ ವರಿಷ್ಠರ ಸೂಚನೆಯಂತೆ ಬೊಮ್ಮಾಯಿ ನೇತೃತ್ವದಲ್ಲಿ ಚುನಾವಣೆ ನಡೆಯುತ್ತಿದೆ.
> –ವಿ. ಸೋಮಣ್ಣ, ಬಿಜೆಪಿ ಅಭ್ಯರ್ಥಿ.

ನನ್ನ ಕೊನೆಯ ಚುನಾವಣಾ ಭಾಷಣ: ಇದು ನನ್ನ ರಾಜಕೀಯ ಜೀವನದ ಕೊನೆಯ ಚುನಾವಣಾ ಭಾಷಣವಾಗಿದೆ. ಸೋಮಣ್ಣ ಅವರ ಪರವಾಗಿ ಮತಯಾಚಿಸುತ್ತಿದ್ದೇನೆ. ಸೋಮಣ್ಣ ಅವರನ್ನು ಅಧಿಕ ಮತಗಳಿಂದ ಗೆಲ್ಲಿಸಿ ಎಂದು ಸಂಸದ ವಿ. ಶ್ರೀನಿವಾಸಪ್ರಸಾದ್ ಮನವಿ ಮಾಡಿದರು.

ಜಿಲ್ಲೆ ಹಾಗೂ ಕ್ಷೇತ್ರದಲ್ಲಿ ಬಿಜೆಪಿಗೆ ಉತ್ತಮ ವಾತಾವರಣವಿದೆ. ಪಕ್ಷದ ಮುಖಂಡರು, ಕಾರ್ಯಕರ್ತರು ಒಟ್ಟಾಗಿ ಸೋಮಣ್ಣ ಗೆಲುವಿಗೆ ಶ್ರಮ ವಹಿಸುತ್ತಿದ್ದಾರೆ. ಸೋಮಣ್ಣ ಅವರನ್ನು ಅತ್ಯಧಿಕ ಮತಗಳಿಂದ ಮತದಾರರು ಗೆಲ್ಲಿಸಿಕೊಡಬೇಕು ಎಂದು ಮನವಿ ಮಾಡಿದರು.

ರಾಹುಲ್ ಗಾಂಧಿ ಸೇರಿದಂತೆ ಅನೇಕ ಮುಖಂಡರು ಬಿಜೆಪಿಯ ಭ್ರಷ್ಟಾಚಾರ ಬಗ್ಗೆ ಮಾತನಾಡುತ್ತಿದ್ದಾರೆ. 10 ವರ್ಷಗಳ ಕಾಲ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವನ್ನು ದೇಶದ ಮತದಾರರು 9 ವರ್ಷಗಳ ಹಿಂದೆ ಏಕೆ ಕಿತ್ತೊಗೆದರು ಎಂಬುದರ ಅರಿವು ಇದ್ದರೆ, ಅವರು ಈಗ ಇಂಥ ಆರೋಪ ಮಾಡುತ್ತಿರಲಿಲ್ಲ. ಪ್ರಧಾನಿ ಮನಮೋಹನ್‌ಸಿಂಗ್ ಆಡಳಿತದಲ್ಲಿ ನಡೆದ ಭ್ರಷ್ಟಾಚಾರ ವಿಶ್ವ ಮಟ್ಟದಲ್ಲಿ ಚರ್ಚೆಯಾಗಿತ್ತು ಎಂದರು.

ಸಿದ್ದರಾಮಯ್ಯ ನಾನೇ ಮುಖ್ಯಮಂತ್ರಿಯಾಗುತ್ತೇನೆ ಎಂದು ಹೇಳುತ್ತಿದ್ದಾರೆ. ಅವರು ಮೊದಲು ವರುಣದಲ್ಲಿ ಗೆಲುವು ಸಾಧಿಸಲಿ. ಆಮೇಲೆ ಮುಖ್ಯಮಂತ್ರಿ ಆಗುವ ಮಾತು ಎಂದು ಟೀಕಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾರಾಯಣಪ್ರಸಾದ್ ಹಾಜರಿದ್ದರು.

ಜೆಡಿಎಸ್‌ನದ್ದು, ಪಂಚರತ್ನ ಅಲ್ಲ, ಅಷ್ಟರತ್ನ

ಚಾಮರಾಜನಗರ, ಮೇ 7– ಜೆಡಿಎಸ್‌ನದ್ದು ಪಂಚರತ್ನವಲ್ಲ, ಅಲ್ಲಿ ಅಷ್ಟರತ್ನಗಳಿವೆ ಎಂದು ಸಂಸದ ವಿ. ಶ್ರೀನಿವಾಸಪ್ರಸಾದ್ ವ್ಯಂಗ್ಯವಾಡಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಜೆಡಿಎಸ್‌ನಲ್ಲಿ ದೇವೇಗೌಡರು ಒಂದು ರತ್ನ, ಕುಮಾರಸ್ವಾಮಿ ಎರಡನೇ ರತ್ನ, ಉಳಿದಂತೆ ರೇವಣ್ಣ, ಭವಾನಿ ರೇವಣ್ಣ, ಅನಿತಾ ಕುಮಾರಸ್ವಾಮಿ, ನಿಖಿಲ್, ಪ್ರಜ್ವಲ್, ಸೂರಜ್ ಸೇರಿ ಒಟ್ಟು 8 ರತ್ನಗಳಿವೆ. ಇವರೊಂದಿಗೆ ಪಕ್ಷ ಅಧ್ಯಕ್ಷ ಇಬ್ರಾಹಿಂ ಮತ್ತೊಂದು ರತ್ನವಾಗಿ ಸೇರಿ ಜೆಡಿಎಸ್‌ನಲ್ಲಿ ನವರತ್ನಗಳಿವೆ ಎಂದು ಟೀಕಿಸಿದರು.

ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮಣ್ಣ ಅವರು ಭಯ ಹುಟ್ಟಿಸಿದ್ದಾರೆ. ಹೀಗಾಗಿ ಸಿದ್ದರಾಮಯ್ಯ ಸಿನಿಮಾ ನಟರನ್ನು ಕರೆದುಕೊಂಡು ಬಂದು ಪ್ರಚಾರ ಮಾಡುತ್ತಿದ್ದಾರೆ. ಚುನಾವಣೆಯಲ್ಲಿ ಇನ್ನೂ ಗೆದ್ದೇ ಇಲ್ಲ ಆಗಲೇ ನಾನೇ ಸಿಎಂ ಎಂದು ಬೊಬ್ಬೆಹೊಡೆಯುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಮತದಾರರ ಮನೆ ಬಾಗಿಲಿಗೆ ಕಾಂಗ್ರೆಸ್ ಅಭ್ಯರ್ಥಿ



ಚಾಮರಾಜನಗರ, ಮೇ 7– ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹಾಗೂ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ರಾಮಸಮುದ್ರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಂತರ ರಾಮಸಮುದ್ರ, ನಗರದ ಉಪ್ಪಾರ ಬಡಾವಣೆ, ನಾಯಕರ ಬಡಾವಣೆ, ರೈಲ್ವೆ ಬಡಾವಣೆಯ ವಿವಿಧ ವಾರ್ಡ್‌ಗಳಲ್ಲಿ ಕಾರ್ಯಕರ್ತರು ಹಾಗೂ ಮುಖಂಡರ ಜೊತೆಗೆ ಮನೆ ಮನೆಗೆ ತೆರಳಿ ಬಿರುಸಿನ ಮತಯಾಚಿಸಿದರು.

ವಾರ್ಡ್‌ಗಳಿಗೆ ಮತಯಾಚಿಸಲು ಬಂದ ಶಾಸಕರಿಗೆ ಹೋದಲೆಲ್ಲಾ ಹೂವಿನ ಹಾರ ಹಾಕಿ ಮತದಾರರು ಸ್ವಾಗತಿಸುತ್ತಿದ್ದು ಕಂಡುಬರುತ್ತಿತ್ತು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಸಿಪುಟ್ಟರಂಗಶೆಟ್ಟಿ ಅವರು, ತಾವು 15 ವರ್ಷಗಳ ಕಾಲ ಶಾಸಕರಾಗಿದ್ದ ಅವಧಿಯಲ್ಲಿ ಯಾವುದೇ ಭೇದ–ಭಾವವಿಲ್ಲದೆ, ಸಮಾನತೆಯಿಂದ ಪಟ್ಟಣದ ಎಲ್ಲಾ ವಾರ್ಡ್‌ಗಳಲ್ಲೂ ಅಭಿವೃದ್ಧಿ ಕೆಲಸ ಮಾಡಿದ್ದು, ಜನರ ವಿಶ್ವಾಸ ಗಳಿಸಲು ಸಾಧ್ಯವಾಗಿದೆ. ಹೋದ ಕಡೆಯಲ್ಲೆಲ್ಲ ಜನರು ತಮಗೆ ಉತ್ತಮ ಸ್ಪಂದನೆ ನೀಡುತ್ತಿದ್ದಾರೆ ಎಂದರು.

ನಗರಸಭಾ ಸದಸ್ಯರಾದ ರಾಜಪ್ಪ, ಆರ್.ಪಿ. ನಂಜುಂಡಸ್ವಾಮಿ, ಚಿನ್ನಮ್ಮ, ಶಾಂತಮ್ಮ, ಮುಖಂಡರಾದ ಮಾಜಿ ನಗರಸಭಾ ಸದಸ್ಯ ನಾಗರಾಜು, ಅರಕಲವಾಡಿ ಸೋಮನಾಯಕ್, ಮಹೇಶ್ ಕುದರ್, ಗೋವಿಂದೇಗೌಡ, ರಂಗಸ್ವಾಮಿ ನಾಯಕ್, ರಾಮು, ಶ್ರೀಕಂಠ, ನಾಗು, ರಾಮಸಮುದ್ರ ಶಿವಮೂರ್ತಿ ಬಾಬು, ನಗರದ ಉಪ್ಪಾರ ಬಡಾವಣೆಯ ಮುಖಂಡರು ಯಜಮಾನರು, ಪಕ್ಷದ ಕಾರ್ಯಕರ್ತರು ಮುಖಂಡರು ಹಾಗೂ ಅಭಿಮಾನಿಗಳು, ಉಪಸ್ಥಿತರಿದ್ದರು.



ಯಳಂದೂರು ತಾಲೂಕಿನ ಗುಂಬಳ್ಳಿ ಗ್ರಾಮದಲ್ಲಿ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಜೆಡಿಎಸ್ ಅಭ್ಯರ್ಥಿ ಬಿ.ಪುಟ್ಟಸ್ವಾಮಿರವರ ಪರವಾಗಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರ ಪುತ್ರ ಯುವ ಮುಖಂಡ ಭರತ್‌ಗೌಡ ಮತಯಾಚನೆ ಮಾಡಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಡಿ.ಸಿ.ಬಾಬು, ಎಪಿಎಂಸಿ ಮಾಜಿ ಅಧ್ಯಕ್ಷ ರವೀಂದ್ರ, ಚಿಕ್ಕ ಮರೀಗೌಡ, ಜಗದೀಶ್, ಗ್ರಾಪಂ ಸದಸ್ಯ ರಾಜೇಂದ್ರ, ಶ್ರೀನಿವಾಸ, ಪ್ರಕಾಶ್, ಸುರೇಶ್, ಗ್ರಾಮದ ಮುಖಂಡರು, ಜೆಡಿಎಸ್ ಕಾರ್ಯಕರ್ತರು ಭಾಗವಹಿಸಿದ್ದರು.

ಮೇ 10, ಸಂತೆ ಜಾತ್ರೆ ನಿಷೇಧ

ಚಾಮರಾಜನಗರ, ಮೇ 7– ವಿಧಾನಸಭಾ ಸಾರ್ವತ್ರಿಕ ಚುನಾವಣೆ ಮತದಾನವು ಮೇ 10 ರಂದು ನಡೆಯಲಿರುವ ಹಿನ್ನೆಲೆಯಲ್ಲಿ ಮತದಾನದ ಕೇಂದ್ರಗಳಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಹಾಗೂ ಮತದಾರರು ಮತ ಹಾಕಲು ಅನುಕೂಲ ಕಲ್ಪಿಸುವ ಹಿತದೃಷ್ಟಿಯಿಂದ ಮೇ 10 ರಂದು ಬೆಳಗ್ಗೆ 5 ರಿಂದ ಸಂಜೆ 6 ಗಂಟೆಯವರೆಗೆ ಜಿಲ್ಲಾ ವ್ಯಾಪ್ತಿಯೊಳಗೆ ಬರುವ ಎಲ್ಲಾ ಪ್ರದೇಶಗಳಲ್ಲಿ ಸಂತೆ ಮತ್ತು ಎಲ್ಲಾ ತರಹದ ಜಾತ್ರೆಗಳನ್ನು ನಿಷೇಧಿಸಿ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಆದೇಶ ಹೊರಡಿಸಿದ್ದಾರೆ.

ಇಂದು ಗುಂಡ್ಲುಪೇಟೆಗೆ ಸಿದ್ದರಾಮಯ್ಯ



ಗುಂಡ್ಲುಪೇಟೆ, ಮೇ 7– ಮಾಜಿ ಸಿಎಂ. ಸಿದ್ದರಾಮಯ್ಯ ಸೋಮವಾರ (ಮೇ 8) ಬೆಳಗ್ಗೆ 9 ಗಂಟೆಗೆ ಗುಂಡ್ಲುಪೇಟೆಗೆ ಆಗಮಿಸಲಿದ್ದು, ಪಟ್ಟಣದ ಹಳೇ ಬಸ್ ನಿಲ್ದಾಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹೆಚ್.ಎಂ.ಗಣೇಶ್‌ಪ್ರಸಾದ್ ಪರವಾಗಿ ಮತಯಾಚನೆ ಮಾಡಲಿದ್ದಾರೆ.

ಪಟ್ಟಣಕ್ಕೆ ಬೆಳಗ್ಗೆ 9ಕ್ಕೆ ಆಗಮಿಸುವ ಸಿದ್ದರಾಮಯ್ಯ, ಹಳೇ ಬಸ್ ನಿಲ್ದಾಣದಲ್ಲಿ ನಡೆಯುವ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಸಭೆಯಲ್ಲಿ ಮಾಜಿ ಸಚಿವೆ ಡಾ.ಗೀತಾ ಮಹದೇವಪ್ರಸಾದ್ ಮತ್ತು ಹಲವು ಮುಖಂಡರು ಭಾಗಿಯಾಗಲಿದ್ದು, ಪಕ್ಷದ ಕಾರ್ಯಕರ್ತರು ಮತ್ತು ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಗಣೇಶ್‌ಪ್ರಸಾದ್ ಮನವಿ ಮಾಡಿದ್ದಾರೆ.

ಚಾ.ನಗರ ಜಿಲ್ಲೆಯಲ್ಲಿ ಮತದಾನಕ್ಕೆ ಸಿದ್ಧತೆ

ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ 982 ಮತಗಟ್ಟೆಗಳ ಸ್ಥಾಪನೆ

ಜಿಲ್ಲೆಯಲ್ಲಿ 861489 ಮತದಾರರು



ಚಾಮರಾಜನಗರ, ಮೇ 7– ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ ಮೇ 10ರಂದು ನಡೆಯಲಿರುವ ಮತದಾನಕ್ಕೆ ಜಿಲ್ಲೆಯಲ್ಲಿ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಪತ್ರಿಕಾಗೋಷ್ಠಿಯಲ್ಲಿ ಸಿದ್ಧತೆಗಳ ಕುರಿತು ವಿವರಿಸಿದ ಜಿಲ್ಲಾಧಿಕಾರಿಯವರು ಜಿಲ್ಲೆಯಲ್ಲಿ ನಾಲ್ಕು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 982 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಹನೂರು ವಿಧಾನಸಭಾ ಕ್ಷೇತ್ರದಲ್ಲಿ 253, ಕೊಳ್ಳೇಗಾಲದಲ್ಲಿ 241, ಚಾಮರಾಜನಗರದಲ್ಲಿ 239 ಹಾಗೂ ಗುಂಡ್ಲುಪೇಟೆಯಲ್ಲಿ 249 ಮತಗಟ್ಟೆಗಳು ಇವೆ. ಒಟ್ಟಾರೆ ಮತಗಟ್ಟೆಗಳ ಪೈಕಿ 138 ಮತಗಟ್ಟೆಗಳು ನಗರ ಪ್ರದೇಶದಲ್ಲಿ ಹಾಗೂ 844 ಮತಗಟ್ಟೆಗಳು ಗ್ರಾಮೀಣ ಪ್ರದೇಶದಲ್ಲಿವೆ ಎಂದರು.

ಮಹಿಳಾ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿರುವ ಮತಗಟ್ಟೆಗಳನ್ನು ಪಿಂಕ್ ಪೋಲಿಂಗ್ ಸ್ಟೇಷನ್ ಎಂದು ಗುರುತಿಸಲಾಗಿದ್ದು, ಜಿಲ್ಲೆಯಲ್ಲಿ ಒಟ್ಟಾರೆ 12 ಪಿಂಕ್ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಈ ಮತಗಟ್ಟೆಗಳಿಗೆ ಮಹಿಳಾ ಮತಗಟ್ಟೆ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದರು.

ಸಾಂಪ್ರದಾಯಿಕ (ಎಥ್ನಿಕ್) ಮತಗಟ್ಟೆಯನ್ನು ನಗರದ ಪಿಡಬ್ಲ್ಯೂಡಿ ಕಾಲೋನಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತೆರೆಯಲಾಗಿದೆ. ಹನೂರು ವಿಧಾನಸಭಾ ಕ್ಷೇತ್ರದ ಕುರಟ್ಟಿ ಹೊಸೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಮುಳ್ಳೂರಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಅಗರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಕೊತ್ತಲವಾಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಕೊಡಸೋಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾದರಿ ಮತಗಟ್ಟೆಗಳನ್ನು ತೆರೆಯಲಾಗಿದೆ ಎಂದರು.

ಜಿಲ್ಲೆಯಲ್ಲಿ ಒಟ್ಟು 426547 ಪುರುಷರು, 434873 ಮಹಿಳೆಯರು, 69 ಇತರರು ಸೇರಿದಂತೆ ಒಟ್ಟು 861489 ಮತದಾರರಿದ್ದಾರೆ. ಹನೂರು ವಿಧಾನಸಭಾ ಕ್ಷೇತ್ರದಲ್ಲಿ 111960 ಪುರುಷರು, 109581 ಮಹಿಳೆಯರು, 16 ಇತರರು ಸೇರಿದಂತೆ ಒಟ್ಟು 221557 ಮತದಾರರಿದ್ದಾರೆ. ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ 106979 ಪುರುಷರು, 109604 ಮಹಿಳೆಯರು, 19 ಇತರರು ಸೇರಿದಂತೆ ಒಟ್ಟು 216602 ಮತದಾರರಿದ್ದಾರೆ. ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ 102588 ಪುರುಷರು, 106891 ಮಹಿಳೆಯರು, 15 ಇತರರು ಸೇರಿದಂತೆ ಒಟ್ಟು 209494 ಮತದಾರರಿದ್ದಾರೆ. ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 105020 ಪುರುಷರು, 108797 ಮಹಿಳೆಯರು, 19 ಇತರರು ಸೇರಿದಂತೆ ಒಟ್ಟು 213836 ಮತದಾರರಿದ್ದಾರೆ ಎಂದರು.

ಚುನಾವಣೆಯಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಲಾಗುತ್ತಿದ್ದು 982 ಮತಗಟ್ಟೆಗಳಿಗೆ 1483 ಬ್ಯಾಲೆಟ್ ಯೂನಿಟ್ (ಬಿಯು), 1177 ಕಂಟ್ರೋಲ್ ಯೂನಿಟ್ (ಸಿಯು), 1274 ವಿವಿ ಪ್ಯಾಟ್ ಹಂಚಿಕೆ ಮಾಡಲಾಗಿದೆ ಒಟ್ಟು 982 ಮತಗಟ್ಟೆಗಳಿಗೆ 1190 ಪಿ.ಆರ್.ಒ, 1189 ಎ.ಪಿ.ಆರ್.ಒ, 2384 ಪಿ.ಒ ಸೇರಿದಂತೆ ಒಟ್ಟು 4763 ಅಧಿಕಾರಿ ಸಿಬ್ಬಂದಿ ನಿಯೋಜಿಸಲಾಗಿದೆ 65 ಮೈಕ್ರೋ ಅಬ್ಸರ್‌ವರ್‌ಗಳನ್ನು ನೇಮಕ ಮಾಡಲಾಗಿದೆ. ಒಟ್ಟು 613 ಮತಗಟ್ಟೆಗಳಲ್ಲಿ ವೆಬ್ ಕಾಸ್ಟಿಂಗ್ ಮಾಡಲಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ವಿವರಿಸಿದರು.

ಹನೂರು ವಿಧಾನಸಭಾ ಕ್ಷೇತ್ರದ ಹನೂರು ಪಟ್ಟಣದ ಕ್ರಿಸ್ತರಾಜ ಶಿಕ್ಷಣ ಸಂಸ್ಥೆಯಲ್ಲಿ, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಕೊಳ್ಳೇಗಾಲ ಪಟ್ಟಣದ ಶ್ರೀ ಮಹದೇಶ್ವರ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಚಾಮರಾಜನಗರ ಪಟ್ಟಣದ ಕರಿನಂಜನಪುರ ರಸ್ತೆಯಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನದ ಹತ್ತಿರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಗುಂಡ್ಲುಪೇಟೆ ಪಟ್ಟಣದ ಸೆಂಟ್ ಜಾನ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಸ್ಟರಿಂಗ್ ಮತ್ತು ಡಿಮಸ್ಟರಿಂಗ್ ನಡೆಯಲಿದೆ. ನಾಲ್ಕು ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯವು ಚಾಮರಾಜನಗರದ ಬೇಡರಪುರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮೇ 13ರಂದು ನಡೆಯಲಿದೆ.

ಮೈಸೂರು ಮಿತ್ರ

ಸೋಮವಾರ ೮ ಮೇ ೨೦೨೩

ಸಿದ್ದರಾಮಯ್ಯ ಸರ್ವ ಜನರ ಪರ, ಬಿಜೆಪಿ ಉದ್ಯಮಿಗಳ ಪರ

ವರುಣ ಕ್ಷೇತ್ರ ವ್ಯಾಪ್ತಿಯಲ್ಲಿ ಡಾ. ಯತೀಂದ್ರ ಬಿರುಸಿನ ಮತ ಪ್ರಚಾರ



ಮೈಸೂರು, ಮೇ 7(ಎಂಟಿವೈ)– ಬಿಜೆಪಿ ಸರ್ಕಾರ ಬಡವರ ಹಿತಕಾಯುವುದಕ್ಕಿಂತ ತಮ್ಮ ಪರ ಇರುವ ಉದ್ಯಮಿಗಳ ಹಿತ ಕಾಯಲು ಮುಂದಾಗಿ, ಜನರ ತೆರಿಗೆ ಹಣವನ್ನು ಬಳಸಿಕೊಳ್ಳುತ್ತಿದೆ. ದುಂದು ವೆಚ್ಚಕ್ಕಾಗಿ ಸಿಲಿಂಡರ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಯನ್ನು ಗಗನಕ್ಕೇರಿಸಿದೆ ಎಂದು ಬಿಜೆಪಿ ವಿರುದ್ಧ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ವರುಣ ಕ್ಷೇತ್ರದ ಕೀಳನಪುರ, ಮೇಗಳಾ ಪುರ, ಮಾಧವಗೆರೆ, ಉತ್ತನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ, ಸಿದ್ದರಾಮಯ್ಯ ಪರ ಬಿರುಸಿನ ಮತ ಪ್ರಚಾರ ನಡೆಸಿದರು.

ಜನರು ಬೆವರು ಸುರಿಸಿ ಸಂಪಾದನೆ ಮಾಡಿ ಕಟ್ಟಿದ ತೆರಿಗೆ ಹಣ ಜನೋಪಯೋಗಿ ಕೆಲಸಕ್ಕೆ ವಿನಿಯೋಗಿ ಸದೇ ಉದ್ಯಮಿಗಳ ಹಿತಕಾಯುವುದಕ್ಕೆ ಬಳಸಿ ಕೊಳ್ಳಲಾಗುತ್ತಿದೆ. ಇದರ ಪರಿಣಾಮವೇ ಪೆಟ್ರೋಲ್, ಡೀಸಲ್, ಅಡುಗೆ ಸಿಲಿಂಡರ್, ಅಡುಗೆ ಎಣ್ಣೆ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಲು ಕಾರಣ. ಇದರಿಂದ ಬಡ ಜನರನ್ನು ಸುಲಿಗೆ ಮಾಡುವ ಮೂಲಕ ಸಂಕಷ್ಟಕ್ಕೆ ಸಿಲುಕಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ವರುಣ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಯಾಗಿ ಸ್ಪರ್ಧಿಸಿರುವ ಸಿದ್ದರಾಮಯ್ಯ ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಅನ್ನಭಾಗ್ಯ, ಕ್ಷೀರಭಾಗ್ಯ, ಇಂದಿರಾ ಕ್ಯಾಂಟೀನ್, ವಿದ್ಯಾಸಿರಿ, ಕೃಷಿಭಾಗ್ಯ, ಕ್ಷೀರಧಾರೆ, ಮೈತ್ರಿ, ಮನಸ್ವಿನಿ, ಶಾದಿಭಾಗ್ಯ ಸೇರಿದಂತೆ ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದರು. ಚುನಾವಣೆ ವೇಳೆ ಕಾಂಗ್ರೆಸ್ ಘೋಷಣೆ ಮಾಡಿದ್ದ 165 ಭರವಸೆಗಳಲ್ಲಿ 160 ಭರವಸೆ ಈಡೇರಿಸಿದೆ. ನುಡಿದಂತೆ ನಡೆವ ಏಕೈಕ ಸರ್ಕಾರ ಕಾಂಗ್ರೆಸ್ ಸರ್ಕಾರವಾಗಿದೆ.

ಕಳೆದ 4 ವರ್ಷದಿಂದ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರ ಒಂದೇ ಒಂದು ಯೋಜನೆಯನ್ನೂ ಜಾರಿಗೊಳಿಸಲಿಲ್ಲ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದ ಯೋಜನೆಗಳನ್ನು ಮುಂದುವರೆಸುವುದಕ್ಕೂ ಬಿಜೆಪಿ ನಾಯಕರಿಗೆ ಆಗಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಡವರು, ಗ್ರಾಮೀಣ ಜನರು ಹಸಿವಿನಿಂದ ಇರಬಾರದು ಎಂದು ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದರು. ಇದರಿಂದ ಹಬ್ಬದ ದಿನಗಳಲ್ಲಿ ಮಾತ್ರ ಅನ್ನ ತಿನ್ನುತ್ತಿದ್ದ ಲಕ್ಷಾಂತರ ಕುಟುಂಬಗಳು ಹಾಗೂ ಅಕ್ಕಿ ಖರೀದಿಸಲು ಆಗದ ಬಡ ಕುಟುಂಬ ಗಳಿಗೆ ಸಮಾಧಾನವುಂಟಾಗಿತ್ತು. ಆದರೆ, ಬಿಜೆಪಿ ಸರ್ಕಾರ ಬಂದ ಕೂಡಲೇ ಅನ್ನಭಾಗ್ಯ ಯೋಜನೆಗೆ ಕತ್ತರಿಹಾಕಿದರು. ಇದರಿಂದ ಸಾವಿರಾರು ಕುಟುಂಬಗಳ ಅನ್ನ ಕಸಿದುಕೊಂಡ ಅಪಕೀರ್ತಿಗೆ ಬಿಜೆಪಿ ಒಳಗಾಗಿದೆ ಇದಕ್ಕೆ ಬಿಜೆಪಿಗೆ ಜನ ಪಾಠ ಕಲಿಸಬೇಕು ಎಂದು ಮನವಿ ಮಾಡಿದರು.

ಬಿಜೆಪಿ ದುರಾಡಳಿತ, ಮಿತಿ ಮೀರಿದ ಭ್ರಷ್ಟಾಚಾರ, ಶೇ.40ರಷ್ಟು ಕಮೀಷನ್ ದಂಧೆ, ನೇಮಕಾತಿಯಲ್ಲಿ ಅಕ್ರಮ ಸೇರಿ ದಂತೆ ಬಿಜೆಪಿ ಜನ ವಿರೋಧಿ ನೀತಿ ವಿರುದ್ದ ಜನ ಬೇಸತ್ತಿದ್ದಾರೆ. ಈ ಬಾರಿ ಬಿಜೆಪಿ ಸರ್ಕಾರವನ್ನು ಕಿತ್ತೊಗೆದು, ಜನಪರ ವಾಗಿರುವ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಲು ನಿರ್ಧರಿಸಿದ್ದಾರೆ. ಇದರಿಂದ ಕಳೆದ ನಾಲ್ಕು ವರ್ಷದಿಂದ ತತ್ತರಿಸಿರುವ ಜನರಿಗೆ ನೆರವು ನೀಡುವುದಕ್ಕೆ ಕಾಂಗ್ರೆಸ್ ಬದ್ಧವಾಗಿದೆ. ಈ ನಿಟ್ಟಿನಲ್ಲಿ ವರುಣ ಕ್ಷೇತ್ರದ ಜನತೆ ಸಿದ್ದರಾಮಯ್ಯ ಅವರನ್ನು ಗೆಲ್ಲಿಸಬೇಕು ಎಂದು ಒತ್ತಾಯಿಸಿದರು.

ಚುನಾವಣೆ ಸಂದರ್ಭದಲ್ಲಿ ವಿರೋಧ ಪಕ್ಷಗಳು ಸುಳ್ಳು ಹೇಳುವುದರಲ್ಲಿ ಮಗ್ನ ರಾಗಿವೆ. ವದಂತಿ ಹಬ್ಬಿಸಿ ಸಿದ್ದರಾಮಯ್ಯ ವಿರುದ್ಧ ಜನರನ್ನು ಎತ್ತಿ ಕಟ್ಟುವ ಹುನ್ನಾರ ನಡೆಸಲಾಗುತ್ತಿದೆ. ಸಿದ್ದರಾಮಯ್ಯ ಸರ್ವ ಜನಾಂಗದ ಜನರ ಹಿತಕಾಯುವ ನಾಯಕ. ಸಮಾನತೆಯೊಂದಿಗೆ ಸರ್ವರಿಗೂ ಸಮ ಪಾಲು, ಸರ್ವರಿಗೂ ಸಮಬಾಳು ತತ್ವದಲ್ಲಿ ನಂಬಿಕೆ ಇಟ್ಟು ಸೇವೆ ಮಾಡುತ್ತಿದ್ದಾರೆ. ತಮ್ಮ ಜೀವಮಾನದಲ್ಲಿ ಎಂದಿಗೂ ಜಾತಿಯತೆಗೆ ಪ್ರೋತ್ಸಾಹ ನೀಡಿಲ್ಲ. ಆದರೆ, ಹೇಗಾದರು ಮಾಡಿ ಚುನಾವಣೆಯಲ್ಲಿ ಗೆಲ್ಲಬೇಕೆಂದು ಬಿಜೆಪಿಗರು ದಿನಕೊಂದು ಸುಳ್ಳು ಹೇಳಿ ಜನರನ್ನು ದಿಕ್ಕು ತಪ್ಪಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ, ಯಾವುದೇ ಕಾರಣಕ್ಕೂ ವರುಣ ಕ್ಷೇತ್ರದ ಜನತೆ ಬಿಜೆಪಿ ಸಂಚಿಗೆ ಒಳಗಾಗುವುದಿಲ್ಲ ಎಂಬ ನಂಬಿಕೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಂಸದ ಶಿವಣ್ಣ, ತಾ.ಪಂ ಮಾಜಿ ಸದಸ್ಯ ಮಹಾ ದೇವು, ಕೆಪಿಸಿಸಿ ಕಾರ್ಯದರ್ಶಿ ವರುಣಾ ಮಹೇಶ್, ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ಬಸವರಾಜು, ಸೋಮಣ್ಣ, ಬಿ.ಎಂ. ನಟರಾಜು, ಎಂ.ಟಿ.ರವಿ ಕುಮಾರ್, ಮಹೇಶ್, ಮಹಾದೇವ, ಪುಟ್ಟಯ್ಯ, ಲಿಂಗಯ್ಯ, ದುದ್ದಗೆರೆ ಮಹಾದೇವ, ನಾಡನಹಳ್ಳಿ ರವಿ, ಶಾಂತಮ್ಮ, ನಿರ್ಮಲ, ಪುಟ್ಟಣ್ಣ, ಶಿಂಷಾ ದಿನೇಶ್, ಕೀಳನಪುರ ಮಹದೇಶ್ವರ ದೇವಾ ಲಯ ಅಭಿವೃದ್ಧಿ ಸಮಿತಿ ನಿರ್ದೇ ಶಕ ಮಹ ದೇವಪ್ಪ, ಸಿದ್ದರಾಮನಹುಂಡಿ ಬಸವರಾಜು, ಶಿವಪ್ರಸಾದ್, ಜವರಪ್ಪ, ಪಾಳ್ಯ ಸುರೇಶ್ ಸೇರಿ ದಂತೆ ಸ್ಥಳೀಯ ಮುಖಂಡರು ಹಾಜರಿದ್ದರು.

ಕಳಂಕ ರಹಿತ ಆಡಳಿತ ನಡೆಸುತ್ತಿರುವ ಪ್ರಧಾನಿ ಮೋದಿಯವರ ಬಿಜೆಪಿಗೆ ಮತ ಹಾಕಿ

ಮೋದಿ ಮಿಷನ್ ಸಂಸ್ಥೆ ಮನವಿ



ಮೈಸೂರು,ಮೇ 7(ಜಿಎ)–ಕಳೆದ ಒಂಭತ್ತು ವರ್ಷಗಳಿಂದಲೂ ಯಾವುದೇ ಭ್ರಷ್ಟಾಚಾರದ ಕಳಂಕವಿಲ್ಲದೆ ರೈತರ, ಸೈನಿಕರ, ಸಮಾಜದ ಎಲ್ಲಾ ವರ್ಗಗಳ ಹಿತವನ್ನು ಕಾಪಾಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ಬಿಜೆಪಿ ಅಭ್ಯರ್ಥಿಗಳಿಗೆ ಈ ಬಾರಿಯ ವಿಧಾನಸಭಾ ಚುನಾವಣೆ ವೇಳೆ ಮತದಾರರು ಮತ ಹಾಕಬೇಕೆಂದು ಮೋದಿ ಮಿಷನ್ ಸಂಸ್ಥೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಮನವಿ ಮಾಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪರಂಪರೆಯೊಂದಿಗೆ ಪ್ರಗತಿ' ಎಂಬ ಧ್ಯೇಯದಿಂದ ದೇಶದ ಅಭ್ಯುದಯಕ್ಕಾಗಿ ಅಹರ್ನಿಶಿ ದುಡಿಯುತ್ತಿರುವ, ಜೊತೆಯಲ್ಲಿ ಭಾರತದ ಆಸ್ಮಿತೆಯಾದ ಸನಾತನ ಹಿಂದೂ ಧರ್ಮದ ರಕ್ಷಣೆಗೆ ಪ್ರಧಾನಿ ಕಟಿಬದ್ಧರಾಗಿದ್ದು, ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಸ್ಪರ್ಧಿಸಿರುವ ಎಲ್ಲಾ ಬಿಜೆಪಿ ಅಭ್ಯರ್ಥಿಗಳನ್ನು ಬೆಂಬಲಿಸಿ, ಬಿಜೆಪಿ ಸರ್ಕಾರ ರಚನೆಗೆ ಅವಕಾಶ ಮಾಡಿಕೊಡಿ ಎಂದರು. ಸುದ್ದಿಗೋಷ್ಠಿಯಲ್ಲಿ ಲೋಕೇಶ್ ನಾಗಪ್ಪ, ಸುಮಾರಾವ್ ಮತ್ತಿತರರಿದ್ದರು.

ನಾಯಕ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಿರುವ ಬಿಜೆಪಿಗೆ ಬೆಂಬಲ ನೀಡಿ

ಬಿ.ಶ್ರೀರಾಮುಲು ಅಭಿಮಾನಿಗಳ ಬಳಗ ಮನವಿ



ಮೈಸೂರು,ಮೇ 7(ಜಿಎ)–ನಾಯಕ ಸಮಾಜದ ಅಭಿವೃದ್ಧಿಗೆ ಬಿಜೆಪಿಯು ಹಲವು ಕೊಡುಗೆಗಳನ್ನು ನೀಡಿದ್ದು, ಸಮುದಾಯದ ಮತದಾರರು ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು ಎಂದು ಅಖಿಲ ಕರ್ನಾಟಕ ಬಿ. ಶ್ರೀರಾಮುಲು ಅಭಿಮಾನಿಗಳ ಬಳಗದ ಅಧ್ಯಕ್ಷ ಪ್ರಭಾಕರ್ ಹುಣಸೂರು ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರವು ವಾಲ್ಮೀಕಿ ಜಯಂತಿಗೆ ರಜೆ ಜೊತೆಗೆ ಸರ್ಕಾರಿ ಕಾರ್ಯಕ್ರಮವೆಂದು ಮಾನ್ಯತೆ ನೀಡಿದೆ. ಮೀಸಲಾತಿ ಹೆಚ್ಚಳ, ವಾಲ್ಮೀಕಿ ಸಮುದಾಯ ಭವನಗಳು ಹಾಗೂ ಆಶ್ರಮ ಶಾಲೆಗಳ ಸ್ಥಾಪನೆಗೆ ಕ್ರಮ ಕೈಗೊಂಡಿದ್ದು, ಮೈಸೂರು ಮೇಯರ್ ಸ್ಥಾನವನ್ನೂ ಪರಿಶಿಷ್ಟ ಪಂಗಡಕ್ಕೆ ನೀಡಿ ಗೌರವಿಸಿದೆ ರಾಜ್ಯಾದ್ಯಂತ ನಾಯಕ ಸಮುದಾಯವು ಬಿಜೆಪಿಯನ್ನು ಬೆಂಬಲಿಸಿ, ವಿಶೇಷವಾಗಿ ವರುಣ ಕ್ಷೇತ್ರದಲ್ಲಿ ವಿ.ಸೋಮಣ್ಣ ಅವರ ಗೆಲುವಿಗೆ ಶ್ರಮಿಸಲಿದ್ದೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಬಳಗದ ಜಿಲ್ಲಾಧ್ಯಕ್ಷ ಎನ್.ಪ್ರತಾಪ್, ಪ್ರಮುಖರಾದ ಕೆರೆಹಳ್ಳಿ ಮಾದೇಶ್, ಹದಿನಾರು ಪ್ರಕಾಶ್, ಯಡಕೊಳ ನಾಗೇಂದ್ರ, ಸೂರಳ್ಳಿ ಮಹದೇವನಾಯಕ ಉಪಸ್ಥಿತರಿದ್ದರು.

ಕೃಷ್ಣರಾಜ ಕ್ಷೇತ್ರದಲ್ಲಿ ಸೋಮಶೇಖರ್ ಮತಯಾಚನೆ



ಮೈಸೂರು, ಮೇ 7(ಎಂಕೆ)– ಬಡವರ ಪರ ಇರುವ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವಂತೆ ಮಾಜಿ ಶಾಸಕ ಹಾಗೂ ಕೆಆರ್.ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ಮನವಿ ಮಾಡಿದರು.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಭೂತಾಳೆ ಮೈದಾನದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯನವರ ಆಡಳಿತಾವಧಿಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳ ಪರ್ವವೇ ನಡೆದಿತ್ತು. ಅನ್ನಭಾಗ್ಯದಂತಹ ಮಹತ್ವಪೂರ್ಣ ಕಾರ್ಯಕ್ರಮದಿಂದಾಗಿ ಕೋಟ್ಯಾಂತರ ಜನರ ಹಸಿವು ನೀಗಿತ್ತು. ಕೊರೊನಾದಂತಹ ಕಷ್ಟಕಾಲದಲ್ಲಿ ಬಡ ಜನರ ಕಣ್ಣೀರನ್ನು ಒರೆಸಿತ್ತು. ಆದರೆ ಬಿಜೆಪಿಯ ಸರ್ಕಾರ ಯಾವುದೇ ಜನಪರ ಯೋಜನೆಗಳನ್ನು ರೂಪಿಸದೆ, ಜಾತಿ, ಧರ್ಮ, ಕೋಮುಗಲಭೆ ಭ್ರಷ್ಟಾಚಾರದಲ್ಲಿ ಮುಳುಗಿ ಮತದಾರರನ್ನು ವಂಚಿಸಿದೆ. ಆದ್ದರಿಂದ ಮತ್ತೊಮ್ಮೆ ಸಿದ್ದರಾಮಯ್ಯನವರ ಆಡಳಿತದ ದಿನಗಳು ಮರುಕಳಿಸಲಿ ಎಂದು ಮತದಾರರು ಬಯಸುತ್ತಿದ್ದಾರೆ. ನನಗೆ ಮತ ನೀಡುವ ಮೂಲಕ ಮಾಜಿ ಸಿಎಂ ಸಿದ್ದರಾಮಯ ಹಾಗೂ ಡಿ.ಕೆ.ಶಿವಕುಮಾರ್ ಅವರ ನಾಯಕತ್ವವನ್ನು ಬಲಪಡಿಸುವ ಮೂಲಕ ರಾಜ್ಯದಲ್ಲಿ ಸುಭದ್ರ ಕಾಂಗ್ರೆಸ್ ಸರ್ಕಾರ ಬರಲು ಸಹಕರಿಸಿ ಎಂದು ತಿಳಿಸಿದರು.

ಚಲನಚಿತ್ರ ನಿರ್ದೇಶಕ ರಾಜೇಂದ್ರಸಿಂಗ್ ಬಾಬು, ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್, ಪಾಲಿಕೆ ಸದಸ್ಯರಾದ ಜೆ.ಗೋಪಿ, ಶೋಭಾ ಸುನೀಲ್, ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ವಿದ್ಯಾ, ಭವ್ಯ, ಮುಖಂಡರಾದ ರವಿಶಂಕರ್, ನಾಗೇಶ್, ಕೆ.ವಿ.ಯೋಗೇಶ್, ಎಂ.ಸಿ.ಚಿಕ್ಕಣ್ಣ, ಎಂ.ಸುನೀಲ್, ಹೆಚ್.ಶೇಖರ್, ಯೋಗೇಶ್ ಉಪ್ಪಾರ, ರವಿಶಂಕರ್, ಜೆ.ವಿನಯ್ ಕುಮಾರ್, ಶ್ರೀನಾಥ್ ಬಾಬು, ಶಿವಕುಮಾರ್, ರಮೇಶ್ ರಾಮಪ್ಪ, ಸೀನಪ್ಪ ಶ್ರೀಕಂಠು, ಮೊಗಣ್ಣಾಚಾರ್, ಖಾನಾವಳಿ ನಾಗೇಂದ್ರ ಮತ್ತಿತರರು ಉಪಸ್ಥಿತರಿದ್ದರು.



ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಅವರು ತ್ಯಾಗರಾಜ ರಸ್ತೆಯ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ವೇಳೆ ನಗರ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಪಾರ್ಥಸಾರಥಿ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಸಂತೋಷ್ ಶಂಭು, ರಮೇಶ್ ಮುಂತಾದವರು ಉಪಸ್ಥಿತರಿದ್ದರು.

ಕೆ.ಆರ್.ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಕೆ.ವಿ.ಮಲ್ಲೇಶ್ ಬೆಂಬಲಿಸಿ

ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಕೆ.ವಿ.ಶ್ರೀಧರ್



ಮೈಸೂರು, ಮೇ 7– ರಾಜ್ಯದಲ್ಲಿ ಮತ್ತೊಮ್ಮೆ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಸರ್ಕಾರ ರಚಿಸಲು ಕೆ.ಆರ್.ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಕೆ.ವಿ.ಮಲ್ಲೇಶ್ ಬೆಂಬಲಿಸು ವಂತೆ ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಕೆ.ವಿ.ಶ್ರೀಧರ್ ಮನವಿ ಮಾಡಿದರು.

ಮೈಸೂರು ಅರವಿಂದ ನಗರದ ಜನನಿ ಜನ್ಮ ಭೂಮಿ ಸಭಾಂಗಣದಲ್ಲಿ ಕೆಆರ್.ಕ್ಷೇತ್ರ ವ್ಯಾಪ್ತಿಯ ಒಕ್ಕಲಿಗರ ಸಮುದಾಯದ ಮತದಾರರ ಸಭೆಯಲ್ಲಿ ಮಾತನಾಡಿದರು.

ರಾಜ್ಯ ಮತ್ತು ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಜನವಿರೋಧಿ ಆಡಳಿತದಿಂದ ಜನಸಾಮಾನ್ಯರ ಬದುಕು ಬೀದಿಗೆ ಬಂದಿದೆ. ಇದಕ್ಕೆಲ್ಲಾ ಪರಿಹಾರ ಕಂಡುಕೊಳ್ಳಬೇಕಾದರೆ, ಕೆ.ಆರ್.ಕ್ಷೇತ್ರದ ಮತದಾರರು, ಜೆಡಿಎಸ್ ಅಭ್ಯರ್ಥಿ ಕೆ.ವಿ.ಮಲ್ಲೇಶ್ ಅವರನ್ನು ಅಧಿಕ ಮತದಿಂದ ಗೆಲ್ಲಿಸುವಂತೆ ಮನವಿ ಮಾಡಿದರು. ಅಭ್ಯರ್ಥಿ ಕೆ.ವಿ.ಮಲ್ಲೇಶ್ ಅವರು ಸರಳ, ಸಜ್ಜನ ವ್ಯಕ್ತಿಯಾಗಿದ್ದು, ಅವರ ಗೆಲುವಿಗೆ ವೀರಶೈವ ಲಿಂಗಾಯತ ಸಮಾಜ ಸೇರಿದಂತೆ ಎಲ್ಲಾ ಸಮುದಾಯಗಳು ಸ್ವಯಂ ಪ್ರೇರಿತವಾಗಿ ಬೆಂಬಲ ಸೂಚಿಸಿವೆ ಎಂದರು.

ಈ ವೇಳೆ ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ.ರಾಮು, ಕೆ.ಆರ್. ಕೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ವಿ.ಮಲ್ಲೇಶ್, ಒಕ್ಕಲಿಗರ ಸಮುದಾಯದ ಮುಖಂಡರಾದ ಸತೀಶ್ ಗೌಡ, ಪ್ರೊ.ಚಂದ್ರಶೇಖರ್ ಗೌಡ, ನಿವೃತ್ತ ಅಧಿಕಾರಿ ರಾಮಪ್ಪ, ನಗರ ಪಾಲಿಕೆ ಸದಸ್ಯ ಮಾಜಿ ಸದಸ್ಯರಾದ ಮಂಜುಳಮ್ಮ, ಕೆಂಪಣ್ಣ, ಜೆಡಿಎಸ್ ಕಾರ್ಯಕರ್ತರಾದ ಆಯರಹಳ್ಳಿ ಪಿ.ವಿರೂಪಾಕ್ಷ, ಜನತಾನಗರ ಮಂಜುನಾಥ್ ಸೇರಿದಂತೆ ಇನ್ನಿತರರಿದ್ದರು.

ಅಧಿಕ ಮತಗಳ ಅಂತರದಲ್ಲಿ ಚಾಮರಾಜ ಕ್ಷೇತ್ರದ ಜನ ನನ್ನನ್ನು ಗೆಲ್ಲಿಸಲಿದ್ದಾರೆ

ಬಿಜೆಪಿ ಅಭ್ಯರ್ಥಿ ಎಲ್.ನಾಗೇಂದ್ರ ವಿಶ್ವಾಸ



ಮೈಸೂರು, ಮೇ 7(ಪಿಎಂ)– ಡಬಲ್ ಇಂಜಿನ್ ಸರ್ಕಾರದ ನೂರಾರು ಅಭಿವೃದ್ಧಿ ಕಾರ್ಯಕ್ರಮಗಳು ಚಾಮರಾಜ ಕ್ಷೇತ್ರದ ಜನರನ್ನು ತಲುಪಿದ್ದು, ಈ ಬಾರಿ ಕ್ಷೇತ್ರದಲ್ಲಿ ಅಧಿಕ ಮತಗಳ ಅಂತರದಲ್ಲಿ ಜನ ನನ್ನನ್ನು ಗೆಲ್ಲಿಸಲಿದ್ದಾರೆ ಎಂದು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಲ್.ನಾಗೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಪ್ರೀಮಿಯರ್ ಮೆಟ್ರೋಪಾಲಿಸ್ ಅಪಾರ್ಟ್‌ಮೆಂಟ್‌ನಲ್ಲಿ ಭಾನುವಾರ ಮತ ಯಾಚಿಸಿ ಅವರು ಮಾತನಾಡಿದರು.

ಕೇಂದ್ರ ಮತ್ತು ರಾಜ್ಯದ ಬಿಜೆಪಿ ನೇತೃತ್ವದ ಸರ್ಕಾರಗಳು ಮಹಿಳೆಯರಿಗೆ ವಿಶೇಷ ಆದ್ಯತೆ ನೀಡಿ ಯೋಜನೆಗಳನ್ನು ಅನುಷ್ಠಾನಗೊಳಿಸಿವೆ. ನೀಡಿದ ಭರವಸೆಗಳಿಗಿಂತ ಹೆಚ್ಚು ಯೋಜನೆಗಳನ್ನು ಬಿಜೆಪಿ ಜಾರಿಗೊಳಿಸಿದೆ. ಮೇ 10ರಂದು ಮತನೀಡಿ ಆಶೀರ್ವದಿಸಿ, ನಿಮ್ಮ ಮನೆ ಮಗನಂತೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆಂದು ಭರವಸೆ ನೀಡಿದರು.

ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷ ಹೇಮಾನಂದೀಶ್ ಮಾತನಾಡಿ, ಬಿಜೆಪಿ ಮಹಿಳೆಯರನ್ನು ಸಬಲಗೊಳಿಸುವಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ. ಅಲ್ಲದೆ, ಜಲಜೀವನ್ ಮಿಷನ್ ಅಡಿಯಲ್ಲಿ 43 ಲಕ್ಷ ನಲ್ಲಿ ನೀರು ಸಂಪರ್ಕ, ಸ್ವಚ್ಛ ಭಾರತ್ ಯೋಜನೆ, ಬಯಲು ಶೌಚ ನಿರ್ಮೂಲನೆ, ಉಜ್ವಲ ಯೋಜನೆ, ಪಿಎಂ ಸುರಕ್ಷಿತ ಮಾತೃತ್ವ ಅಭಿಯಾನ, ಪೋಷಣ್ ಅಭಿಯಾನ, ಪ್ರಧಾನಮಂತ್ರಿ ಮಾತೃ ವಂದನಾ ಕಾರ್ಯಕ್ರಮ ಹೀಗೆ ಹತ್ತಾರು ಯೋಜನೆಗಳ ಮೂಲಕ ಸಮಾಜಕ್ಕೆ ಕೊಡುಗೆ ನೀಡಿದೆ ಎಂದು ಹೇಳಿದರು. ಬಿಜೆಪಿ ಮುಖಂಡರಾದ ಚೈತ್ರ ಚೌಡಪ್ಪ, ಪ್ರಮೋದಿನಿ, ಗೀತಾ, ಪುಟ್ಟಸ್ವಾಮಿ, ಜಯಂತ್, ಜಯಶ್ರೀ ಮತ್ತಿತರರು ಹಾಜರಿದ್ದರು.

ನೇಮಕ



ಮೈಸೂರು, ಮೇ 6– ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹೆಚ್ಚುವರಿ ಉಪಾಧ್ಯಕ್ಷರಾಗಿ ಗಾಯತ್ರಿಪುರಂನ ಅಕ್ಬರ್ ಖಾನ್ ಅವರನ್ನು ನೇಮಕ ಮಾಡಲಾಗಿದೆ.

ಸಿದ್ದರಾಮಯ್ಯರಿಗೆ ದಲಿತರು ತಕ್ಕ ಪಾಠ ಕಲಿಸಿ

ಬಿಜೆಪಿ ಯುವ ಮುಖಂಡ ಭರತ್ ರಾಮಸ್ವಾಮಿ



ಮೈಸೂರು, ಮೇ 7–ತಾವು ದಲಿತರ ಪರ ಕಾಳಜಿ ಹೊಂದಿರುವುದಾಗಿ ಎಂದು ನಾಟಕವಾಡುತ್ತಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವರುಣ ಕ್ಷೇತ್ರದ ದಲಿತರು ತಕ್ಕಪಾಠ ಕಲಿಸಬೇಕೆಂದು ಬಿಜೆಪಿ ಯುವ ಮುಖಂಡ ಭರತ್ ರಾಮಸ್ವಾಮಿ ಮನವಿ ಮಾಡಿದ್ದಾರೆ.

ಸಿದ್ದರಾಮಯ್ಯ ಅವರು ದಲಿತ ನಾಯಕರಾದ ವಿ. ಶ್ರೀನಿವಾಸ ಪ್ರಸಾದ್ ಅವರಿಗೆ ಮಾಡಿದ ಅಪಮಾನ, ಡಾ.ಜಿ.ಪರಮೇಶ್ವರ್ ಅವರಿಗೆ ಕೊಟ್ಟ ನೋವು ಹಾಗೂ ಖರ್ಗೆಯವರನ್ನು ಪಕ್ಷದಲ್ಲಿ ಅಸಹಾಯಕರನ್ನಾಗಿಸುವ ಮೂಲಕ ದಲಿತ ನಾಯಕತ್ವವನ್ನೇ ಒಡೆದು ಆಳಲು ಮಾಡಿದ ಸಂಚನ್ನು ದಲಿತ ಸಮುದಾಯ ಎಂದೂ ಮರೆಯಬಾರದು ಎಂದಿರುವ ಅವರು, ಇನ್ನಾದರು ದಲಿತರು ಮುಗ್ಧರಂತೆ ಕೇವಲ ಓಟ್ ಬ್ಯಾಂಕ್ ಆಗದೆ ತಮ್ಮ ಒಗ್ಗಟನ್ನು ಪ್ರದರ್ಶಿಸುವ ಮೂಲಕ ಈ ಬಾರಿ ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯನವರನ್ನು ಸೋಲಿಸಬೇಕು ಎಂದು ಕೋರಿದ್ದಾರೆ.

ಅಪರಿಚಿತ ವ್ಯಕ್ತಿ ಸಾವು

ಮೈಸೂರು, ಮೇ 7–ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿ ಅಪರಿಚಿತ ವ್ಯಕ್ತಿ ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ.

ಸುಮಾರು 35 ರಿಂದ 40 ವರ್ಷ ವಯಸ್ಸಿನ ವ್ಯಕ್ತಿ ಮೃತದೇಹ ಮೇ 4ರಂದು ಸಂಜೆ ಪತ್ತೆಯಾಗಿದ್ದು, ಈತನ ಬಲಗೈಯ್ಯಲ್ಲಿ 'ಕಸ್ತೂರಿ' ಮತ್ತು ಎಡಗೈನಲ್ಲಿ 'ಚಂದು' ಎಂಬ ಹಚ್ಚೆ ಗುರುತುಗಳಿವೆ.

ಈತನ ಬಗ್ಗೆ ಮಾಹಿತಿ ಇರುವವರು ಕೆ.ಆರ್.ಠಾಣೆ ದೂರವಾಣಿ ಸಂಖ್ಯೆ 0821–2418319 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 2418339ನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಮದ್ದೂರು 'ಕೈ'ಅಭ್ಯರ್ಥಿ ಉದಯ್ ಬೆಂಬಲಿಗರ ಮನೆ ಮೇಲೆ ದಾಳಿ

2 ಕೋಟಿ ವಶ, ಓರ್ವನ ಬಂಧನ



ಮದ್ದೂರು, ಮೇ 7– ಮದ್ದೂರು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಂ. ಉದಯ್ ಅವರ ಬೆಂಬಲಿಗರ ಮನೆ ಮೇಲೆ ಚುನಾವಣಾಧಿಕಾರಿಗಳು, ಪೊಲೀಸರು ದಿಢೀರ್ ದಾಳಿ ನಡೆಸಿ 2.03 ಕೋಟಿ ನಗದು ವಶಪಡಿಸಿಕೊಂಡು, ಈ ಸಂಬಂಧ ಓರ್ವನನ್ನು ವಶಕ್ಕೆ ಪಡೆದಿದ್ದಾರೆ.

ಪಟ್ಟಣದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಂ. ಉದಯ್ ಬೆಂಬಲಿಗರಾದ ಶಿಕ್ಷಕರ ಬಡಾವಣೆ ನಿವಾಸಿ ಆರ್.ಸಿ.ಮಹೇಶ್, ಕೆ.ಹೆಚ್. ನಗರದ ನಿವಾಸಿ ಆನಂದ್, ಹೆಚ್.ಕೆ.ವಿ. ನಗರದ ದಿನೇಶ್‌ಬಾಬು, ತೋಟದಮನೆ ಗಿರೀಶ್ ಮತ್ತು ದೊಡ್ಡಬೀದಿಯ ನಿವಾಸಿ ಸುರೇಶ್‌ಬಾಬು ಮನೆ ಮೇಲೆ ದಾಳಿ ನಡೆಸಿ ಅಪಾರ ಪ್ರಮಾಣದ ನಗದನ್ನು ವಶಕ್ಕೆ ಪಡೆದಿದ್ದಾರೆ.

ಶಿಕ್ಷಕರ ಬಡಾವಣೆ ನಿವಾಸಿ ಆರ್.ಸಿ. ಮಹೇಶ್ ಮನೆಯಲ್ಲಿದ್ದ 3.5 ಲಕ್ಷ ರೂ. ಮತ್ತು ದೊಡ್ಡಬೀದಿಯ ಸುರೇಶ್‌ಬಾಬು ಅವರ ಮನೆಯಲ್ಲಿದ್ದ 2 ಕೋಟಿ ರೂ.ಗಳನ್ನು ವಶಕ್ಕೆ ಪಡೆದುಕೊಂಡಿದ್ದು, ದಾಳಿ ನೇತೃತ್ವವನ್ನು ಮಂಡ್ಯ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಮಳವಳ್ಳಿ ಡಿವೈಎಸ್‌ಪಿ ನವೀನ್‌ಕುಮಾರ್, ವೃತ್ತ ನಿರೀಕ್ಷಕರಾದ ಸಂತೋಷ್, ಶ್ರೀಧರ್ ಪಿಎಸ್‌ಐಗಳಾದ ಉಮೇಶ್ ವಹಿಸಿದ್ದರು.

ಈ ಸಂಬಂಧ ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಶಕ್ಕೆ ಪಡೆದಿರುವ ಸುರೇಶ್‌ಬಾಬು ಅವರನ್ನು ಹೆಚ್ಚಿನ ವಿಚಾರಣೆಗಾಗಿ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿದೆ.

ಫೈಟರ್ ರವಿ ಮನೆ ಮೇಲೂ ದಾಳಿ: ಮತ್ತೊಂದೆಡೆ ನಾಗಮಂಗಲ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಫೈಟರ್ ರವಿ (ಮಲ್ಲಿಕಾರ್ಜುನ್) ತೋಟದ ಮನೆ ಮೇಲೂ ದಾಳಿ ನಡೆದಿದ್ದು, ದಾಳಿ ವೇಳೆ ಪೊಲೀಸರು ಹಾಗೂ ಅಧಿಕಾರಿಗಳು ದಾಖಲೆ ಇಲ್ಲದ 8,99,500 ರೂ. ವಶಕ್ಕೆ ಪಡೆದಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಫೈಟರ್ ರವಿ, ಅಧಿಕಾರಿಗಳು ಹಣವನ್ನು ವಶಕ್ಕೆ ಪಡೆದಿದ್ದಾರೆ. ಆದರೆ ಈ ಹಣ ನನ್ನ ತೋಟದ ಮನೆಯಲ್ಲಿರುವ ನೂರಾರು ತೆಂಗಿನಕಾಯಿ ಮಾರಿದ ಹಣವಾಗಿದ್ದು, ನೌಕರರಿಗೆ ಸಂಬಳ ನೀಡಲು ಹಣ ತರಿಸಿದ್ದೆ. ಈ ಬಗ್ಗೆ ಅಗತ್ಯ ದಾಖಲಾತಿಗಳನ್ನು ಅಧಿಕಾರಿಗಳಿಗೆ ನೀಡುವುದಾಗಿ ಹೇಳಿದರು.



ವರುಣಾ ವಿಧಾನಸಭಾ ಕ್ಷೇತ್ರದ ಯುವ ಮುಖಂಡರಾದ ಎಸ್.ಆಕರ್ಷ್ (ಪಿಂಟು), ಸತೀಶ್ ಅವರು ವರುಣಾ ವಿಧಾನಸಭಾ ಕ್ಷೇತ್ರದ ಬಿಜೆಪಿ ತಮಿಳುನಾಡು ವೀಕ್ಷಕರಾದ ಪ್ರಕಾಶ್, ಮೈಸೂರು ನಗರ ಬಿಜೆಪಿ ಮಾಜಿ ಅಧ್ಯಕ್ಷ ಡಾ. ಬಿ.ಹೆಚ್. ಮಂಜುನಾಥ್ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಗೊಂಡರು.

ಜೆಡಿಎಸ್‌ನಿಂದ ಉಚ್ಛಾಟನೆ



ಮೈಸೂರು, ಮೇ 7– ಮೈಸೂರು ನಗರ (ಜಿಲ್ಲಾ) ಜಾತ್ಯಾತೀತ ಜನತಾದಳದ ಕಾರ್ಯಾಧ್ಯಕ್ಷರಾಗಿರುವ ಪ್ರಕಾಶ್ ಪ್ರಿಯದರ್ಶನ್ ಅವರು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಕೆ.ವಿ. ಮಲ್ಲೇಶ್ ಅವರ ವಿರುದ್ಧವಾಗಿ ಪಕ್ಷೇತರ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿರುವುದರಿಂದ ಅವರನ್ನು ಜೆಡಿಎಸ್‌ನಿಂದ ತಕ್ಷಣದಿಂದಲೇ ಉಚ್ಛಾಟಿಸಲಾಗಿದೆ ಎಂದು ಮೈಸೂರು ನಗರ ಜೆಡಿಎಸ್ ಅಧ್ಯಕ್ಷ ಕೆ.ಟಿ. ಚೆಲುವೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನಾಶೀರ್ವಾದ ಪಡೆದ ರವಿಶಂಕರ್ ಗೆಲುವು ಖಚಿತ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ



ಕೆ.ಆರ್.ನಗರ, ಮೇ 7– ಚುನಾವಣೆಗೂ ಮುನ್ನಾ ಜನಾಶೀರ್ವಾದ ಯಾತ್ರೆ ನಡೆಸಿ ಜನರ ಆಶೀರ್ವಾದ ಪಡೆದ ರಾಜ್ಯದ ಮೊದಲ ಅಭ್ಯರ್ಥಿ ಡಿ.ರವಿಶಂಕರ್. ಆದ್ದರಿಂದ ಈ ಬಾರಿ ಅವರು ಜಯಗಳಿಸುವುದು ಖಚಿತ ಎಂದು ಮಾಜಿ ಮುಖ್ಯಮಂತ್ರಿ ಸಿದ್ದ ರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ರೇಡಿಯೋ ಮೈದಾನದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆ ಉದ್ಘಾಟಿಸಿ ಮಾತ ನಾಡಿದ ಅವರು, ಕಳೆದ ಚುನಾವಣೆಯಲ್ಲಿ ಸೋತರೂ ಧೃತಿಗೆಡದೇ ಸದಾ ಜನರೊಂದಿ ಗಿರುವ ರವಿಶಂಕರ್ ಅವರಿಗೆ ತಾವೆಲ್ಲರೂ ಆಶೀರ್ವದಿಸುವ ಮೂಲಕ ಈ ಬಾರಿ ಅತ್ಯ ಧಿಕ ಮತಗಳಿಂದ ಗೆಲ್ಲಿಸಬೇಕು ಎಂದರು.

ಕಳೆದ 2 ಚುನಾವಣೆಯಲ್ಲಿ ಸೋಲಾ ದರೂ ಜನರೊಟ್ಟಿಗಿದ್ದೇವೆ. ಅದಕ್ಕಾಗಿ ಜನತೆ ಹರಸಿ ಆಶೀರ್ವಾದ ಮಾಡಬೇಕು ಎಂದು ನಿಮ್ಮ ಮುಂದೆ ರವಿಶಂಕರ್ ತಂದೆ ಮತ್ತು ತಾಯಿ ಸೇರಿದಂತೆ ಕುಟುಂಬದವರು ಕಣ್ಣೀರು ಹಾಕಿದ್ದಾರೆ. ಆದ್ದರಿಂದ ತಾವು ಮೇ 10 ರಂದು ನಡೆಯುವ ಚುನಾವಣೆಯಲ್ಲಿ ರವಿ ಶಂಕರ್‌ಗೆ ಮತ ನೀಡಬೇಕು ಎಂದು ಮನವಿ ಮಾಡಿದರು.

ಬಿಜೆಪಿ, ಕಾಂಗ್ರೆಸ್‌ಗೆ ಬಹುಮತ ಬಾರ ದಂತೆ ಜೆಡಿಎಸ್‌ನವರು ಹೋಮ ಹವನ ನಡೆಸುತ್ತಿದ್ದಾರೆ. ಯಾರಿಗೂ ಬಹುಮತ ಬಾರದಿದ್ದಾಗ ಅವರ ಬೇಳೆ ಬೇಯಿಸಿಕೊಳ್ಳಲು ಸದಾ ದೇವರನ್ನು ಪೂಜಿಸುತ್ತಿದ್ದಾರೆ. ದೇವರು ನಮ್ಮ ಪರ ಇರುವುದರಿಂದ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದರು.

ದೊಡ್ಡಸ್ವಾಮೇಗೌಡ ಮತ್ತು ರವಿಶಂಕರ್ ಕ್ಷೇತ್ರದ ಅಭಿವೃದ್ಧಿಗಾಗಿ ಏನು ಕೊಡುಗೆ ನೀಡಿದ್ದಾರೆ ಎಂಬ ಶಾಸಕ ಸಾ.ರಾ.ಮಹೇಶ್ ಅವರ ಪ್ರಶ್ನೆಗೆ ಉತ್ತರಿಸುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದ ಸಿದ್ದರಾಮಯ್ಯ ಚುನಾಯಿತ ಸದಸ್ಯರು ಅಭಿವೃದ್ಧಿ ಕೆಲಸ ಮಾಡುವ ಜತೆಗೆ ಜನರ ಪ್ರಶ್ನೆಗೆ ಉತ್ತರಿಸಬೇಕಾದುದು ಶಾಸಕರಾದವರ ಜವಾಬ್ದಾರಿ. ಇಂತಹ ಕನಿಷ್ಠ ಜ್ಞಾನ ಸಾ.ರಾ.ಮಹೇಶ್‌ಗೆ ಇಲ್ಲವೇ ಎಂದು ಪ್ರಶ್ನಿಸಿದರು.

3 ಬಾರಿ ಶಾಸಕರಾಗಿ ಕಾಂಗ್ರೆಸ್ ಸಹಕಾರದಿಂದ 14 ತಿಂಗಳು ಮಂತ್ರಿಯಾಗಿದ್ದ ನಿಮ್ಮ ಕೊಡುಗೆ ಏನೆಂದು ಸಾ.ರಾ.ಮಹೇಶ್ ಅವರನ್ನು ಪ್ರಶ್ನಿಸಿದ ಸಿದ್ದರಾಮಯ್ಯ ಸಾ.ರಾ. ಮಹೇಶ್ ಪಾಪದ ಕೊಡ ತುಂಬಿದ್ದು, ನಿಮ್ಮೆಲ್ಲರ ಆಶೀರ್ವಾದದಿಂದ ರವಿಶಂಕರ್ ಗೆಲುವು ಸಾಧಿಸುವುದು ಶತಸಿದ್ಧ. ಸುಭದ್ರ ಸರ್ಕಾರಕ್ಕಾಗಿ ಕಾಂಗ್ರೆಸ್‌ಗೆ ಮತ ನೀಡುವಂತೆ ಕೋರಿದರು.

ಅಭ್ಯರ್ಥಿ ಡಿ.ರವಿಶಂಕರ್ ಮಾತನಾಡಿ, ಜನಾಶೀರ್ವಾದ ಯಾತ್ರೆ ವೇಳೆ ಜನತೆಯಿಂದ ದೊರೆತ ಬೆಂಬಲದಿಂದ ಈ ಬಾರಿ ಜಯ ಗಳಿಸುವ ವಿಶ್ವಾಸವಿದೆ. ನೀವು ನೀಡುವ ಅಧಿಕಾರ ದುರ್ಬಳಕೆ ಮಾಡಿಕೊಳ್ಳುವುದಿಲ್ಲ. ಜತೆಗೆ ಸಾಮಾನ್ಯ ವ್ಯಕ್ತಿಯಾಗಿ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕಿನ ಸರ್ವ ಜನಾಂಗದವರು ನನ್ನನ್ನು ಗೌರವದಿಂದ ಕಾಣುವಂತೆ ನಡೆದುಕೊಳ್ಳುತ್ತೇನೆ ಎಂದರು.

ಕ್ಷೇತ್ರದ ಉಸ್ತುವಾರಿ ಡಾ.ರವೀಂದ್ರ, ಗ್ರಾಮಾಂತರ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಅಲ್ಪ ಸಂಖ್ಯಾತ ವಿಭಾಗದ ಜಿಲ್ಲಾಧ್ಯಕ್ಷ ಜಾವೀದ್ ಪಾಷ, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯಶಂಕರ್, ನಗರಾಧ್ಯಕ್ಷ ಎಂ.ಜೆ.ರಮೇಶ್, ವಕ್ತಾರ ಸೈಯದ್‌ಜಾಬೀರ್ ಮಾತನಾಡಿದರು.

ಪುರಸಭೆ ಅಧ್ಯಕ್ಷ ಸೈಯದ್ ಸಿದ್ದಿಕ್, ಮಾಜಿ ಅಧ್ಯಕ್ಷರಾದ ತಮ್ಮನಾಯಕ, ಗೀತಾ, ನರಸಿಂಹರಾಜು, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್, ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಅಮಿತ್.ವಿ. ದೇವರಹಟ್ಟಿ, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಮೇಶ್, ಜಿಪಂ ಮಾಜಿ ಸದಸ್ಯರಾದ ಶಿವರಾಂ, ಜಿ.ಆರ್.ರಾಮೇಗೌಡ, ಸಿದ್ದಪ್ಪ, ಜಯರಾಮೇಗೌಡ, ತಾಪಂ ಮಾಜಿ ಅಧ್ಯಕ್ಷರಾದ ಮಹದೇವಸ್ವಾಮಿ, ಹೆಚ್.ಟಿ.ಮಂಜುನಾಥ್, ಚಂದ್ರಶೇಖರ್, ಮಾಜಿ ಸದಸ್ಯ ಎ.ಟಿ.ಗೋವಿಂದೇಗೌಡ, ಮುಖಂಡರಾದ ಎಸ್.ಪಿ.ತಮ್ಮಯ್ಯ, ಹೆಚ್.ಪಿ.ಗೋಪಾಲ್, ಕೃಷ್ಣಭಟ್, ಶ್ರೀನಿವಾಸ್, ಪೆರಿಸ್ವಾಮಿ, ಕೆ.ಎಲ್.ಕುಮಾರ್, ನೀಲಕಂಠೇಗೌಡ, ಡಿ.ಕೆ.ಕೊಪ್ಪಲುರಾಜಯ್ಯ, ಶಾಂತಿರಾಜು, ಪುಟ್ಟಣ್ಣಚಾರ್, ಭಾಸ್ಕರ್, ಸುಧಾಕರ್, ಕುಮಾರ್, ತಮ್ಮಯ್ಯ, ಗುರುಶಂಕರ್, ರಾಮಾಚಾರಿ ಇತರರಿದ್ದರು.

> 2013ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜನತೆ ಸ್ಪಷ್ಟ ಬಹುಮತ ನೀಡಿದ್ದರಿಂದ 5 ವರ್ಷಗಳ ಕಾಲ ಸುಭದ್ರ ಆಡಳಿತ ನೀಡುವುದರ ಜತೆಗೆ ಬಡವರಿಗಾಗಿ ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದಲ್ಲದೆ ಚುನಾವಣೆಗೂ ಮುನ್ನ ನೀಡಿದ ಭರವಸೆಗಳನ್ನು ಈಡೇರಿಸಲಾಯಿತು. ಈ ಬಾರಿ 5 ಗ್ಯಾರಂಟಿಗಳಾದ 200 ಯುನಿಟ್ ಉಚಿತ ವಿದ್ಯುತ್, 10 ಕೆಜಿ ಅಕ್ಕಿ, ಪದವೀಧರ ನಿರುದ್ಯೋಗಿಗಳಿಗೆ ಭತ್ಯೆ, ಕುಟುಂಬದ ಮಹಿಳಾ ಮುಖ್ಯಸ್ಥೆಗೆ ಮಾಸಿಕ 2 ಸಾವಿರ, ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ನೀಡಿರುವ ಎಲ್ಲಾ ಭರವಸೆಗಳನ್ನು ಅಧಿಕಾರಕ್ಕೆ ಬಂದ ಕೂಡಲೇ ಜಾರಿಗೆ ತರುತ್ತೇವೆ.
> –ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ

ದರ್ಶನ್ ಪರ ಮತಯಾಚನೆ



ಮಲ್ಲುಂಡಿ, ಮೇ 7– ನಂಜನಗೂಡು ಕ್ಷೇತ್ರದ ದೇವರಾಯಶೆಟ್ಟಿಪುರ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಪರ ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್ ಮತಯಾಚಿಸಿದರು.

ಬಳಿಕ ಮಾತನಾಡಿದ ಅವರು ಕಾಂಗ್ರೆಸ್ ಸರ್ಕಾರದಲ್ಲಿ ಜನಪರ ಯೋಜನೆಗಳನ್ನು ಜಾರಿಗೆ ತಂದು ಉತ್ತಮ ಆಡಳಿತ ನೀಡಲಾಗಿತ್ತು. ಬಡ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ವಿದ್ಯಾರ್ಥಿ ವೇತನ ನೀಡಲಾಗುತ್ತಿತ್ತು. ಆದರೆ ಬಿಜೆಪಿ ಸರ್ಕಾರ ವಿದ್ಯಾರ್ಥಿ ವೇತನ ಕಡಿತಗೊಳಿಸಿ ಬಡ ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ. ಬಿಜೆಪಿ ಸರ್ಕಾರ 40% ಕಮೀಷನ್ ಪಡೆಯುವ ಮೂಲಕ ಭ್ರಷ್ಟಾಚಾರ ನಡೆಸಿದ್ದು ಬಿಟ್ಟರೆ ಯಾವುದೇ ಅಭಿವೃದ್ಧಿ ಕಾರ್ಯ ಮಾಡಲಿಲ್ಲ. ಬದಲಿಗೆ ಜನರಿಗೆ ಸುಳ್ಳು ಭರವಸೆ ನೀಡಿ ವಂಚಿಸುತ್ತಿದ್ದಾರೆ. ಇದೀಗ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಹಬ್ಬಗಳಿಗೆ ಉಚಿತ ಗ್ಯಾಸ್ ನೀಡುವುದಾಗಿ ಹೇಳುತ್ತಿದ್ದಾರೆ. ಇವರ ಸುಳ್ಳು ಭರವಸೆ ನಂಬದೆ ತಂದೆ, ತಾಯಿ ಕಳೆದುಕೊಂಡು ಕ್ಷೇತ್ರದ ಜನತೆಯೇ ತಂದೆಯಾಗಿ ಎಂದು ಭಾವಿಸಿರುವ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಅವರನ್ನು ಗೆಲ್ಲಿಸಿ ಎಂದು ಮನವಿ ಮಾಡಿದರು. ಈ ವೇಳೆ ಗ್ರಾಪಂ ಅಧ್ಯಕ್ಷ ಸಿದ್ದರಾಜು, ಸದಸ್ಯ ಪಾಂಡು ಸೇರಿದಂತೆ ಇತರರಿದ್ದರು.

ಸಿದ್ದರಾಮಯ್ಯರಿಂದ ವರುಣದಲ್ಲಿ ಅಭಿವೃದ್ಧಿ ಪರ್ವ

11ನೇ ವಾರ್ಡ್‌ನಲ್ಲಿ ಮತಯಾಚಿಸಿದ ಪುರಸಭಾಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ



ತಿ.ನರಸೀಪುರ, ಮೇ 7– ಜನತೆ ನೀಡಿದ ಅಧಿಕಾರದಿಂದ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ವರುಣ ಕ್ಷೇತ್ರಕ್ಕೆ 2 ಸಾವಿರ ಕೋಟಿ ರೂ. ಅನುದಾನ ನೀಡುವ ಮೂಲಕ ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವವನ್ನೇ ಮಾಡಿದ್ದಾರೆ ಎಂದು ಪುರಸಭಾಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ತಿಳಿಸಿದರು.

ಪಟ್ಟಣದ 11ನೇ ವಾರ್ಡ್‌ನ ಇಂದಿರಾ ಕಾಲೋನಿಯಲ್ಲಿ ಮನೆ–ಮನೆಗೆ ತೆರಳಿ ಮತಯಾಚಿಸಿ, ಮತದಾರರಿಗೆ ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಡ್‌ಗಳನ್ನು ವಿತರಿಸಿ ಮಾತನಾಡಿದ ಅವರು, ಕಳೆದ 40 ವರ್ಷಗಳಿಂದ ಬಡವರು, ಶೋಷಿತರ ಪರವಾಗಿ ಹೋರಾಟ ಮಾಡಿಕೊಂಡು ಬಂದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೆಲುವಿಗೆ ಕ್ಷೇತ್ರದ ವಾರ್ಡ್‌ನ ಜನತೆ ಸಹಕರಿಸಿ ಎಂದರು.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಬಡವರಿಗೆ ತೆರಿಗೆ ಹಣ ತಲುಪಿಸುವ ಕೆಲಸ ಮಾಡಲಾಗುತ್ತಿತ್ತು. ಹಾಗಾಗಿ ಈ ಬಾರಿಯೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದ್ದು, ಗೃಹಜ್ಯೋತಿ ಯೋಜನೆಯಡಿ ಪ್ರತಿ ಕುಟುಂಬಕ್ಕೆ 200 ಯೂನಿಟ್ ಉಚಿತ ವಿದ್ಯುತ್, ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ತಿಂಗಳು ಮನೆ ಯಜಮಾನಿಗೆ 2000 ರೂ. ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಕುಟುಂಬದ ಪ್ರತಿ ವ್ಯಕ್ತಿಗೆ 10 ಕೆಜಿ ಅಕ್ಕಿ ಕೊಡಲಾಗುತ್ತದೆ. ಯುವ ನಿಧಿ ಯೋಜನೆಯಲ್ಲಿ ಪ್ರತಿ ತಿಂಗಳು ನಿರುದ್ಯೋಗ ಪದವೀ ಧರರಿಗೆ 3 ಸಾವಿರ ಹಾಗು ಡಿಪ್ಲೋಮಾ ಪದವಿಧರರಿಗೆ 1500 ರೂ.ಗಳ ಭತ್ಯೆ ನೀಡಲು ಉದ್ದೇಶಿಸಲಾಗಿದ್ದು, ಇದನ್ನು ಸಾಕಾರಗೊಳಿಸಲು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವಂತೆ ಹೇಳಿದರು.

ಸಿದ್ದರಾಮಯ್ಯನವರು ಬಡ ಜನರ ಅನುಕೂಲಕ್ಕಾಗಿ ಅನೇಕ ಉಪಯುಕ್ತ ಯೋಜನೆಗಳನ್ನು ಜಾರಿಗೆ ತಂದು ದೀನ ದಲಿತರು, ಶೋಷಿತ ವರ್ಗದವರ ಹಿತ ಕಾಪಾಡಿದ್ದಾರೆ. ಹಾಗಾಗಿ ಈಗ ಮತ್ತೊಮ್ಮೆ ಚುನಾವಣೆಗೆ ಸ್ಪರ್ಧಿಸಿದ್ದು, ಈ ಹಿಂದೆ ನೀಡಿದ ಸಹಕಾರ, ಪ್ರೀತಿ ವಿಶ್ವಾಸವನ್ನು ತೋರಿಸಿ ಅವರನ್ನು ಗೆಲ್ಲಿಸಿಕೊಡುವಂತೆ ಮನವಿ ಮಾಡಿದರು.

ಈ ವೇಳೆ ಸವಿತಾ ಸಮಾಜದ ಅಧ್ಯಕ್ಷ ನಾಗೇಂದ್ರ ಮುಖಂಡರಾದ ಪಾಪಣ್ಣ, ಹೈದರಾಲಿ, ಮುನ್ನ, ರಂಗಸ್ವಾಮಿ, ವಿನೋದ, ಕೃಷ್ಣ, ರಾಮಣ್ಣ, ಮಹದೇವ, ನಂಜಯ್ಯ, ಶಾಂತ, ರಾಮು, ನಂದನ್, ಅಸ್ಲಾಂ ಪಾಷ, ಅಕ್ಬರ್ ಶೇಕ್, ಇಂತಿಯಾಜ್, ಸೋಮಣ್ಣ, ಕಾಂತರಾಜ ಅರಸ್, ನವೀನ, ದೇವರಾಜು, ಸಮಿವುಲ್ಲಾ, ಇಫ್ರಾನ್, ಸಂಜು, ಆನಂದ, ಮೋಹನ್, ನಂಜುಂಡಸ್ವಾಮಿ, ಪೂಜಾರ್ ರೇವಣ್ಣ ಮತ್ತಿತರಿದ್ದರು.

ಭ್ರಷ್ಟ ಬಿಜೆಪಿ ಸರ್ಕಾರ ಕಿತ್ತೊಗೆಯಲು ಜನ ತೀರ್ಮಾನಿಸಿದ್ದಾರೆ



ವಿಪಕ್ಷ ನಾಯಕ ಸಿದ್ದರಾಮಯ್ಯ

ಸರಗೂರು, ಮೇ 7–ರಾಜ್ಯದ ಭ್ರಷ್ಟಾಚಾರ, ಕಮಿಷನ್ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಲು ಜನ ತೀರ್ಮಾನಿಸಿದ್ದಾರೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಜಯಚಾಮರಾಜೇಂದ್ರ ಕ್ರೀಡಾಂಗಣದಲ್ಲಿ ನಡೆದ ಚುನಾವಣೆ ಪ್ರಚಾರ ಸಭೆಯಲ್ಲಿ ಅನಿಲ್ ಚಿಕ್ಕಮಾದು ಪರ ಮತಯಾಚಿಸಿ ಮಾತನಾಡಿದ ಅವರು, ಬಿಜೆಪಿ ಆಡಳಿತಾವಧಿಯಲ್ಲಿ ರಾಜ್ಯದಲ್ಲಿ ಕಮಿಷನ್ ದಂಧೆ, ಭ್ರಷ್ಟಾಚಾರ ಹೆಚ್ಚಾಗಿದೆ. ಇದರಿಂದ ಸಿಎಂ ಬೊಮ್ಮಾಯಿ ನೇತೃತ್ವದ ಸರ್ಕಾರದ ಮೇಲೆ ಜನರಿಗೆ ನಂಬಿಕೆ ಇಲ್ಲದಾಗಿದೆ. ಹೀಗಾಗಿ ರಾಜ್ಯದ ಜನತೆ ಬದಲಾವಣೆ ಬಯಸಿದ್ದು, ಈ ಬಾರಿ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಲಿದ್ದಾರೆ. ಹೀಗಾಗಿ ಕ್ಷೇತ್ರದಲ್ಲೂ ಕಾಂಗ್ರೆಸ್ ಬೆಂಬಲಿಸುವ ಮೂಲಕ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಮತ ನೀಡಬೇಕು ಎಂದು ಮನವಿ ಮಾಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಅವಧಿಯಲ್ಲಿ ಮಾಡಿರುವ ಸಾಧನೆಗಳ ಬಗ್ಗೆ ಬಹಿರಂಗ ಚರ್ಚೆಗೆ ಬರಲಿ. ನಾನು ಸಿಎಂ ಆಗಿದ್ದಾಗ ಮಾಡಿದ ಸಾಧನೆಗಳನ್ನು ಬಹಿರಂಗಪಡಿಸುತ್ತೇನೆ ಎಂದು ಸವಾಲು ಹಾಕಿದರು. ಕಾಂಗ್ರೆಸ್ ಪಕ್ಷ ಜನ ಸಾಮಾನ್ಯರಿಗೆ ಅನುಕೂಲವಾಗುವ ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿದೆ.

ಅನಿಲ್ ಚಿಕ್ಕಮಾದು ಶಾಸಕರಾಗಿ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ಕ್ಷೇತ್ರದ ಅಭಿವೃದ್ಧಿಗೆ ಅನುದಾನ ನೀಡಲಾಗುವುದು ಎಂದು ಅವರು ಭರವಸೆ ನೀಡಿದರು.



ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ವಕೀಲ ಹೆಚ್.ಎಂ.ಬಸವರಾಜು ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಪರ ಮತಯಾಚಿಸಿದರು. ಈ ವೇಳೆ ಗ್ರಾಪಂ ಸದಸ್ಯರಾದ ಸೋಮಶೇಖರ್, ಸುರೇಶ್, ಮುಖಂಡರಾದ ಗ್ರಾಪಂ ಮಾಜಿ ಸದಸ್ಯ ನದೀಮ್ ಅಹ್ಮದ್, ಮಹದೇವ್ ಬಾಬು, ಜಗಜೀವನ್ ರಾಮ್ ಸಮಾಜದ ಮುಖಂಡರು ಇನ್ನಿತರರಿದ್ದರು.

ತಿ.ನರಸೀಪುರದಲ್ಲಿ ಬಿಜೆಪಿ ಅಭ್ಯರ್ಥಿ ಡಾ.ಎಂ.ರೇವಣ್ಣ ಗೆಲುವು ಖಚಿತ



ತಿ.ನರಸೀಪುರ, ಮೇ 7– ಕ್ಷೇತ್ರದ ಮತದಾರರು ಬಿಜೆಪಿ ಅಭ್ಯರ್ಥಿ, ಸರಳ ಸಜ್ಜನಿಕೆಯ ಡಾ.ಎಂ.ರೇವಣ್ಣ ಅವರ ಕೈ ಹಿಡಿಯಲಿದ್ದಾರೆ ಎಂದು ಹಿರಿಯ ಮುಖಂಡ ಎಸ್.ಶಂಕರ್ ವಿಶ್ವಾಸ ವ್ಯಕ್ತಪಡಿಸಿದರು. ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೈದ್ಯ ವೃತ್ತಿ ಮಾಡುತ್ತಿದ್ದ ರೇವಣ್ಣನವರು ರಾಜಕೀಯ ಕ್ಷೇತ್ರಕ್ಕೆ ಪ್ರವೇಶ ಮಾಡಿದ್ದಾರೆ. ಪಕ್ಷ ಅನೇಕ ವೈದ್ಯರು, ಇಂಜಿನಿಯರ್, ಲಾಯರ್‌ಗಳ ಸೇವೆ ಗುರುತಿಸಿ ಟಿಕೆಟ್ ನೀಡಿದೆ. ಸಾಮಾನ್ಯ ಕ್ಷೇತ್ರದಲ್ಲಿ ಯಾವುದೇ ಪಕ್ಷಗಳು ಪ.ಜಾತಿಯವರಿಗೆ ಟಿಕೆಟ್ ನೀಡುವುದು ಅಪರೂಪ. ಆದರೆ ಬಿಜೆಪಿ ಪಕ್ಷ ಆ ಕೆಲಸ ಮಾಡುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಿಕೊಟ್ಟಿದೆ ಎಂದರು.

ಡಾ.ರೇವಣ್ಣ ರಾಜಕೀಯಕ್ಕೆ ಹೊಸಬರಾದರೂ ಜನತೆ ಬದಲಾವಣೆ ಬಯಸಿರುವುದರಿಂದ ಅವರ ಗೆಲುವು ಖಚಿತ. ಕಳೆದ 15 ವರ್ಷಗಳಿಂದ ಕ್ಷೇತ್ರದಲ್ಲಿ ನಮ್ಮ ಪಕ್ಷದ ಅಭ್ಯರ್ಥಿ ಗೆಲ್ಲದೇ ಪಕ್ಷದ ಕಾರ್ಯಕರ್ತರು ಅನಾಥರಾಗಿದ್ದಾರೆ. ಅಲ್ಲದೇ ಪಕ್ಷ ಸಂಘಟನೆ ಸಹ ಕುಂಠಿತಗೊಂಡಿದೆ. ಪಕ್ಷವನ್ನು ಮತ್ತೆ ಸಧೃಡಗೊಳಿಸಲು ಈ ಬಾರಿ ಜನಪ್ರಿಯ ವೈದ್ಯ ಡಾ.ರೇವಣ್ಣರನ್ನು ಪಕ್ಷ ಅಭ್ಯರ್ಥಿಯನ್ನಾಗಿಸಿದೆ. ಹಾಗಾಗಿ ಅವರ ಗೆಲುವಿಗೆ ಈಗಾಗಲೇ ಕ್ಷೇತ್ರದಲ್ಲಿ ಪೂರಕ ವಾತಾವರಣ ನಿರ್ಮಾಣವಾಗಿದೆ. ಹೋದಲ್ಲೆಲ್ಲಾ ಅಭೂತ ಪೂರ್ವ ಸ್ವಾಗತ ವ್ಯಕ್ತವಾಗುತ್ತಿದೆ. ಜನರು ಸ್ವಯಂಪ್ರೇರಿತರಾಗಿ ಪ್ರಚಾರ ಮಾಡುತ್ತಿದ್ದು ಚುನಾವಣೆಯಲ್ಲಿ ರೇವಣ್ಣ ಜಯ ಸಾಧಿಸುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.

ರಾಜ್ಯದ ಬಡವರ ಏಳಿಗೆಗಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕಿದೆ

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಬನ್ನೂರು, ಮೇ 7– ಕ್ಷೇತ್ರದ ಅಭಿವೃದ್ಧಿ ಹಾಗೂ ರಾಜ್ಯದ ಬಡಜನರ ಏಳಿಗೆಗಾಗಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕಿದೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ತಿ.ನರಸೀಪುರ ಕ್ಷೇತ್ರ ವ್ಯಾಪ್ತಿಯ ಸೋಸಲೆ ಗ್ರಾಮದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಹೊರತುಪಡಿಸಿ ಯಾವುದೇ ಪಕ್ಷದವರು ನಿಮಗೆ ಸಹಾಯ ಮಾಡಲ್ಲ. ಬೇರೆ ಯಾರೂ ಕ್ಷೇತ್ರದ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕಾಂಗ್ರೆಸ್ ಬೆಂಬಲಿಸಿ ಎಂದರು.

ಅಂಬೇಡ್ಕರ್ ಹೇಳಿದ ರೀತಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನಾನು ಹೋರಾಟ ಮಾಡುತ್ತಿದ್ದೇವೆ. ಕಾಂಗ್ರೆಸ್ ಪಕ್ಷಕ್ಕೆ ಬಡಜನರ ರಕ್ಷಣೆ ಇದೆ. ಈ ಮಾತು ಕೆಲವರಿಗೆ ಇಷ್ಟ ಆಗಬಹುದು. ಆಗದಿರಬಹುದು. ಆದರೆ ಇಂದು ರಾಜ್ಯದ ಜನತೆಗೆ ಕಾಂಗ್ರೆಸ್ ಅನಿವಾರ್ಯವಾಗಿದೆ. ರಾಜಕೀಯ ಉದ್ದೇಶ ಜನತೆಯ ಮುಖದಲ್ಲಿ ನಗು ನೋಡಬೇಕೆಂಬುದಾಗಿದ್ದು, ಎಲ್ಲ ಬಡವರು ಸ್ವಾಭಿಮಾನದಿಂದ ಬದುಕಬೇಕೆಂಬ ಉದ್ದೇಶ ಹೊಂದಲಾಗಿದೆ. ರಾಜಕೀಯ ಅಧಿಕಾರ ಕೇಳುವುದು ಅದಕ್ಕಾಗಿಯೇ ಎಂದರು.

ಗ್ರಾಮದ ಯುವಕರು ಒಬ್ಬರ ಬಗ್ಗೆ ಒಬ್ಬರು ಅನುಮಾನ ಪಡಬೇಡಿ. ಸಾಮೂಹಿಕ ನಾಯಕತ್ವದಲ್ಲಿ ಊರನ್ನು ಕಟ್ಟೋಣ. ಜನರ ಅಭಿವೃದ್ಧಿ ಮಾಡೋಣ. ಯಾರೂ ಕೂಡ ಗುಡಿಸಲಿನಲ್ಲಿದ್ದೇನೆ. ಮನೆ ಇಲ್ಲ ಎಂಬ ಸಂಕಷ್ಟದಿಂದ ಹೊರತರುವ ಕೆಲಸ ಮಾಡೋಣ. ಈ ಹಿಂದೆ 5 ಸಾವಿರ ಮನೆ ಕೊಟ್ಟಿದ್ದೇನೆ. ಯುವಕರು ಸ್ವತಂತ್ರವಾಗಿ ಸ್ವಾಭಿಮಾನದಿಂದ ಬದುಕಬೇಕೆಂಬ ಆಶಯ ಹೊಂದಿದ್ದೇನೆ. ಗ್ರಾಮದ ಅಭಿವೃದ್ಧಿಗಾಗಿ ಎಲ್ಲರೂ ಕುಳಿತು ಆರೋಗ್ಯಕರ ಚರ್ಚೆ ಮಾಡೋಣ. ಅನುಮಾನಕ್ಕೆ ಆಸ್ಪದ ನೀಡುವುದು ಬೇಡ. ಅನುಮಾನವಿದ್ದರೆ ನನ್ನನ್ನೇ ನೇರವಾಗಿ ಸಂಪರ್ಕ ಮಾಡಿ ಎಂದು ತಿಳಿಸಿದರು.

ಸೋಸಲೆ ಗ್ರಾಮದ ಬಗ್ಗೆ ವಿಶೇಷ ಪ್ರೀತಿ ಇದೆ. ಈ ಹಿಂದೆ ಸೀಪೇಜ್ ಮಾಡಿಕೊಟ್ಟಿದ್ದೆ. ಅಂಬೇಡ್ಕರ್ ಭವನ ಮಾಡಿಕೊಟ್ಟಿದ್ದೆ. ಅದರ ಉದ್ಘಾಟನೆಗೆ ನಾನೇ ಬರುತ್ತೇನೆ. ಮುಂದಿನ 5 ವರ್ಷಗಳಲ್ಲಿ ಎಲ್ಲಾ ಕೆಲಸಗಳನ್ನು ಮಾಡಿಕೊಡುತ್ತೇನೆ ಎಂದು ಭರವಸೆ ನೀಡಿದರು.

ಜೆಡಿಎಸ್ ಕುಟುಂಬ ಪಕ್ಷ: ಜೆಡಿಎಸ್ ಒಂದು ಕುಟುಂಬಕ್ಕೆ ಸೀಮಿತವಾದ ಪಕ್ಷ. ಅದು ಎಂದಿಗೂ ಅಧಿಕಾರಕ್ಕೆ ಬರಲ್ಲ. ಕ್ಷೇತ್ರದಲ್ಲಿ ಆ ಪಕ್ಷ ಅಧಿಕಾರಕ್ಕೆ ಬಂದು 5 ವರ್ಷವಾಯ್ತಲ್ಲ. ಏನಾದ್ರು ಅಭಿವೃದ್ಧಿ ಆಗಿದೆಯಾ ಎಂದು ಪ್ರಶ್ನಿಸಿದರು.

> ಸಿದ್ದರಾಮಯ್ಯ ರಾಜ್ಯ ಕಂಡ ಧೀಮಂತ ನಾಯಕರು. ರಾಜ್ಯದ ಜನತೆಗೆ ಅವರ ಕೊಡುಗೆ ಅಪಾರ. ಬಡವರ ಆಶಾಕಿರಣವಾಗಿದ್ದ ಅವರು ಅನ್ನಭಾಗ್ಯ, ಇಂದಿರಾ ಕ್ಯಾಂಟೀನ್, ಕ್ಷೀರ ಭಾಗ್ಯ ಸೇರಿದಂತೆ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು ಜನತೆಯ ಕಷ್ಟ ಸುಖಗಳಿಗೆ ಸ್ಪಂದಿಸುವ ಕೆಲಸ ಮಾಡಿದ್ದಾರೆ. ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ಅವಕಾಶ ದೊರೆಯಲಿದ್ದು, ತಿ.ನರಸೀಪುರ ಕ್ಷೇತ್ರವನ್ನು ಸಾವಿರಾರು ಕೋಟಿ ರೂ. ವೆಚ್ಚದಲ್ಲಿ ಸಮಗ್ರವಾಗಿ ಅಭಿವೃದ್ಧಿ ಪಡಿಸಿರುವ ಡಾ.ಹೆಚ್.ಸಿ.ಮಹದೇವಪ್ಪರವರನ್ನು ಗೆಲ್ಲಿಸುವ ಮೂಲಕ ಸಿದ್ದರಾಮಯ್ಯ ರವರ ಕೈ ಬಲಪಡಿಸಿ.
> –ಬಿ.ಎಂ.ನಟರಾಜು, ಪಾಲಿಕೆ ಮಾಜಿ ಸದಸ್ಯ.

ಸಭೆಯಲ್ಲಿ ಸೋಸಲೆ ಪಿಎಸಿಎಸ್ ಅಧ್ಯಕ್ಷ ಪರಶಿವಮೂರ್ತಿ, ಮಾಜಿ ಜಿಪಂ ಸದಸ್ಯ ಹೊನ್ನ ನಾಯಕ, ಮಹದೇವಸ್ವಾಮಿ, ಸುಧಾ ಮಹದೇವಯ್ಯ, ಎಪಿಎಂಸಿ ಮಾಜಿ ಅಧ್ಯಕ್ಷ ರಾಜಣ್ಣ, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಗ್ರಾಪಂ ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ವಾಟಾಳ್ ನಾಗೇಶ್, ಡೈರಿ ನಿಂಗಯ್ಯ, ವೆಂಕಟರಮಣ, ಮಹದೇವಶೆಟ್ಟಿ, ಜಯರಾಂ, ಮೋಹಿನ್ ಖಾನ್, ಇದ್ದರು.

ಸಮಾಜ ಸೇವೆಯೇ ನನ್ನ ಗೆಲುವಿಗೆ ಶ್ರೀರಕ್ಷೆ: ಬಿಜೆಪಿ ಅಭ್ಯರ್ಥಿ ಕೃಷ್ಣನಾಯಕ



ಸರಗೂರು, ಮೇ 7– ತಾಲೂಕಿನಲ್ಲಿ ನಾನು ಮಾಡಿರುವ ಸಮಾಜ ಸೇವೆಯೇ ನನ್ನ ಗೆಲುವಿಗೆ ಶ್ರೀರಕ್ಷೆಯಾಗಲಿದೆ ಎಂದು ಬಿಜೆಪಿ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ತಿಳಿಸಿದರು.

ತಾಲೂಕಿನ ಸಾಗರೆ, ಆಗತ್ತೂರು ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿ ಮಾತನಾಡಿದ ಅವರು, ಯಾವುದೇ ಸ್ವಾರ್ಥವಿಲ್ಲದೇ ಸಮಾಜ ಸೇವೆ ಮಾಡಿದ ನನಗೆ ಜೆಡಿಎಸ್ ಪಕ್ಷ ಟಿಕೆಟ್ ನೀಡುವುದಾಗಿ ನಂಬಿಸಿ ಮೋಸ ಮಾಡಿತು. ಆದರೆ ಬಿಜೆಪಿ ನನ್ನ ಸಮಾಜ ಸೇವೆ, ತಾಲೂಕಿನಲ್ಲಿ ನನ್ನ ಬಗ್ಗೆ ಇದ್ದ ಜನಾಭಿಪ್ರಾಯ ನೋಡಿ ಟಿಕೆಟ್ ನೀಡಿದೆ. ತಾಲೂಕಿನ ಜನರು ಆ ನಂಬಿಕೆ ಸುಳ್ಳು ಮಾಡದೆ ಬಾರಿ ಅಂತರದಲ್ಲಿ ಗೆಲ್ಲಿಸುತ್ತಾರೆ ಎಂದು ಮನವಿ ಮಾಡಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದು ಖಚಿತ. ಅದೇ ರೀತಿ ತಾಲೂಕಿನಲ್ಲಿ ಬಿಜೆಪಿ ಮೊದಲ ಬಾರಿಗೆ ಜಯಭೇರಿ ಬಾರಿಸಲಿದೆ. ನಾನು ಆಯ್ಕೆಯಾದ ನಂತರ ಮೊದಲ ಕೆಲಸವೇ ತಾಲೂಕಿನಲಿ ಕೈಗಾರಿಕೆ ಸ್ಥಾಪನೆ ಮಾಡಿ ನಿರುದ್ಯೋಗ ಸಮಸ್ಯೆ ಬಗೆಹರಿಸಿ, ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡುತ್ತೇನೆ ಎಂದರು.

ತಾಲೂಕಿನಲ್ಲಿ ಬಿಜೆಪಿ ಕಡೆ ಜನರು ಹೆಚ್ಚು ಒಲವು ತೋರುತ್ತಿದ್ದು, ಅದೇ ರೀತಿ ಮುಖಂಡರು ಹಾಗೂ ಕಾರ್ಯಕರ್ತರು ಹುಮ್ಮಸ್ಸಿನಿಂದ ಪ್ರಚಾರದಲ್ಲಿ ಭಾಗಿಯಾಗಿ ನನ್ನ ಗೆಲುವಿಗೆ ಶ್ರಮಿಸುತ್ತಿದ್ದಾರೆ. ಪ್ರಚಾರಕ್ಕೆ ಹೋದ ಕಡೆ ನನಗೆ ಉತ್ತಮ ಪ್ರತಿಕ್ರಿಯೆ ನೀಡುತ್ತಿದ್ದು, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷವನ್ನು ಈ ಬಾರಿ ತಿರಸ್ಕರಿಸಿ ಬಿಜೆಪಿ ಪಕ್ಷಕ್ಕೆ ಮತ ನೀಡಲಿದ್ದಾರೆ ಎಂದು ತಿಳಿಸಿದರು.

ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಗುರುಸ್ವಾಮಿ, ಮುಖಂಡ ಮಹೇಂದ್ರ, ಶಂಕರ್, ಗ್ರಾಪಂ ಮಾಜಿ ಸದಸ್ಯ ಮಹದೇವಗೌಡ, ಜವರಯ್ಯ, ಸಿದ್ದಯ್ಯ, ಮಂಜೇಗೌಡ, ಬಸವರಾಜು, ಶಿವಪ್ಪ, ಶಿವರಾಮೇಗೌಡ, ರಾಜೇಗೌಡ, ರಾಮಚಂದ್ರ, ವೆಂಕಟೇಶ್, ಮಹೇಶ್, ಚನ್ನನಾಯಕ, ಪಿಎಲ್‌ಡಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ದಾಸಪ್ಪ, ಸತೀಶ್, ರವಿ, ಪ್ರಕಾಶ್ ಪಕ್ಷದ ಕಾರ್ಯಕರ್ತರು ಹಾಜರಿದ್ದರು.



ಮೂಗೂರಿನ ಶ್ರೀ ದೇಶೇಶ್ವರಸ್ವಾಮಿ ಹಾಗೂ ಪಾರ್ವತಿ ಅಮ್ಮನವರ ದೇವಾಲಯದಲ್ಲಿ ಗಿರಿಜಾ ಕಲ್ಯಾಣ ಅಂಗವಾಗಿ ಶಯನೋತ್ಸವ ವಿಜೃಂಭಣೆಯಿಂದ ನಡೆಯಿತು. ಈ ವೇಳೆ ದೇವಾಲಯದ ಅರ್ಚಕರಾದ ಅಜೇಯ್ ಶಾಸ್ತ್ರಿ, ಆನಂದ್ ದೀಕ್ಷಿತ್, ಗ್ರಾಮಸ್ಥರಿದ್ದರು.

ಸಂಸದ ಪ್ರತಾಪ್ ಸಿಂಹರೊಂದಿಗೆ ಪ್ರಧಾನಿ ಮೋದಿ ಸಮಾಲೋಚನೆ...



ಭಾನುವಾರ ನಂಜನಗೂಡು ಚುನಾವಣಾ ಪ್ರಚಾರ ವೇದಿಕೆಯಲ್ಲಿ ಸಂಸದ ಪ್ರತಾಪ್ ಸಿಂಹ ಅವರೊಂದಿಗೆ ಪ್ರಧಾನಿ ಮೋದಿ ಹಲವು ವಿಚಾರಗಳ ಸಂಬಂಧ ಸಮಾಲೋಚನೆ ನಡೆಸಿದರು. ಪ್ರಧಾನಿ ಹಾಗೂ ಸಂಸದರ ನಡುವಿನ ಈ ಚರ್ಚೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ತೀವ್ರ ಕುತೂಹಲ ಮೂಡಿಸಿತ್ತು.

ಸಹಜ ಸ್ಥಿತಿಗೆ ಮರಳಿದ ಮಣಿಪುರ, ಕರ್ಫ್ಯೂ ಸಡಿಲಿಕೆ

ಇಂಫಾಲ್: ಕಳೆದ ಕೆಲವು ದಿನಗಳಿಂದ ರಕ್ತಸಿಕ್ತ ಜನಾಂಗೀಯ ಗಲಭೆಗೆ ಸಾಕ್ಷಿಯಾಗಿದ್ದ ಮಣಿಪುರದಲ್ಲಿ ಭಾನುವಾರ ಕರ್ಫ್ಯೂ ಸಡಿಲಿಸಲಾಗಿದ್ದು, ಸೇನಾ ಡ್ರೋನ್‌ಗಳ ವೈಮಾನಿಕ ಕಾವಲು ಮತ್ತು ಹೆಲಿಕಾಪ್ಟರ್‌ಗಳ ಕಾವಲು ಅಡಿಯಲ್ಲಿ ಜನಜೀವನ ಸಹಜ ಸ್ಥಿತಿಗೆ ಮರಳುತ್ತಿದೆ. ಗಲಭೆ ಪೀಡಿತ ಚುರಚಂದ್ಪುರ ಪಟ್ಟಣದಲ್ಲಿ ಇಂದು ಬೆಳಗ್ಗೆ 7 ರಿಂದ 10 ಗಂಟೆಯವರೆಗೆ ಕರ್ಫ್ಯೂ ಸಡಿಲಿಕೆ ಮಾಡಲಾಗಿದ್ದು, ಈ ಅವಧಿಯಲ್ಲಿ ಜನ ಆಹಾರ, ಔಷಧಿಗಳು ಮತ್ತು ಇತರ ಅಗತ್ಯ ವಸ್ತುಗಳನ್ನು ಖರೀದಿಸಲು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದು ಕಂಡುಬಂದಿದೆ.

ಇಂದು ಸಂಜೆ 6 ಗಂಟೆಗೆ ಚುನಾವಣಾ ಬಹಿರಂಗ ಪ್ರಚಾರ ಅಂತ್ಯ

ಮೈಸೂರು, ಮೇ 7(ಆರ್‌ಕೆ)–ಮೇ 10ರಂದು ನಡೆಯಲಿರುವ ವಿಧಾನಸಭಾ ಸಾರ್ವತ್ರಿಕ ಚುನಾವಣೆಯ ಬಹಿರಂಗ ಪ್ರಚಾರ ಸೋಮವಾರ (ಮೇ 8) ಸಂಜೆ 6 ಗಂಟೆಗೆ ಅಂತ್ಯಗೊಳ್ಳಲಿದೆ.

ಈ ಕುರಿತು ಮೈಸೂರು ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ಪತ್ರಿಕಾ ಪ್ರಕಟಣೆ ನೀಡಿದ್ದು, ಮತದಾನ ಅಂತ್ಯಗೊಳ್ಳುವ 48 ಗಂಟೆ ಮೊದಲು ಎಲ್ಲಾ ರೀತಿಯ ಚುನಾವಣಾ ಬಹಿರಂಗ ಪ್ರಚಾರವನ್ನು ಮೇ 8ರಂದು ಸಂಜೆ 6 ಗಂಟೆಯೊಳಗೆ ಮುಕ್ತಾಯಗೊಳಿಸಬೇಕೆಂದು ತಿಳಿಸಿದ್ದಾರೆ.

ನಂತರ ಮನೆ–ಮನೆಗೆ ತೆರಳಿ ಪ್ರಚಾರ ಮಾಡಬಹುದು. ಆದರೆ ಟೆಲಿವಿಷನ್, ರೇಡಿಯೋ, ಕೇಬಲ್ ನೆಟ್‌ವರ್ಕ್‌ನಂತಹ ಮಾಧ್ಯಮಗಳಲ್ಲಿ ಚುನಾವಣಾ ವಿಷಯದ ಚರ್ಚೆ, ಪ್ರಚಾರ, ಸಂದರ್ಶನ, ಜಾಹೀರಾತು ಅಥವಾ ಅಭಿಪ್ರಾಯಗಳನ್ನು ಪ್ರಸಾರ ಮಾಡುವಂತಿಲ್ಲ. ಮೇ 9 ಮತ್ತು 10ರಂದು ಪತ್ರಿಕಾ ಮಾಧ್ಯಮದಲ್ಲಿ ರಾಜಕೀಯ ಜಾಹೀರಾತು ನೀಡಬೇಕಾದಲ್ಲಿ ಎಂಸಿಎಂಸಿ ತಂಡದಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು ಎಂದು ಅವರು ತಿಳಿಸಿದ್ದಾರೆ.

ಹೊರಗಿನವರು ಹಾಗೂ ಕ್ಷೇತ್ರದ ಮತದಾರರಲ್ಲದವರು ಮೇ 8ರ ಸಂಜೆ 6 ಗಂಟೆಯೊಳಗಾಗಿ ಕ್ಷೇತ್ರ ಬಿಡಬೇಕು. ಅದೇ ರೀತಿ ಮೇ 8ರ ಸಂಜೆ 6 ಗಂಟೆಯಿಂದ ಮೇ 10ರ ಮಧ್ಯರಾತ್ರಿವರೆಗೆ ಹಾಗೂ ಮತ ಎಣಿಕೆ ದಿನದಂದು ಮದ್ಯ ಮಾರಾಟ ನಿಷೇಧ ಮಾಡಲಾಗಿದೆ. ಆ ಅವಧಿಯಲ್ಲಿ ಎಲ್ಲಾ ಹೋಟೆಲ್, ರೆಸ್ಟೋರೆಂಟ್, ಮದ್ಯದಂಗಡಿಗಳಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ.

ಕಡ್ಡಾಯವಾಗಿ ಮತ ಚಲಾಯಿಸಿ: ವಸಿಷ್ಠ ಸಿಂಹ



ಮೈಸೂರು, ಮೇ 7(ಎಸ್‌ಪಿಎನ್)–ಕರ್ನಾಟಕ ವಿಧಾನ ಸಭೆಗೆ ಈ ಬಾರಿ ಚುನಾವಣಾ ಆಯೋಗ 80 ವರ್ಷ ಮೇಲ್ಪಟ್ಟವರಿಗೆ ಮನೆಯಲ್ಲಿಯೇ ಮತ ಚಲಾಯಿಸುವ ವ್ಯವಸ್ಥೆ ಕಲ್ಪಿಸಿರುವುದು ಉತ್ತಮ ಬೆಳವಣಿಗೆ ಎಂದು ಚಿತ್ರ ನಟ ವಸಿಷ್ಠ ಸಿಂಹ ಅಭಿಪ್ರಾಯಪಟ್ಟರು.

ಮೈಸೂರಿನ ಚಾಮುಂಡಿಪುರಂ ನಲ್ಲಿರುವ ವಸಿಷ್ಠ ಸಿಂಹ ಮತ್ತು ಹರಿಪ್ರಿಯಾ ದಂಪತಿ ಮನೆಗೆ ಬಿಜೆಪಿ ಕಾರ್ಯಕರ್ತರು, ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಪರವಾಗಿ ಭಾನುವಾರ ಮತಯಾಚನೆ ಮಾಡಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದರು.

ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರು ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಅವಕಾಶವಿದೆ ಹಾಗೂ ಮತದಾನ ಪ್ರತಿಯೊಬ್ಬ ಸಾರ್ವಜನಿಕರ ಹಕ್ಕು. 18 ವರ್ಷ ಮೇಲ್ಪಟ್ಟ ಯುವ ಸಮೂಹ ಮೊದಲ ಬಾರಿಗೆ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಉತ್ಸಾಹ ನೋಡಿದರೆ, ತುಂಬಾ ಸಂತೋಷವಾಗುತ್ತಿದೆ ಎಂದರು.

ಹಾಗೆಯೇ ಮನೆಮಂದಿಯೆಲ್ಲರೂ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ಈ ಬಾರಿ ಚುನಾವಣಾ ಆಯೋಗ 80 ವರ್ಷ ಮೇಲ್ಪಟ್ಟವರು ಮನೆಯಲ್ಲಿಯೇ ಮತ ಚಲಾಯಿಸುವ ವ್ಯವಸ್ಥೆ ಕಲ್ಪಿಸಿರುವುದು ಉತ್ತಮ ಕೆಲಸ. ಅಲ್ಲದೆ, ಚುನಾವಣಾ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆರಕ್ಷಕರಿಗೆ, ಶಿಕ್ಷಕರಿಗೆ ಮತ ಚಲಾಯಿಸಲು ನೀಡಿರುವ ಅಂಚೆ ಮತದಾನ ಪ್ರಕ್ರಿಯೆ ಮಾದರಿಯಲ್ಲೇ ಮುಂದಿನ ದಿನಗಳಲ್ಲಿ ರಾಜ್ಯದ ವಿವಿಧೆಡೆ ಕೆಲಸ ಮಾಡುವ ಪತ್ರಿಕಾರಂಗ, ದೃಶ್ಯ ಮಾಧ್ಯಮ ವರದಿಗಾರರು, ಛಾಯಾಗ್ರಾಹಕರು, ಪತ್ರಕರ್ತರಿಗೂ ಸಹ ಅಂಚೆ ಮತದಾನ ಅವಕಾಶ ಕಲ್ಪಿಸಲು ಮುಂದಾಗಬೇಕು ಎಂದು ಚುನಾವಣಾ ಆಯೋಗಕ್ಕೆ ಮನವಿ ಮಾಡಿದರು.

ಈ ವೇಳೆ ಬಿಜೆಪಿ ಹಿಂದುಳಿದ ವರ್ಗಗಳ ಅಧ್ಯಕ್ಷ ಜೋಗಿ ಮಂಜು, ಬಿಜೆಪಿ ಮುಖಂಡರಾದ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಲಿಂಗರಾಜು, ಶರತ್ ಭಂಡಾರಿ, ಗುರುಪ್ರಸಾದ್, ಕುಮಾರ್, ಕಾರ್ತಿಕ್, ಆಶ್ರಿತ್ ಇದ್ದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ: ಮಾವಿನಹಳ್ಳಿ ಸಿದ್ದೇಗೌಡ



ಮೈಸೂರು, ಮೇ 7–ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್‌ನಲ್ಲಿ ಘೋಷಿಸಿರುವ ಯೋಜನೆಗಳನ್ನು ಜಾರಿಗೊಳಿಸಲಿದ್ದಾರೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಹೇಳಿದರು.

ಜಯಪುರ ಗ್ರಾಮದಲ್ಲಿ ಪ್ರಚಾರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಹಾಲಿ ಶಾಸಕರು ಕೋವಿಡ್ ಸಂದರ್ಭದಲ್ಲಿ ಜನರ ರಕ್ಷಣೆಗೆ ಬರಲಿಲ್ಲ. ಹಲವಾರು ಮಂದಿ ಕೋವಿಡ್‌ನಿಂದ ಮೃತಪಟ್ಟರೂ ಸಾಂತ್ವನ ಹೇಳಿಲ್ಲ. ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು ಕುಂಠಿತಗೊಂಡಿದ್ದು, ಕ್ಷೇತ್ರದ ಅಭಿವೃದ್ಧಿಗಾಗಿ ತಮ್ಮನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಜಯಪುರ ಗ್ರಾಮದಲ್ಲಿ ಮಹಿಳೆಯರು ಸಿದ್ದೇಗೌಡರಿಗೆ ಪೂರ್ಣಕುಂಭ ಸ್ವಾಗತ ನೀಡಿದರು. ಸಿದ್ದೇಗೌಡರು ಗ್ರಾಮ ದೇವತೆ ಗುಜ್ಜಮ್ಮ ತಾಯಿ ಸಿದ್ದಪ್ಪಾಜಿ ರಸ್ತೆಯ ಮಂಟೇಸ್ವಾಮಿ ದೇವಾಲಯ ಮತ್ತು ಬಸವೇಶ್ವರ ದೇವಾಲಯಕ್ಕೆ ತೆರಳಿ, ವಿಶೇಷ ಪೂಜೆ ಸಲ್ಲಿಸಿದ ನಂತರ ಮನೆ–ಮನೆಗೆ ತೆರಳಿ, ಮತ ಯಾಚಿಸಿದರು.

ಇಂದು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಪ್ರಚಾರ

ಮೈಸೂರು, ಮೇ 7–ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ (ಮೇ 8) ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡರ ಪರ ಮತ ಯಾಚನೆ ಮಾಡಲಿದ್ದಾರೆ.

ಅಂದು ಮಧ್ಯಾಹ್ನ 2 ಗಂಟೆಗೆ ಉದ್ಬೂರು ಮತ್ತು ಜಯಪುರ ಗ್ರಾಮಗಳಲ್ಲಿ ರೋಡ್ ಶೋ ನಡೆಸಿ ಸಿದ್ದೇಗೌಡರ ಪರ ಮತ ಯಾಚಿಸಿದ ನಂತರ ಮಧ್ಯಾಹ್ನ 3 ಗಂಟೆಗೆ ಜಯಪುರ ಗ್ರಾಮದ ದೇವಮ್ಮ ಪಟೇಲ್ ಚಿಕ್ಕ ಅಂಕೇಗೌಡ ಕಲ್ಯಾಣ ಮಂಟಪದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಕುರುಬ ಸಮುದಾಯದ ಮುಖಂಡರ ಸಭೆ ನಡೆಸಲಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ ತಿಳಿಸಿದ್ದಾರೆ.

ಈ ವೇಳೆ ಕೆಪಿಸಿಸಿ ಸದಸ್ಯ ಕೆ.ಮರೀಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಸೋಲಿಗರ ಕಾಲೋನಿ ನಾಗರಾಜು, ಮೂಗನಾಯಕ, ಮಹಮ್ಮದ್ ಅಲಿ, ಕೆಇಬಿ ಲೋಕೇಶ್, ಕೆಂಪಯ್ಯ, ರಮೇಶ, ಶಿವಕುಮಾರ, ಮಾಧು, ರಾಮಸ್ವಾಮಿ, ಬೋರೇಗೌಡ, ಚಂದ್ರ ಇನ್ನಿತರರಿದ್ದರು.

ಮಲಪ್ಪುರಂನಲ್ಲಿ ಪ್ರಯಾಣಿಕರ ದೋಣಿ ಪಲ್ಟಿ: 11 ಮಂದಿ ಸಾವು, ಹಲವರು ನಾಪತ್ತೆ

ಮಲಪ್ಪುರಂ: ಪ್ರವಾಸಿಗರನ್ನು ಹೊತ್ತೊಯ್ಯುತ್ತಿದ್ದ ದೋಣಿಯೊಂದು ಪಲ್ಟಿಯಾಗಿ 11 ಮಂದಿ ಸಾವನ್ನಪ್ಪಿರುವ ಘಟನೆ ಮಲಪ್ಪುರಂನ ತಾನೂರ್ ತೂವಲ್ತಿರಾದಲ್ಲಿ ನಡೆದಿದೆ. ಮಕ್ಕಳು, ಮಹಿಳೆಯರು ಹಾಗೂ ಪುರುಷರು ಸೇರಿದಂತೆ 11 ಮಂದಿ ಸಾವನ್ನಪ್ಪಿದ್ದಾರೆ. ಇನ್ನು ಹಲವು ಮಂದಿ ಗಾಯಗೊಂಡಿದ್ದಾರೆ. ದೋಣಿಯಲ್ಲಿ 20ಕ್ಕೂ ಹೆಚ್ಚು ಮಂದಿ ಇದ್ದರು ಎನ್ನಲಾಗಿದ್ದು ಇನ್ನು ರಕ್ಷಣಾ ಕಾರ್ಯಾಚರಣೆ ಪ್ರಗತಿಯಲ್ಲಿದೆ.

ಪ್ರವಾಸೋದ್ಯಮದ ಅಂಗವಾಗಿ ಪುರಪುಳದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ದೋಣಿ ಇಂದು ಸಂಜೆ 7 ಗಂಟೆ ಸುಮಾರಿಗೆ ಅಪಘಾತಕ್ಕೀಡಾಗಿದೆ. ದೋಣಿ ಮಗುಚಿ ಬಿದ್ದಿದ್ದು ಇದರಿಂದ ಅಪಘಾತದ ಪ್ರಮಾಣ ಹೆಚ್ಚಿದೆ.

ರಜಾ ದಿನವಾಗಿದ್ದರಿಂದ ಇಲ್ಲಿಗೆ ಕುಟುಂಬ ಸಮೇತ ಹಲವರು ಬೋಟಿಂಗ್‌ಗೆ ಆಗಮಿಸಿದ್ದರು. ರಕ್ಷಿಸಲ್ಪಟ್ಟವರನ್ನು ಪರಪ್ಪನಂಗಡಿ ಮತ್ತು ತನೂರಿನ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ರಾತ್ರಿಯಾಗಿರುವುದರಿಂದ ರಕ್ಷಣಾ ಕಾರ್ಯಕ್ಕೆ ತೊಂದರೆಯಾಗುತ್ತಿದೆ.

ಪೊಲೀಸರು, ಅಗ್ನಿಶಾಮಕ ದಳ ಹಾಗೂ ಸ್ಥಳೀಯರ ನೇತೃತ್ವದಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಮೃತ ಇಬ್ಬರ ಮೃತದೇಹಗಳನ್ನು ತಿರುರಂಗಡಿ ತಾಲೂಕು ಆಸ್ಪತ್ರೆಗೆ ರವಾನಿಸಲಾಗಿದೆ.

Format C-1 (For candidate to publish in Newspapers, TV)

Declaration about criminal cases

(As per the Judgement dated 25th, September - 2018, of Hon'ble Supreme Court in WP (Civil) No. 536 of 2011 (Public Interest Foundation & Ors. Vs Union of India & Anr)

Name and address of candidate: S Siddegowda S/o Late G Siddegowda, No 50, Mavinahalli Jayapura Post and Hobli, Mysore-570008

Name of political party : Indian National Congress (Independent candidates should write "Independent" here)

Name of Election : Karnataka State Legislative Assembly General Elections May-2023

***Name of Constituency:** 215 - Chamundeshwari.

I, **S Siddegowda** (name of candidate), a candidate for the above mentioned election, declare for public information the following details about my criminal antecedents:

(A) Pending criminal cases

Sl. No.	Name of Court	Case No. and dated	Status ofcase(s)	Section(s) of Acts concerned And brief description of offence(s)
1.	II JMFC court Mysore	Case No: 46/2023 13-4-2023	FIR	IPC 1860(U/S 171H,188)
2.	5th JMFC court Malalavadi, Jayanagara, Mysore	Case No: 64/2023 09-04-2023	FIR	Religious institutions (prevention of misuse) ACT,1988(U/S 3,6,7)
3.	II JMFC Court Mysore	Case No: 113/2021 15-06-2021	Evidence	IPC 1860(U/S 324,504,506,34)

(B) Details about cases of conviction for criminal offences

Sl.no.	Name of Court & date(s) of order(s)	Description of offence(s) & punishment imposed	Maximum Punishment Imposed
NO	NO	NO	NO
NO	NO	NO	NO
NO	NO	NO	NO

*In the case of election to Council of States or election to Legislative Council by MLAs, mention the election concerned in place of name of constituency.

ಜಿ. ಲೋಕೇಶ್ ಕುಮಾರ್ ರವರು

2023ರ ವಿಧಾನಸಭಾ ಚುನಾವಣೆಯ ನರಸಿಂಹರಾಜ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಾಮ ಪತ್ರ ಸಲ್ಲಿಸಿದ್ದಾರೆ. ಇವರ ಕೆಲವು ಪ್ರಕರಣಗಳು ವಿಚಾರಣೆ ಹಂತದಲ್ಲಿವೆ

(ಎ)	ಸಂಬಂಧ ಪಟ್ಟ ಪೊಲೀಸ್ ಠಾಣೆಯ ಹೆಸರು ಮತ್ತು ವಿಳಾಸದೊಂದಿಗೆ ಎಫ್.ಐ.ಆರ್.ಸಂಖ್ಯೆ	ಮಂಡಿ ಮೊಹಲ್ಲಾ ಸ್ಟೇಷನ್, ಮೈಸೂರು ಸಿ.ಸಿ.ನಂ.1752/2013	ದೇವರಾಜ ಪೊಲೀಸ್ ಠಾಣೆ, ಮೈಸೂರು ಸಿ.ಸಿ.ನಂ.281/2020	ಲಷ್ಕರ್ ಮೊಹಲ್ಲಾ ಮೈಸೂರು ಎಸ್.ಸಿ.ನಂ.207/2019
(ಬಿ)	ನ್ಯಾಯಾಲಯದ ಹೆಸರಿನೊಂದಿಗೆ ಪ್ರಕರಣದ ಸಂಖ್ಯೆ	ಪ್ರಿನ್ಸಿಪಲ್ ಸಿವಿಲ್ ಜಡ್ಜ್ ಅಂಡ್ ಜೆ.ಎಂ.ಎಫ್.ಸಿ ಮೈಸೂರು	4ನೇ ಜೆ.ಎಂ.ಎಫ್.ಸಿ ಮೈಸೂರು	7ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು
(ಸಿ)	ಇವಕ್ಕೆ ಸಂಬಂಧಪಟ್ಟ ಅಧಿನಿಯಮಗಳು/ ಸಂಹಿತೆಗಳು ಪ್ರಕರಣಗಳು (ಪ್ರಕರಣದ ಸಂಖ್ಯೆಯನ್ನು ನೀಡಿರಿ) ಉದಾಹರಣೆಗೆ ಐಪಿಸಿಯ – ಪ್ರಕರಣ ಇತ್ಯಾದಿ)	143,144,147,148, 447,427,353, 504,114,149 of I.P.C	143,147,427,149 of I.P.C	341,323,447, 395 of I.P.C

ಸಹಿ/– ಜಿ.ಲೋಕೇಶ್‌ಕುಮಾರ್, ಪಕ್ಷೇತರ ಅಭ್ಯರ್ಥಿ ನರಸಿಂಹರಾಜ ವಿಧಾನಸಭಾಕ್ಷೇತ್ರ, ಮೈಸೂರು